ಏಪ್ರಿಲ್ 2017 ಸಂಚಿಕೆ – 9 ಸಂಪುಟ – 32

# ಯೋಜನಾ

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಪುನೀತಾ ಎಸ್.**

ಹಿರಿಯ ಸಂಪಾದಕಿ
**ಬಿ.ಕೆ. ಕಿರಣ್ಮಯಿ**

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ ........ 2

ಭಾರತದಲ್ಲಿ ಶ್ರಮಿಕರ ವಸ್ತುಸ್ಥಿತಿ ........ 3
* **ಪ್ರವೀಣ್ ಝಾ**

ಕಾರ್ಮಿಕ ಸುಧಾರಣೆ; ಸವಾಲು ಮತ್ತು ಅವಕಾಶ ........ 6
* **ಶ್ರೀರಂಗ ಝಾ**

ಅನೌಪಚಾರಿಕ ಕಾರ್ಮಿಕ ಮಾರುಕಟ್ಟೆ ........ 9
* **ಎ. ಸೃಜಾ**

ಕಾರ್ಮಿಕ ನೀತಿ ಮತ್ತು ಕಲ್ಯಾಣ–ವಿಶ್ಲೇಷಣೆ ........ 13
* **ಪ್ರದೀಪ್ ಅಗರ್‌ವಾಲ್**

ಲಿಂಗ ಸಂವೇದಿ ನ್ಯಾಯ ........ 18
* **ನೀತಾ ಎನ್.**

ಬಾಲ ಕಾರ್ಮಿಕತೆ ನಿವಾರಣೆ ........ 22
* **ಹೆಲೆನ್ ಆರ್. ಸೆಕರ್**

ಹೆರಿಗೆ ಸೌಲಭ್ಯ ಹೆಚ್ಚಳ : ಐದು ದಶಕಗಳ ಹಳೆಯ ಕಾನೂನಿಗೆ ತಿದ್ದುಪಡಿ ........ 25
* **ಸಿ. ಜಿ. ಮಂಜುಳಾ**

ಕರ್ನಾಟಕ ಬಜೆಟ್ 2017–18 ........ 27

ರಾಜ್ಯ ಮುಂಗಡ ಪತ್ರದ ನೂತನ ಕಾರ್ಯಕ್ರಮಗಳು ........ 48
* **ಡಾ. ನೇ. ತಿ. ಸೋಮಶೇಖರ್**

ನಿಮಗಿದು ತಿಳಿದಿದೆಯೇ? ........ 51

ವಾರ್ತಾ ವಿಶೇಷ ........ 52

ಮುಖಪುಟ ವಿನ್ಯಾಸ : ಗಜಾನನ ಪಿ. ದೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 230.00 |
| ಎರಡು ವರ್ಷಗಳಿಗೆ | 430.00 |
| ಮೂರು ವರ್ಷಗಳಿಗೆ | 610.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.**

**ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್**
Log on to
http://publicationsdivision.nic.in/,
in collaboration with bharatkosh.gov.in

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

ಮುಖ್ಯ ಸಂಪಾದಕರ ಲೇಖನಿಯಿಂದ

# ಗೌರವಯುತ ದುಡಿಮೆ




ಯಾವುದೇ ದೇಶದ ಪ್ರಗತಿ ಮತ್ತು ಅಭಿವೃದ್ಧಿಯನ್ನು ವ್ಯಾಖ್ಯಾನಿಸುವ ಸಾಮರ್ಥ್ಯ, ದುಡಿಯುವ ಕಾರ್ಮಿಕ ಕಾರ್ಯ ಪಡೆಗಿದೆ. ಯಾವುದೇ ಆರ್ಥಿಕ ಚಟುವಟಿಕೆಯಲ್ಲಿ ಕಾರ್ಮಿಕರ ಪಾತ್ರ ಮಹತ್ತರವಾಗಿದೆ. ಈ ಹಿನ್ನೆಲೆಯಲ್ಲಿ ಕಾರ್ಮಿಕ ಕಲ್ಯಾಣ ಕಾರ್ಯಕ್ರಮ ನಿರೂಪಣೆ, ನೀತಿ ನಿರೂಪಕರಿಗೆ ಒಂದು ಸವಾಲಿನ ಕೆಲಸವಾಗಿದೆ. ಗೌರವಯುತವಾಗಿ ಕಾರ್ಯ ನಿರ್ವಹಿಸಲು ಅಗತ್ಯವಾದ ಪರಿಸರ ನಿರ್ಮಾಣ, ಕಾರ್ಮಿಕ ಶಕ್ತಿಯ ಸಮೃದ್ಧ, ನೆಮ್ಮದಿಯ ಬದುಕನ್ನು ಖಾತರಿಪಡಿಸುವ ವಾತಾವರಣ ಸೃಷ್ಟಿ ಮೊದಲಾದವು ಸವಾಲುಗಳಲ್ಲಿ ಸೇರಿವೆ.

ಭಾರತೀಯ ಕಾರ್ಮಿಕ ಮಾರುಕಟ್ಟೆಯಲ್ಲಿ ಸಂಘಟಿತ ಹಾಗೂ ಅಸಂಘಟಿತ ರಂಗಗಳ ನಡುವೆ ಅಪಾರ ಅಂತರವಿದೆ. ಸಂಘಟಿತ ಕ್ಷೇತ್ರದ ಕಾರ್ಮಿಕರು ತಮ್ಮ ಹಕ್ಕು ಸಂರಕ್ಷಣೆಗಳಿಗಾಗಿ ಹೋರಾಟ ಮಾಡಲು ಶಕ್ತರಾಗುವ ಕಠಿಣ ಕಾನೂನು ಮತ್ತು ನೀತಿ ನಿಯಮಾವಳಿಗಳ ಸಂರಕ್ಷಣೆ ಹೊಂದಿದ್ದಾರೆ. ಆದರೆ, ಈ ವರ್ಗದ ಕಾರ್ಮಿಕರ ಸಂಖ್ಯೆ ಅತಿ ಕಡಿಮೆ. ಅಸಂಘಟಿತ ಕ್ಷೇತ್ರದ ಕಾರ್ಮಿಕರ ಸಂಖ್ಯೆ ಅಪಾರವಾಗಿದ್ದು ಇವರಲ್ಲಿ ಬಹುತೇಕರಿಗೆ, ಖಾಯಂ ಕೆಲಸ ಹೋಗಲಿ, ನಿಯಮಿತ ಅಥವಾ ನಿಗದಿತ ಕೆಲಸವಿಲ್ಲ. ಸಾಮಾಜಿಕ ರಕ್ಷಣೆಯೂ ಇಲ್ಲ. ಸಂಘಟಿತ ಅಥವಾ ಅಸಂಘಟಿತ, ಔದ್ಯೋಗಿಕ ಅಥವಾ ಕೃಷಿ, ಅಲೆಮಾರಿ ಅಥವಾ ಸ್ಥಿರ ಸ್ಥಾನ ಹೀಗೆ ಯಾವುದೇ ವರ್ಗದ ಕಾರ್ಮಿಕರು ಎದುರಿಸುವ ಸಮಸ್ಯೆ – ಸವಾಲು ವಿಶಿಷ್ಟವಾಗಿಯೇ ಇವೆ. ಅಸಂಘಟಿತ ಕಾರ್ಮಿಕರು, ನಗರ ಪ್ರದೇಶಗಳಲ್ಲಿ ಸಿರಿವಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿಸಲು ಸಂಕಷ್ಟಪಡುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಅಸಂಘಟಿತ ಕಾರ್ಮಿಕರು, ಭೂ ಮಾಲಿಕರ ಕೈ ಕೆಳಗೆ ಕಡಿಮೆ ಹಣಕ್ಕಾಗಿ ಬೆವರು ಸುರಿಸುತ್ತಾರೆ. ಅಸಂಘಟಿತ ಎನ್ನುವ ಶಬ್ದವೇ ಕಡಿಮೆ ಕೂಲಿ, ಕೆಟ್ಟ ಕಾರ್ಯ ಪರಿಸರ, ಅನಿಶ್ಚಿತ ದುಡಿಮೆಯ ಪ್ರತೀಕವಾಗಿದೆ. ವಲಸೆ ಕಾರ್ಮಿಕರು, ತಮ್ಮ ಕುಟುಂಬ, ವಸ್ತು, ಸರಕು ಸರಂಜಾಮುಗಳೊಂದಿಗೆ ಅಲೆದಾಡುತ್ತಾ, ಕೆಲಸ ಅರಸಿ ತಮ್ಮ ಹುಟ್ಟೂರಿನಿಂದ ಬಹುದೂರ ಸಾಗುತ್ತಾರೆ; ಕಟ್ಟಡ ಕೆಲಸ, ರಸ್ತೆ ಕಾಮಗಾರಿಯ ಹಾಗೂ ಮನೆ ಕೆಲಸದ ಕಾರ್ಮಿಕರಾಗಿ ಕಾಣಸಿಗುತ್ತಾರೆ. ಈ ಕ್ಷೇತ್ರದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಿದ್ದರೂ ಅವರ ಕೆಲಸಕ್ಕೆ ಮನ್ನಣೆ ಇಲ್ಲವೇ ಇಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ.

ಭಾರತ, 2025ರ ವೇಳೆಗೆ ವಿಶ್ವದಲ್ಲೆ ಅತಿ ದೊಡ್ಡ ಶ್ರಮಿಕ ಶಕ್ತಿ ಹೊಂದಿದ ದೇಶವಾಗಲು ಸನ್ನದ್ಧವಾಗಿದೆ. ಈ ನಿಟ್ಟಿನಲ್ಲಿ ಕಾರ್ಮಿಕ ಹಿತಾಸಕ್ತಿ ವಿಷಯಕ್ಕೆ ಆದ್ಯಗಮನ ಅಗತ್ಯವೆನಿಸಿದೆ. ಈ ಹಿನ್ನೆಲೆಯಲ್ಲಿ ಔದ್ಯಮಿಕ ವಿವಾದ ಕಾಯ್ದೆ, ಕನಿಷ್ಠ ವೇತನ ಕಾಯ್ದೆ, ಗುತ್ತಿಗೆ ಕಾರ್ಮಿಕ ಕಾಯ್ದೆ ಮೊದಲಾದ ಕಾರ್ಮಿಕ ಹಿತಾಸಕ್ತಿ ಕಾಯ್ದೆಗಳನ್ನು ತರಲಾಗಿದೆ.

ಬೋನಸ್ ಪಾವತಿ (ತಿದ್ದುಪಡಿ) ವಿಧೇಯಕ 2015, ನೌಕರರ ಪರಿಹಾರ (ತಿದ್ದುಪಡಿ) ವಿಧೇಯಕ 2016, ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ತಿದ್ದುಪಡಿ ವಿಧೇಯಕ 2016 – ಇತ್ತೀಚೆಗೆ ಕೈಗೊಳ್ಳಲಾದ ಕ್ರಮಗಳಾಗಿವೆ. ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಇಲಾಖೆ, ಕೇಂದ್ರೀಯ ಕಾರ್ಮಿಕ ಕಾನೂನುಗಳನ್ನು ಸರಳಗೊಳಿಸುವ, ಸಮಗ್ರಗೊಳಿಸುವ ಕ್ರಮಗಳನ್ನು ಕೈಗೊಳ್ಳುತ್ತಿದೆ. ವೇತನ ವಿಧೇಯಕ 2015 ಕುರಿತಾದ ಕಾರ್ಮಿಕ ಸಂಹಿತೆ, ಔದ್ಯಮಿಕ ಸಂಬಂಧದ ವಿಧೇಯಕ 2015 ಕುರಿತಾದ ಕಾರ್ಮಿಕ ಸಂಹಿತೆ, ಸಾಮಾಜಿಕ ಸುರಕ್ಷತೆ, ಕಲ್ಯಾಣ, ಕುರಿತಾದ ಕಾರ್ಮಿಕ ಸಂಹಿತೆ, ವೃತ್ತಿ ಸಂಬಂಧಿ ಸುರಕ್ಷತೆ ಆರೋಗ್ಯ ಹಾಗೂ ಕಾರ್ಯ ಪರಿಸರ ಕುರಿತಾದ ಕಾರ್ಮಿಕ ಸಂಹಿತೆ – ಹೀಗೆ ನಾಲ್ಕು ಸಂಹಿತೆಗಳಿಂದ ಅವುಗಳನ್ನು ಬದಲಿಸಲಾಗುತ್ತದೆ. ಮನರೇಗಾ, ಅಟಲ್ ಪಿಂಚಣಿ ಯೋಜನೆ, ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ್ ಯೋಜನೆ, ಮುದ್ರಾ, ಪ್ರಧಾನ ಮಂತ್ರಿ ರೋಜ್‌ಗಾರ್ ಪ್ರೋತ್ಸಾಹನ್ ಯೋಜನೆ – ಮೊದಲಾದ ಕಾರ್ಯಕ್ರಮಗಳನ್ನು ಪ್ರಸ್ತುತ ಹಾಗೂ ಭಾವೀ ಕಾರ್ಮಿಕ ಕಾರ್ಯ ಪಡೆಯ ಸಾಮಾಜಿಕ ಮತ್ತು ಆರ್ಥಿಕ ಕಲ್ಯಾಣ ದೃಷ್ಟಿಯಿಂದ ಕೈಗೊಳ್ಳಲಾಗಿದೆ.

ಸರ್ಕಾರ, ಭಾರತವನ್ನು ಇಡಿ ಜಗತ್ತಿನಲ್ಲೆ ಅತಿ ದೊಡ್ಡ ಬಂಡವಾಳ ಹೂಡಿಕೆಯ ಹಾಗೂ ತಯಾರಿಕಾ ತಾಣವನ್ನಾಗಿಸಲು ಬದ್ಧವಾಗಿದೆ. ಈ ನಿಟ್ಟಿನಲ್ಲಿ ಕಾರ್ಮಿಕ ಸುಧಾರಣೆಗಳನ್ನು ಸಮಗ್ರ ರೂಪದಲ್ಲಿ ತರಲು ಪ್ರಯತ್ನಿಸಲಾಗುತ್ತಿದೆ. ತನ್ಮೂಲಕ ಕಾರ್ಮಿಕ ಕಲ್ಯಾಣ ಕ್ರಮಗಳು ನಿಜವಾದ ಅರ್ಥದಲ್ಲಿ ಅವರನ್ನು ತಲುಪುವಂತಾದರೆ, ಆರ್ಥಿಕ ಬೆಳವಣಿಗೆಗೆ ಅವರೂ ಹೃತ್ಪೂರ್ವಕ ಕೊಡುಗೆ ನೀಡುವಂತಾಗುತ್ತಾರೆ. ❑

ಕೈಲಾಸ

# ಭಾರತದಲ್ಲಿ ಶ್ರಮಿಕರ ವಸ್ತುಸ್ಥಿತಿ

* ಪ್ರವೀಣ್ ಝಾ



ಅಸಂಘಟಿತ ಉದ್ಯೋಗ ಕ್ಷೇತ್ರದಲ್ಲಿರುವ ಕೆಲಸಗಾರರಿಗೆ ಅವರು ಕೆಲಸ ಮಾಡುವ ಪರಿಸರದ ಸ್ಥಿತಿಯನ್ನು ಸುಧಾರಿಸಿ ಗೌರವಾನ್ವಿತವಾಗಿ ಬದುಕಲು ಅನುಕೂಲವಾಗುವಂತಹ ಸಾಮಾನ್ಯವಾದ ಸಾಮಾಜಿಕ ಭದ್ರತೆಯನ್ನು ತುರ್ತಾಗಿ ಒದಗಿಸುವ ಕೆಲಸ ಆಗಬೇಕಾಗಿದೆ. ಪೌಷ್ಟಿಕಾಂಶ, ಪೂರೈಕೆ ಶೌಚಾಲಯ ಸೌಲಭ್ಯಗಳು, ಆರೋಗ್ಯ ಮತ್ತು ಶಿಕ್ಷಣಗಳಂತಹ ಮೂಲಭೂತ ಸೇವೆಗಳನ್ನು ಒದಗಿಸುವ ವ್ಯವಸ್ಥೆಯನ್ನು ವಿಸ್ತರಿಸುವ ಕೆಲಸವೂ ಆಗಬೇಕಾಗಿದೆ.

ಸಾಕಷ್ಟು ಪ್ರಮಾಣದ ಉದ್ಯೋಗ ಲಭ್ಯತೆ ಮತ್ತು ಅದರ ಗುಣಮಟ್ಟ, ಜಾಗತಿಕ ಮಟ್ಟದಲ್ಲಿ ಒಂದು ಸವಾಲಾಗಿ ಪರಿಗಣಿಸಲ್ಪಟ್ಟಿದ್ದು, ಇತ್ತೀಚಿನ ವರ್ಷಗಳಲ್ಲಿ ಭಾರತವೂ ಈ ನಿಟ್ಟಿನಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್ಓ) 2016 ರ ಉದ್ಯೋಗ ಮತ್ತು ಸಾಮಾಜಿಕ ದೃಷ್ಟಿಯ ವರದಿಯಲ್ಲಿ "ಕಡಿಮೆ ಗುಣಮಟ್ಟದ ಉದ್ಯೋಗ ವಿಶ್ವದಲ್ಲಿ ಗಹನವಾದ ಸಮಸ್ಯೆಯಾಗಿದೆ" ಎಂದು ಹೇಳಿದೆ. ತಮ್ಮ ಕೆಲಸವನ್ನು ಹಂಚಿಕೊಂಡು ಕುಟುಂಬದ ಉದ್ಯೋಗಕ್ಕೆ ಕೊಡುಗೆ ನೀಡುವ ಪ್ರವೃತ್ತಿ ಜಾಗತೀಕರಣಕ್ಕಿಂತ ಮೊದಲಿದ್ದ ಅನಿಶ್ಚಿತತೆಯನ್ನು ಕಡಿಮೆ ಮಾಡಿದೆ. ಈ ಅನಿಶ್ಚಿತತೆ ವಿಶ್ವದ 1.5 ಬಿಲಿಯನ್ ಜನರು ಅಥವಾ ಶೇಕಡಾ 46 ರಷ್ಟು ಉದ್ಯೋಗವನ್ನು ಒಳಗೊಂಡಿದೆ. ಈ ಅನಿಶ್ಚಿತತೆಯಲ್ಲಿ ದಕ್ಷಿಣ ಏಶಿಯಾ ಮತ್ತು ಉಪ ಸಹಾರಾ ಆಫ್ರಿಕಾದ ಶೇಕಡಾ 70 ರಷ್ಟು ಕೆಲಸಗಾರರು ಸೇರಿದ್ದಾರೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ವರದಿಯ ಪ್ರಕಾರ ಮುಂದಿನ ಎರಡು ವರ್ಷಗಳಲ್ಲಿ ವಿಶ್ವದ ಕಾರ್ಯ ಪಡೆಗೆ 24 ಮಿಲಿಯನ್ ನಿರುದ್ಯೋಗಿಗಳು ಸೇರುತ್ತಾರೆ. ಇವರಲ್ಲಿ 2017 ರ ವೇಳೆಗೆ ಭಾರತದವರು 17.6 ಮಿಲಿಯನ್ ಅಥವಾ ದಕ್ಷಿಣ ಏಶಿಯಾದ ಶೇಕಡಾ 60 ರಷ್ಟು ಆಗಿರುತ್ತಾರೆ. ಭಾರತದಲ್ಲಿ ಉದ್ಯೋಗವನ್ನು ಸೃಷ್ಟಿಸುವುದು ಮತ್ತು ಆ ಉದ್ಯೋಗ ಸಹನೀಯವಾಗಿರುಂತೆ ನೋಡಿಕೊಳ್ಳುವ ನೀತಿ ನಿಯಮಗಳನ್ನು ರೂಪಿಸುವುದು ಸ್ವಾತಂತ್ರ್ಯ ಬಂದಾಗಿನಿಂದ ಅದರಲ್ಲೂ ಇತ್ತೀಚಿನ ವರ್ಷಗಳಲ್ಲಿ ಒಂದು ಸವಾಲಿನ ಕೆಲಸವಾಗಿದೆ. ಈ ಎಲ್ಲ ಅಂಕಿ ಅಂಶಗಳು ಪ್ರಸಕ್ತ ಭಾರತದ ಕಾರ್ಮಿಕ ಕ್ಷೇತ್ರದ ಸ್ಥಿತಿಯನ್ನು ವಿವರಿಸುತ್ತವೆ.

### ಪ್ರಸಕ್ತ ಸನ್ನಿವೇಶದಲ್ಲಿ ಕೆಲಸಗಾರರ ಭಾಗವಹಿಸುವಿಕೆ ಮತ್ತು ಉದ್ಯೋಗದ ಸವಾಲುಗಳು

ಭಾರತದ ಸುಮಾರು 1.3 ಬಿಲಿಯನ್ ಜನಸಂಖ್ಯೆ (ವಿಶ್ವ ಜನಸಂಖ್ಯೆಯ ಆರನೇ ಒಂದು ಭಾಗ) ಯಲ್ಲಿ ಶೇಕಡಾ 70 ರಷ್ಟು ಜನರು ಗ್ರಾಮಗಳಲ್ಲಿ ವಾಸಿಸುತ್ತಾರೆ, ಶೇಕಡಾ 40 ರಿಂದ 45 ರಷ್ಟು ಕೆಲಸ ಮಾಡುವವರಾಗಿದ್ದಾರೆ. ಈ ಅನುಪಾತ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಹಾಗೇ ಮುಂದುವರೆದಿದೆ. ಉದ್ಯೋಗ ಜಾತಿ, ಧರ್ಮ, ಲಿಂಗ, ಪ್ರಾಂತ್ಯ ಮತ್ತಿತರ ಆಧಾರಗಳ ಮೇಲೆ ಹರಿದು ಹಂಚಿ ಹೋಗಿದೆ. ಇದು ವಿವಿಧ ಗುಂಪುಗಳ ಕಾರ್ಮಿಕರನ್ನು ಚಲನರಹಿತರನ್ನಾಗಿದ್ದು, ಮುಖ್ಯವಾಗಿ ಮಹಿಳೆಯರು, ದೊಡ್ಡ ಪ್ರಮಾಣದ ಕೂಲಿ ವ್ಯತ್ಯಾಸ ಮತ್ತು ತಾರತಮ್ಯ ಮುಂತಾದ ಅನೇಕ ಸಮಸ್ಯೆ ಎದುರಿಸುತ್ತಿದ್ದಾರೆ. ಉದಾಹರಣೆಗೆ ಕಾರ್ಮಿಕರಲ್ಲಿ ಮಹಿಳೆಯರ ಪ್ರಮಾಣ ಯಾವಾಗಲೂ ಪುರುಷರಿಗಿಂತ ಶೇಕಡಾ 20 ರಷ್ಟು ಕಡಿಮೆಯಾಗಿರುತ್ತದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ದೇಶದಲ್ಲಿ ಮಹಿಳಾ ಕಾರ್ಮಿಕರ ಪಡೆ ಪ್ರಮಾಣ ಶೇಕಡಾ 25 ರಿಂದ 30 ರಷ್ಟಿದ್ದು, ಇದರಲ್ಲಿ ಸಾಮಾಜಿಕ–ಆರ್ಥಿಕವಾಗಿ ವಿಭಾಗಗಳು, ವಿವಿಧ ರಾಜ್ಯಗಳು ಮತ್ತು ನಗರ ಮತ್ತು ಗ್ರಾಮೀಣ ಪ್ರದೇಶ ಎಂದು ವಿಂಗಡಿಸಲ್ಪಟ್ಟಿದೆ (2011 ರ ಮುಜಂದಾರ್ ಮತ್ತು ಪಿಳ್ಳೈ ವರದಿ). ಐಎಲ್ಓ ದ 2016 ರ ಮಹಿಳೆ ಮತ್ತು ಕೆಲಸ ಎಂಬ ವರದಿಯ ಪ್ರಕಾರ, ಲಿಂಗ ತಾರತಮ್ಯದಲ್ಲಿ ಕೂಲಿಯ ವ್ಯತ್ಯಾಸ ವಿಶ್ವದಲ್ಲೆ ಭಾರತದಲ್ಲಿ ಅತಿ ಹೆಚ್ಚಾಗಿದ್ದು ಅದರ ಪ್ರಮಾಣ ಶೇಕಡಾ 26 ರಷ್ಟಿದೆ. ಈ ಪ್ರಮಾಣ ಏಶಿಯಾದ ದೇಶಗಳ ಪ್ರಮಾಣ

* ಅರ್ಥಶಾಸ್ತ್ರ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ಮತ್ತು ಯೋಜನೆ ಕೇಂದ್ರ ನವದೆಹಲಿ. E-mail : praveenjha2005@gmail.com



ಶೇ. 23 ಕ್ಕಿಂತ ಹೆಚ್ಚಾಗಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಲಿಂಗ ಕೂಲಿ ಅಂತರ ಶೇಕಡಾ 15 ಕ್ಕೂ ಕಡಿಮೆ ಇದೆ.

ಭಾರತದ ಕಾರ್ಮಿಕ ಕ್ಷೇತ್ರದ ಬಹು ಮುಖ್ಯವಾದ ಅಂಶವೇನೆಂದರೆ, ಕೃಷಿಯನ್ನು ಹೆಚ್ಚಾಗಿ ಅವಲಂಬಿಸಿರುವುದು, ಒಟ್ಟಾರೆ ಪ್ರಮಾಣದ ಅರ್ಧದಷ್ಟು ಕಾರ್ಮಿಕರು ಈ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಇತ್ತೀಚಿನ ಅಂದಾಜುಗಳ ಪ್ರಕಾರ ದೇಶದ ಜಿಡಿಪಿಯಲ್ಲಿ ಕೃಷಿ ಕ್ಷೇತ್ರದ ಕೊಡುಗೆ 1/6 ರಷ್ಟಿರುವುದು ಗಮನಾರ್ಹ. ಕೃಷಿ ಕ್ಷೇತ್ರದಲ್ಲಿ ಕಾರ್ಮಿಕರು ಹೆಚ್ಚಾಗಿದ್ದಾರೆ, 'ವ್ಯವಸಾಯಗಾರರು' ಕಡಿಮೆ. ಕೃಷಿಯೇತರ ಕ್ಷೇತ್ರದಲ್ಲಿ (ಕೃಷಿ ಕ್ಷೇತ್ರದ ಹಾಗೆ) ಅಸಂಘಟಿತ ಕಾರ್ಮಿಕರು ಹೆಚ್ಚಾಗಿರುವುದು ಮತ್ತೊಂದು ಪ್ರಮುಖವಾದ ಅಂಶ. ಕೃಷಿಯೇತರ ಕ್ಷೇತ್ರ ಒಟ್ಟಾರೆ ಕಾರ್ಮಿಕರಲ್ಲಿ ಶೇಕಡಾ 50 ರಷ್ಟನ್ನು ಮಾತ್ರ ಹೊಂದಿದ್ದರೂ ಜಿಡಿಪಿಗೆ ಶೇಕಡಾ 80 ರಷ್ಟು ಕೊಡುಗೆ ನೀಡುತ್ತಿದೆ. ಇದರಲ್ಲಿ ಕೇವಲ ಶೇಕಡಾ 10 ರಷ್ಟು ಮಾತ್ರ ಸಂಘಟಿತ ವಲಯದಲ್ಲಿದೆ. ಸಂಘಟಿತ ವಲಯದ ಉದ್ಯೋಗಿಗಳಲ್ಲಿ ಶೇಕಡಾ 70 ರಷ್ಟು ಸಾರ್ವಜನಿಕ ಕ್ಷೇತ್ರದಲ್ಲಿದ್ದಾರೆ (ಸಾರ್ವಜನಿಕ ಆಡಳಿತ ಮತ್ತು ಸೇನೆಯನ್ನು ಸೇರಿದಂತೆ). ಸುಮಾರಾಗಿ 29.2 ಮಿಲಿಯನ್ ಜನ ಖಾಸಗಿ ವಲಯದಲ್ಲಿ ದುಡಿಯುತ್ತಿದ್ದು, ಬಹುತೇಕ ದೊಡ್ಡ ಕಾರ್ಪೊರೇಟ್ ಉತ್ಪಾದನಾ ಕ್ಷೇತ್ರದಲ್ಲಿ ಮತ್ತು ವಿವಿಧ ಸೇವೆಗಳಲ್ಲಿದ್ದಾರೆ. ಶೇಕಡಾ 16 ರಷ್ಟು ಮಂದಿ ಸಾಂಪ್ರದಾಯಿಕ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ. ಕಾರ್ಮಿಕರ ಕ್ಷೇತ್ರವನ್ನು ಒಟ್ಟಾರೆ ಗಮನಿಸಿದರೆ, ಅಸ್ಥಿರತೆ ಮತ್ತು ಕಳವಳಕಾರಿಯಾದ ಚಿತ್ರಣ ಕಾಣುತ್ತದೆ. ಸ್ವಾತಂತ್ರ್ಯ ಬಂದಾಗಿನಿಂದಲೂ ಇರುವ ಪರಿಸ್ಥಿತಿಯಿದು. ಆದರೂ, 1990 ರ ದಶಕದಲ್ಲಿ ಜಾರಿಗೆ ಬಂದ ಆರ್ಥಿಕ ಸುಧಾರಣೆಯ ನಂತರ ಪರಿಸ್ಥಿತಿ ತುಂಬಾ ಅಸ್ಥಿರತೆಯಿಂದ ಕೂಡಿ ಕಳವಳಕಾರಿಯಾಗಿದೆ. ಈ ಅವಧಿಯಲ್ಲಿ ಭಾರತದಲ್ಲಿ ಮೇಲಿನ ಹಂತದ ಆರ್ಥಿಕ ನೀತಿ ನಿರೂಪಣೆಯಲ್ಲಿ ಆದ ಬದಲಾವಣೆ ಮತ್ತು ಪ್ರಾಥಮಿಕ ಕ್ಷೇತ್ರಗಳಲ್ಲಿ ಹೆಚ್ಚಿನ ಬಂಡವಾಳ ಹೂಡದೆ ಇರುವುದರಿಂದ ಕೃಷಿ ಕ್ಷೇತ್ರ ಸಾಕಷ್ಟು ಪ್ರಮಾಣದಲ್ಲಿ ಕಾರ್ಮಿಕರನ್ನು ಬಳಸಿಕೊಳ್ಳಲು ಸಾಧ್ಯವಾಗದೆ ಇದ್ದುದರಿಂದ ಈ ಕ್ಷೇತ್ರ ತೀವ್ರವಾದ ಸಂಕಷ್ಟವನ್ನು ಎದುರಿಸುವಂತಾಯಿತು. ಇದರಿಂದ ಕೃಷಿ ಕೆಲಸವನ್ನೇ ನಂಬಿಕೊಂಡಿದ್ದ ಕಾರ್ಮಿಕ ವರ್ಗ ತಮ್ಮ ಜೀವನವನ್ನು ನಡೆಸುವುದೇ ದುಸ್ತರವಾಗಿ ಕೃಷಿಯೇತರ ವಲಯದಲ್ಲಿ ಕೆಲಸ ಹುಡುಕಿಕೊಂಡು ವಲಸೆ ಹೋಗಬೇಕಾದ ಅನಿವಾರ್ಯ ಪರಿಸ್ಥಿತಿ ಬಂದೊದಗಿತು. ಕೃಷಿಯೇತರ ವಲಯದ ಉತ್ಪಾದನಾ ಮತ್ತು ಸೇವಾ ಕ್ಷೇತ್ರಗಳಲ್ಲಿ ಭೂರಹಿತ ಕಾರ್ಮಿಕರು ಮತ್ತು ದಿನಗೂಲಿ ಕಾರ್ಮಿಕರಿಗೆ ಗೌರವಾನ್ವಿತ ಉದ್ಯೋಗ ದೊರೆಯುವುದು ದುಸ್ತರವಾಯಿತು. 1990 ರ ದಶಕದಂದೀಚೆಗೆ ಜಿಡಿಪಿಗೆ ಉತ್ಪಾದನಾ ಕ್ಷೇತ್ರದ ಕೊಡುಗೆ ಸುಮಾರು ಶೇಕಡಾ 15 ರಿಂದ 16 ಆಜುಬಾಜಿನಲ್ಲೇ ಸ್ಥಗಿತವಾಗಿದೆ. 1990 ರ ದಶಕದಿಂದೀಚೆಗೆ ಶೇಕಡಾ 85 ರಷ್ಟು ಉತ್ಪಾದನಾ ಉದ್ದಿಮೆಗಳು ಒಬ್ಬರು ಅಥವಾ ಇಬ್ಬರು ಕೆಲಸಗಾರರನ್ನು ಮಾತ್ರ ನೇಮಿಸಿಕೊಳ್ಳುತ್ತಿದ್ದುರಿಂದ ಉದ್ಯೋಗಾಂಕ್ಷಿಗಳು ಸ್ವ ಉದ್ಯೋಗದ ಕಡೆಗೆ ವಾಲತೊಡಗಿದರು. ಹೆಚ್ಚಿನ ಆರ್ಥಿಕಾಭಿವೃದ್ಧಿಯ ಕಾಲದಲ್ಲೂ ಉದ್ಯೋಗ ಸೃಷ್ಟಿ ಹೇಳಿಕೊಳ್ಳುವಷ್ಟು ಆಗಲಿಲ್ಲ.

### ಶೋಷಣೆಯ ಹೆಚ್ಚಳ ಮತ್ತು ಅನೌಪಚಾರಿಕತೆ

2016 ರ ವಿಶ್ವ ಆರ್ಥಿಕ ಮತ್ತು ಸಾಮಾಜಿಕ ಔಟ್‌ಲುಕ್ ವರದಿಯ ಪ್ರಕಾರ ಅಭಿವೃದ್ಧಿ ಹೊಂದಿರುವ ದೇಶಗಳ ದುಡಿಯುವ ವರ್ಗದಲ್ಲಿ ಶೇಕಡಾ 12 ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಶೇಕಡಾ 46 ಮಂದಿ ಅಸಂಘಟಿತ ವಲಯದಲ್ಲಿದ್ದಾರೆ. ಈ ಅಸಂಘಟಿತ ವಲಯದಲ್ಲಿ ಶೇಕಡಾ 72 ರಷ್ಟು ಮಂದಿ ದಕ್ಷಿಣ ಏಶಿಯಾದ ದೇಶಗಳಲ್ಲಿದ್ದಾರೆ. ಭಾರತದಲ್ಲಿ ಇವರ ಸಂಖ್ಯೆ ಶೇಕಡಾ 90 ರಷ್ಟನ್ನು ದಾಟುತ್ತದೆ. ಈ ಅಂಕಿ ಅಂಶಗಳಿಂದ ಆತಂಕ ಪಡಬೇಕಾದ ವಿಷಯ ಎಂದರೆ, ಸಂಘಟಿತ ವಲಯದಲ್ಲೂ ಅಸಂಘಟಿತ ಪದ್ಧತಿ ಜಾರಿಯಾಗುತ್ತಿರುವುದು. 1999–20 ರಲ್ಲಿ ಸಂಘಟಿತ ವಲಯ ಎಂದು ಹೇಳುವ ಕಡೆ ಶೇಕಡಾ 37.8 ರಷ್ಟು ಮಂದಿ ಅಸಂಘಟಿತರಾಗಿದ್ದು 2011–12 ರಲ್ಲಿ ಆ ಪ್ರಮಾಣ ಶೇಕಡಾ 54.4 ಕ್ಕೆ ಹೆಚ್ಚಿದೆ ಎಂದು ಎನ್‌ಎಸ್‌ಎಸ್‌ಓ ದ ವರದಿ ಹೇಳಿದೆ. ವರದಿ ಪ್ರಕಾರ ಗ್ರಾಮಾಂತರ ಪ್ರದೇಶದ ಶೇಕಡಾ 97 ಮತ್ತು ನಗರ ಪ್ರದೇಶದ ಶೇಕಡಾ 98 ಸ್ವ ಉದ್ಯೋಗಿಗಳು ಅನೌಪಚಾರಿಕ ವಲಯಕ್ಕೆ ಸೇರಿದವರಾಗಿದ್ದಾರೆ. ಜೊತೆಗೆ ಗ್ರಾಮಾಂತರ ಪ್ರದೇಶದ ಶೇಕಡಾ 78 ರಷ್ಟು ನಗರ ಪ್ರದೇಶದ ಶೇಕಡಾ 81 ರಷ್ಟು ದಿನಗೂಲಿ ನೌಕರರು ಅಸಂಘಟಿತ ವಲಯಕ್ಕೆ ಸೇರಿದವರಾಗಿದ್ದಾರೆ. ಎನ್‌ಎಸ್‌ಎಸ್‌ಓ ದ 2011–12 ರ ಇತ್ತೀಚಿನ ಲಭ್ಯ ಅಂದಾಜಿನ ಪ್ರಕಾರ 484.7 ಮಿಲಿಯನ್ ಕಾರ್ಮಿಕರಲ್ಲಿ 447.2 ಮಿಲಿಯನ್ ಕೆಲಸಗಾರರು ಅನೌಪಚಾರಿಕ ವಲಯಕ್ಕೆ ಸೇರಿದವರಾಗಿದ್ದಾರೆ. ಈ ಅನೌಪಚಾರಿಕ ವಲಯದಲ್ಲಿ ಕೆಲಸ ಮಾಡುವ ಬಹುತೇಕ ಮಂದಿ ಭದ್ರತೆ ಇಲ್ಲದ ಮತ್ತು ಸಾಮಾಜಿಕ ರಕ್ಷಣೆ ಇಲ್ಲದ ಒಂದಲ್ಲ ಒಂದು ರೀತಿಯ ಶೋಷಣೆಗೆ ಒಳಗಾಗುತ್ತಿದ್ದಾರೆ. ಸುಧಾರಣಾ ಯುಗ ಪ್ರಾರಂಭವಾಗಿ ಜಿಡಿಪಿ ಬೆಳವಣಿಗೆ ಹೆಚ್ಚಿದ್ದರೂ ಅಸಂಘಟಿತ ವಲಯದಲ್ಲಿ ಕೆಲಸ ಮಾಡುವುದು ಮತ್ತು ಶೋಷಣೆಗೆ ಒಳಗಾಗುವವರ ಸಂಖ್ಯೆ ಹೆಚ್ಚಾಗುತ್ತಲೇ ಹೋಗುತ್ತಿದೆ. ಇದರ ಜೊತೆಗೆ ರಾಜ್ಯ ಸರ್ಕಾರಗಳು ಸಾಮಾಜಿಕ ಸೇವೆಯ ಕೆಲವು ವಲಯಗಳಿಂದ ಹಿಂದೆ ಸರಿದಿದ್ದರಿಂದ ಶೋಷಣೆಯ ಪರಿಸ್ಥಿತಿ ಇನ್ನೂ ಹೆಚ್ಚಾಗುತ್ತಲೇ ಹೋಗಿದೆ. ಈ ಶೋಷಣೆಯ ಪರಿಸ್ಥಿತಿ ಮುಂದುವರೆಯುತ್ತಿರುವುದರಿಂದ 1990 ರ ದಶಕದಿಂದ ಕಾಯಂ ಉದ್ಯೋಗ ಹೆಚ್ಚು ಕಡಿಮೆ ಸ್ಥಗಿತಗೊಂಡಿದೆ. ಉದಾಹರಣೆಗೆ 1987–88 ರಲ್ಲಿ ಶೇಕಡಾ 10 ರಷ್ಟಿದ್ದ ಕಾಯಂ ಪುರುಷ ಉದ್ಯೋಗಿಗಳ ಸಂಖ್ಯೆ 2009–10 ರ ವೇಳೆಗೆ ಶೇಕಡಾ 8.5 ಕ್ಕೆ ತಲುಪಿ, 2011–12 ರಲ್ಲಿ ಪುನಃ ಶೇಕಡಾ 10 ಕ್ಕೆ ಏರಿತು. ಇತ್ತೀಚಿನ ವರ್ಷಗಳಲ್ಲಿ ಸೃಷ್ಟಿಯಾಗಿರುವ ಶೇಕಡಾ 80 ರಷ್ಟು ಉದ್ಯೋಗಗಳಲ್ಲಿ ಬಹುತೇಕ ತಾತ್ಕಾಲಿಕವಾಗಿದ್ದು, ಅವುಗಳು ಹೆಚ್ಚು ಕಡಿಮೆ ನಿರ್ಮಾಣ ವಲಯದಲ್ಲಿ ಸೃಷ್ಟಿಯಾಗಿವೆ. ದುಡಿಯುವ ವರ್ಗಗಳಲ್ಲಿ ಛಿದ್ರಗೊಳ್ಳುವಿಕೆ ಹೆಚ್ಚಾಗುತ್ತಿರುವುದು ಕೆಲಸ ಮಾಡುವ ಸ್ಥಳಗಳು ಬದಲಾಗುತ್ತಿರುವುದನ್ನು ತೋರಿಸುತ್ತದೆ. ಇತ್ತೀಚಿನ ಅಂಕಿಅಂಶಗಳ ಪ್ರಕಾರ ಉತ್ಪಾದನೆಯ ವ್ಯವಸ್ಥೆ ಬದಲಾಗಿರುವುದು ಮತ್ತು ಚಿಕ್ಕದಾಗುತ್ತಿರುವುದು ಉತ್ತಮವಾದ ಕೆಲಸದ ಪರಿಸರದೊಳಗೆ ಉದ್ಯೋಗಿ ಪ್ರವೇಶಿಸುವುದರ ಮೇಲೆ ಪರಿಣಾಮ ಬೀರಿದೆ. ಸ್ವ ಉದ್ಯೋಗದ ಕಡೆಗೆ ಉಂಟಾದ ಹೆಚ್ಚಿನ ಒಲವು, ಉದ್ಯೋಗ ಮಾಡಲು



ಸಾಂಪ್ರದಾಯಿಕ ಅಥವಾ ನಿರ್ದಿಷ್ಟವಾದ ಸ್ಥಳದ ಪರಿಕಲ್ಪನೆಯನ್ನೇ ಬದಲಾಯಿಸಿತು. ಆದ್ದರಿಂದ ಈ ಹಿನ್ನೆಲೆಯಲ್ಲಿ ಕೆಲಸ ಮಾಡುವವರು 'ಕೆಲಸಗಾರ' ಎಂದು ಗುರುತಿಸುವುದು ಕಾರ್ಮಿಕ ಕಾಯಿದೆಯ ವ್ಯಾಖ್ಯಾನದೊಳಗೆ ಬರದಾಯಿತು ಮತ್ತು ಅವರಿಗೆ 'ಕೆಲಸಗಾರ'ನ ಹಕ್ಕುಗಳು ಅನ್ವಯಿಸದಾಯಿತು.

ಈ ರೀತಿಯ ಶೋಷಣೆಗೆ ಒಳಗಾಗುವವರ ಸಂಖ್ಯೆ ಹೆಚ್ಚಿದಂತೆ ಉದ್ಯೋಗದ ಅವಕಾಶ ಸೀಮಿತವಾಯಿತು. ಈ ಬೆಳವಣಿಗೆಯಿಂದ 1983 ರಿಂದ 1993–94 ರ ಅವಧಿಯಲ್ಲಿ ನಿರುದ್ಯೋಗ ಬಹಳಷ್ಟು ಕಡಿಮೆಯಾಗಿರುವುದು ಅಂಕಿ ಅಂಶಗಳಿಂದ ತಿಳಿಯುತ್ತದೆ. ಆದರೆ ನಿರುದ್ಯೋಗ 1993–94 ರಿಂದ 2004–05 ರ ಅವಧಿಯಲ್ಲಿ ತೀವ್ರವಾಗಿ ಹೆಚ್ಚಾಯಿತು. ಪ್ರತಿ ವರ್ಷ ಉದ್ಯೋಗದ ಮಾರುಕಟ್ಟೆಯನ್ನು ಪ್ರವೇಶಿಸುವ ಎಲ್ಲರಿಗೆ ಉದ್ಯೋಗ ದೊರೆಯಬೇಕಾದರೆ, ಪ್ರತಿ ವರ್ಷ 10–12 ಮಿಲಿಯನ್ ಉದ್ಯೋಗಗಳು ಸೃಷ್ಟಿಯಾಗಬೇಕಾಗುತ್ತದೆ ಎಂಬುದು ಅಧಿಕೃತವಾದ ಅಂದಾಜು. ಕಾರ್ಮಿಕ ಬ್ಯೂರೊದ ಇತ್ತೀಚಿನ ಅಂದಾಜಿನ ಪ್ರಕಾರ, ಉದ್ಯೋಗ ಸೃಷ್ಟಿಯಲ್ಲಿ ತೀರಾ ನಿರಾಶದಾಯಕವಾದ ಚಿತ್ರ ಕಂಡು ಬರುತ್ತಿದೆ. ಪೂರ್ಣ ಪ್ರಮಾಣದ ಉದ್ಯೋಗ ಸೃಷ್ಟಿಗೆ ತದ್ವಿರುದ್ಧವಾದ ಚಿತ್ರಣ ಎದ್ದು ಕಾಣುತ್ತಿದ್ದು, ಉದ್ಯೋಗ ಸೃಷ್ಟಿಯಲ್ಲಿ ಶೇಕಡಾ 90 ರಷ್ಟು ಇಳಿಕೆ ಕಂಡು ಬಂದಿದ್ದು, 2010 ರಲ್ಲಿ 11 ಲಕ್ಷ ಉದ್ಯೋಗಗಳ ಸೃಷ್ಟಿಯಾಗಿದ್ದರೆ 2016 ರಲ್ಲಿ ಕೇವಲ 1.5 ಲಕ್ಷ ಮಾತ್ರ ಸೃಷ್ಟಿಯಾಗಿವೆ.

### ಸಾಮಾಜಿಕ ರಕ್ಷಣೆಯ ಅಗತ್ಯ

ಆರ್ಥಿಕ ಸುಧಾರಣೆಯ ಕಾಲದಲ್ಲಿ, ಅಧಿಕೃತ ವಕ್ತಾರರು ಆಗಾಗ್ಗೆ ಹೇಳುತ್ತಿದ್ದುದು ಏನೆಂದರೆ, ದೇಶದ ಕಾರ್ಮಿಕ ಮಾರುಕಟ್ಟೆ ಬಹಳ (ಕೆಲವು ಅಡೆತಡೆಗಳ ಕಾನೂನುಗಳಿಂದ) ಕಠಿಣವಾಗಿದೆ. ಆದ್ದರಿಂದ ವಿದೇಶಿ ಬಂಡವಾಳವನ್ನು ಹೆಚ್ಚಿನ ಪ್ರಮಾಣದಲ್ಲಿ ಆಕರ್ಷಿಸಬೇಕಾದರೆ ಕಾರ್ಮಿಕ ಕ್ಷೇತ್ರದಲ್ಲಿ ಸುಧಾರಣೆ ಬಹಳ ಅಗತ್ಯವಿದೆ ಎಂದು. ಭಾರತದ ನೀತಿ ನಿರೂಪಕರು, ಆಗಾಗ್ಗೆ ನೀಡುತ್ತಿದ್ದ ಸಲಹೆ ಏನೆಂದರೆ, ದೇಶ ಹೊಂದಿರುವ ಯುವ ಜನಸಂಖ್ಯೆಯ ಅನುಕೂಲವನ್ನು ಬಳಸಿಕೊಂಡು ಕುಶಲತೆಯನ್ನು ಉನ್ನತೀಕರಿಸಿ ಕಾರ್ಮಿಕ ಮಾರುಕಟ್ಟೆಯನ್ನು ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳುವಂತೆ ಮಾಡಿದರೆ, ವಿದೇಶಿ ಬಂಡವಾಳವನ್ನು ಆಕರ್ಷಿಸಬಹುದು ಮತ್ತು ತನ್ಮೂಲಕ ಉದ್ಯೋಗ ಸೃಷ್ಟಿಸಬಹುದು ಎಂದು. ಮೇಲಿನ ಸಲಹೆಯನ್ನು ಕೂಲಂಕಶವಾಗಿ ಪರಿಶೀಲಿಸಿದಾಗ, ಮಾರುಕಟ್ಟೆಯ ನಿಯಮಗಳು ಆರ್ಥಿಕ ಬೆಳವಣಿಗೆ ಅಥವಾ ಉದ್ಯೋಗ ಸೃಷ್ಟಿಗೆ ಯಾವುದೇ ರೀತಿಯ ಅಡ್ಡಿಯಾಗುತ್ತಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ದೇಶದ ಒಟ್ಟಾರೆ ದುಡಿಯುವ ವರ್ಗವನ್ನು ಅವಲೋಕಿಸಿದರೆ, ಅತ್ಯಂತ ಸಣ್ಣ ಪ್ರಮಾಣದ ಕೆಲಸಗಾರರು ಸಂಘಟಿತ ವಲಯದಲ್ಲಿದ್ದು ಕೆಲವು ರಕ್ಷಣೆಯನ್ನು ಪಡೆದುಕೊಂಡಿದ್ದಾರೆ. ಕೆಲವು ರಾಜ್ಯಗಳಲ್ಲಿ ಕೆಲವು ಕ್ಷೇತ್ರಗಳಿಗೆ ಕನಿಷ್ಠ ಕೂಲಿ ಕಾಯಿದೆ ಜಾರಿಯಲ್ಲಿರುವುದನ್ನು ಬಿಟ್ಟರೆ, ಸಂಘಟಿತ ಕ್ಷೇತ್ರಕ್ಕೆ ಹೋಲಿಸಿದಲ್ಲಿ ಅಸಂಘಟಿತ ಕ್ಷೇತ್ರದ ಕಾನೂನುಗಳ ಅಸ್ತಿತ್ವ ವಾಸ್ತವಿಕವಾಗಿ ಇಲ್ಲದಾಗಿವೆ. ಈ ಹಿನ್ನೆಲೆಯಲ್ಲಿ 'ರಾಷ್ಟ್ರೀಯ ಕಾರ್ಮಿಕ ಮಾರುಕಟ್ಟೆ' ಯ ಸಮಗ್ರ ದೃಷ್ಟಿಯನ್ನಿಟ್ಟುಕೊಂಡು ಕಾರ್ಮಿಕ ಹಕ್ಕುಗಳನ್ನು ತಳಮಟ್ಟದಲ್ಲಿ ಜಾರಿಗೆ ತರುವಂತಹ ಕಾರ್ಮಿಕ ಕಾಯಿದೆಗಳನ್ನು ರೂಪಿಸಿ ಜಾರಿಗೆ ತರುವುದು ನಿಜಕ್ಕೂ ಸವಾಲಿನ ಕೆಲಸವಾಗಿದೆ. ಈ ದೂರದೃಷ್ಟಿಯ ಕಾಯಿದೆಗಳು 'ರಾಷ್ಟ್ರೀಯ ಕನಿಷ್ಠ ಕೂಲಿ' ಯನ್ನೊಳಗೊಂಡ ಸಾಮಾನ್ಯ ನಿಯಮಗಳನ್ನು ಒಳಗೊಂಡಿರಬೇಕು. ಈ ನೀತಿ ನಿಯಮಗಳು ದೇಶದ ಅಸಂಘಟಿತ ಕಾರ್ಮಿಕ ಮಾರುಕಟ್ಟೆಯ ಹಿತಗಳನ್ನು ಕಾಯುವಲ್ಲಿ ಮಂಚೂಣಿಯಲ್ಲಿರಬೇಕು. ದೇಶದ ಆರ್ಥಿಕ ಬೆಳವಣಿಗೆಯ ವೇಗ ಹೆಚ್ಚಿದಂತೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಕಡೆ ಹೆಚ್ಚಿನ ಗಮನವನ್ನೂ ಹರಿಸಬೇಕಾಗಿದೆ. ರಾಷ್ಟ್ರೀಯ ಮಟ್ಟದ ಆರ್ಥಿಕ ನೀತಿ ಜಾರಿಯಿಂದ ಪ್ರಸಕ್ತ ದೇಶದಲ್ಲಿರುವ ದುಬಾರಿಯಲ್ಲದ ಕಾರ್ಮಿಕ ಮಾರುಕಟ್ಟೆಯ ಲಾಭದ ಸವಿಯನ್ನು ಉಣ್ಣುತ್ತಿರುವ ಪ್ರಸಕ್ತ ಸಂದರ್ಭದಲ್ಲಿ, ಈ ಪರಿಸ್ಥಿತಿಯನ್ನು ಬದಲಿಸಬೇಕು ಎಂಬುದನ್ನು ಒಪ್ಪದಿರುವ ರಾಜ್ಯಾಧಿಕಾರದ ನಿಲುವನ್ನು ಊಹಿಸಿಕೊಳ್ಳಬಹುದು. ಆದ್ದರಿಂದ ಈ ರೀತಿಯ ನಿಲುವಿನ ಹಿಂದಿರುವ ತಾರ್ಕಿಕತೆಯನ್ನು ತಾತ್ವಿಕವಾಗಿ ಮತ್ತು ಜಾಗತಿಕ ಅನುಭವದ ಹಿನ್ನೆಲೆಯಲ್ಲಿ ತೀವ್ರವಾಗಿ ಪ್ರಶ್ನಿಸಬೇಕಾಗುತ್ತದೆ.

ಅಸಂಘಟಿತ ಉದ್ಯೋಗ ಕ್ಷೇತ್ರದಲ್ಲಿರುವ ಕೆಲಸಗಾರರಿಗೆ ಅವರು ಕೆಲಸ ಮಾಡುವ ಪರಿಸರದ ಸ್ಥಿತಿಯನ್ನು ಸುಧಾರಿಸಿ ಗೌರವಾನ್ವಿತವಾದ ಬದುಕಲು ಅನುಕೂಲವಾಗುವಂತಹ ಸಾಮಾನ್ಯವಾದ ಸಾಮಾಜಿಕ ಭದ್ರತೆಯನ್ನು ತುರ್ತಾಗಿ ಒದಗಿಸುವ ಕೆಲಸ ಆಗಬೇಕಾಗಿದೆ. ಈ ಕೆಲಸ ಮಾಡುವಾಗ ಪೌಷ್ಟಿಕಾಂಶ, ಶೌಚಾಲಯ ಸೌಲಭ್ಯಗಳು, ಆರೋಗ್ಯ ಮತ್ತು ಶಿಕ್ಷಣಗಳಂತಹ ಮೂಲಭೂತ ಸೇವೆಗಳನ್ನು ಒದಗಿಸುವ ವ್ಯವಸ್ಥೆಯನ್ನು ವಿಸ್ತರಿಸಿ ಸುಧಾರಿಸುವ ಕೆಲಸವೂ ಆಗಬೇಕಾಗಿದೆ. ಈ ಮೂಲ ಸೌಲಭ್ಯಗಳು ಕೆಲಸಗಾರರ ದೈಹಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಸುಧಾರಿಸಿ ಬಹುತೇಕ ಕಾರ್ಮಿಕರು ಶೋಷಣೆಗೊಳಗಾಗುವುದನ್ನು ತಪ್ಪಿಸುತ್ತದೆ. ❑

### "ಇಂಡಿಯಾ ಆವಿಷ್ಕಾರ ಸೂಚ್ಯಂಕ"

ದೇಶದಲ್ಲಿ ಮಾಡುವ ಆವಿಷ್ಕಾರಗಳ ಮಾಹಿತಿಯನ್ನು ಒಂದೆಡೆ ಕಲೆ ಹಾಕಿ ಅವುಗಳನ್ನು ರಾಜ್ಯವಾರು ವಿಂಗಡಿಸಿ, ಸ್ಥಾನ ನಿಗದಿಪಡಿಸುವ "ಇಂಡಿಯಾ ಆವಿಷ್ಕಾರ ಸೂಚ್ಯಂಕ" ಕ್ರಮವನ್ನು ಇತ್ತೀಚೆಗೆ ಆರಂಭಿಸಲಾಗಿದೆ. ಇದು ದೇಶದ ಮೊದಲ ಔದ್ಯೋಗಿಕ ಆನ್‌ಲೈನ್ ಪೋರ್ಟಲ್ ಆಗಿದ್ದು, ಇದನ್ನು ನಿಯಮಿತವಾಗಿ ಕಾಲಕಾಲಕ್ಕೆ ಮಾಹಿತಿಗಳೊಂದಿಗೆ ಸಜ್ಜುಗೊಳಿಸಲಾಗುತ್ತದೆ. ಇದು ನೀತಿ ಆಯೋಗ, ಔದ್ಯೋಗಿಕ ನೀತಿ ಮತ್ತು ಉತ್ಕರ್ಷ ವಿಭಾಗ ಮತ್ತು ಭಾರತದ ವಾಣಿಜ್ಯ ಒಕ್ಕೂಟಗಳ ಜಂಟಿ ಯೋಜನೆಯಾಗಿದ್ದು ದೇಶವನ್ನು ಆವಿಷ್ಕಾರಯುತ ಆರ್ಥಿಕತೆಯನ್ನಾಗಿಸಲು ನೆರವಾಗುವ ಉದ್ದೇಶ ಹೊಂದಿದೆ. ಜಾಗತಿಕ ಆವಿಷ್ಕಾರ ಸೂಚ್ಯಂಕದ ಸೂಚಕಗಳ ಮಾದರಿಯಲ್ಲಿಯೇ ಇಂಡಿಯಾ ಆವಿಷ್ಕಾರ ಸೂಚ್ಯಂಕದ ಚೌಕಟ್ಟುಗಳನ್ನು ರೂಪಿಸಲಾಗಿದೆ. ಭಾರತ, ಜಾಗತಿಕ ಆವಿಷ್ಕಾರ ಸೂಚ್ಯಂಕದ (2016 ನೇ ಸಾಲಿನಲ್ಲಿ) 128 ದೇಶಗಳ ಪೈಕಿ 66ನೇ ಸ್ಥಾನದಲ್ಲಿದೆ.

# ಕಾರ್ಮಿಕ ಸುಧಾರಣೆ; ಸವಾಲು ಮತ್ತು ಅವಕಾಶ




* ಶ್ರೀರಂಗ ಝಾ

ಉದ್ದಿಮೆದಾರರು ಮತ್ತು ಕೈಗಾರಿಕೋದ್ಯಮಿಗಳಿಗೆ ತಮ್ಮ ವಹಿವಾಟುಗಳನ್ನು ನಡೆಸಲು ಅತಿ ಸುಲಭ ಮಾಡಿಕೊಡಲು ಕಾರ್ಮಿಕ ಕಾನೂನುಗಳ ಬದಲಾವಣೆ ಮಾಡಲಾಗುತ್ತಿದೆ ಎಂದೇ ಅನೇಕ ಬಾರಿ ಕಲ್ಪನೆ ಮಾಡಿಕೊಳ್ಳಲಾಗುತ್ತದೆ. ಆದರೆ, ಆ ಕಾನೂನುಗಳ ಪಾಲನೆ ಮತ್ತು ರಾಜ್ಯಗಳು ಕೈಗೊಳ್ಳುವ ದಂಡನಾ ಕ್ರಮದ ಭಯದ ಬಗ್ಗೆ ತಿಳಿದುಕೊಳ್ಳುವುದಿಲ್ಲ. ಆದಾಗ್ಯೂ ಕಾರ್ಮಿಕ ಸುಧಾರಣೆಗಳಲ್ಲಿ ಸೀಮಿತ ಮೇಲ್ಮನವಿಗೆ ಅವಕಾಶಗಳಿವೆ. ಒಟ್ಟಾರೆ ಕಾರ್ಮಿಕ ಮಾರುಕಟ್ಟೆಯಲ್ಲಿ ಸಮಗ್ರ ಬದಲಾವಣೆಗಳ ಅಗತ್ಯವಿದೆ. ಆಗಾಗ್ಗೆ ಕಾರ್ಮಿಕ ಕಾನೂನುಗಳಲ್ಲಿ ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡುವುದನ್ನು ಬಿಟ್ಟು ಅಥವಾ ಸಾಮಾಜಿಕ ಭದ್ರತಾ ಕ್ರಮಗಳನ್ನು ವಿಸ್ತರಣೆ ಮಾಡುವುದನ್ನು ಹೊರತುಪಡಿಸಿ, ಸಮಗ್ರವಾಗಿ ಕಾನೂನುಗಳ ಬದಲಾವಣೆ ಅಗತ್ಯವಿದೆ. ಭಾರತದಲ್ಲಿ ಕಾರ್ಮಿಕ ಕಾನೂನುಗಳ ಸುಧಾರಣೆಗೆ ಇದು ಸಕಾಲ. ಅದಕ್ಕೆ ಎರಡು ಕಾರಣಗಳೆಂದರೆ ಮೊದಲನೆಯದಾಗಿ ಚೀನಾ ಕಾರ್ಮಿಕರ ವೆಚ್ಚ ಮತ್ತಿತರ ಕಾರಣಗಳಿಂದಾಗಿ ಕಳೆದ ಒಂದು ದಶಕದಿಂದ ಕ್ರಮೇಣ ಅದು ಉತ್ಪಾದನಾ ತಾಣದ ಪಟ್ಟ ಕಳೆದು ಕೊಳ್ಳುತ್ತಿರುವುದು ಮತ್ತು ಎರಡನೆಯದಾಗಿ ಭಾರತ ಸರ್ಕಾರ 'ಮೇಕ್ ಇನ್ ಇಂಡಿಯಾ' ಅಭಿಯಾನದ ಬದ್ಧತೆಯ ಮೂಲಕ ದೇಶದಲ್ಲಿ ಉತ್ಪಾದನಾ ಘಟಕಗಳ ಸ್ಥಾಪನೆಗೆ ಭಾರೀ ಪ್ರಮಾಣದಲ್ಲಿ ಹೂಡಿಕೆದಾರರು ಹಾಗೂ ಉದ್ಯಮಿಗಳನ್ನು ಆಕರ್ಷಿಸುತ್ತಿರುವುದು. 'ಮೇಕ್ ಇನ್ ಇಂಡಿಯಾ'ದ ಯಶಸ್ಸು, ನಾವು ಎಷ್ಟು ಬೇಗ ಮತ್ತು ಎಷ್ಟು ಜರೂರಾಗಿ ಕಾರ್ಮಿಕ ಕಾನೂನುಗಳಲ್ಲಿ ಸುಧಾರಣೆ ತರುತ್ತೇವೆ ಎಂಬುದನ್ನು ಅವಲಂಬಿಸಿದೆ.

ವಿಸ್ತೃತವಾಗಿ ನೋಡುವುದಾದರೆ ಕಾರ್ಮಿಕ ಸುಧಾರಣೆಗಳು ಸ್ಪರ್ಧಾತ್ಮಕತೆಗೆ ಹಾಗೂ ಕಾರ್ಮಿಕರ ಉತ್ಪಾದನಾ ವರ್ಧನೆಗಾಗಿ ಸಂಯೋಜನೆಗೊಂಡಿವೆ. ದುರದೃಷ್ಟವೆಂದರೆ ಭಾರತೀಯ ಕಾರ್ಮಿಕ ಮಾರುಕಟ್ಟೆಯಲ್ಲಿ ಸುಧಾರಣೆಗಳ ಪ್ರಯತ್ನ ಅತಿ ನಿಧಾನ. ಭಾರತದಲ್ಲಿ 1991ರಲ್ಲಿ ಆರಂಭವಾದ ಜಾಗತೀಕರಣ ಮತ್ತು ಉದಾರೀಕರಣ ಪ್ರಕ್ರಿಯೆಯೂ ಸಹ ಕಾರ್ಮಿಕ ಮಾರುಕಟ್ಟೆಯ ಮೇಲೆ ಸೀಮಿತ ಪರಿಣಾಮಗಳನ್ನು ಬೀರಿದೆ. ಈ ಹಿನ್ನೆಲೆಯಲ್ಲಿ ಭಾರತ ವಿಶ್ವದ ಉತ್ಪಾದನಾ ತಾಣವಾಗುವ ಅವಕಾಶ ತಪ್ಪಿಸಿಕೊಂಡಿದ್ದು ಆಶ್ಚರ್ಯವೇನಲ್ಲ. ಇದಕ್ಕೆ ಪ್ರಮುಖ ಕಾರಣಗಳೆಂದರೆ ಕಾರ್ಮಿಕ ಮಾರುಕಟ್ಟೆಯಲ್ಲಿನ ಕಠಿಣ ಕಾನೂನುಗಳು, ಪುರಾತನ ಕಾನೂನುಗಳು ಮತ್ತು ಕೌಶಲ್ಯ ಕೊರತೆ. ಕಳೆದ 25 ವರ್ಷಗಳಿಂದೀಚೆಗೆ ಭಾರತ ಸರ್ಕಾರ ಕಾರ್ಮಿಕ ಕಾನೂನುಗಳಲ್ಲಿ ವಿರಳವಾದ ಬದಲಾವಣೆಗಳನ್ನು ತಂದಿದೆ. ಅವುಗಳೆಲ್ಲವೂ ಕಾರ್ಮಿಕರ ಪರವಾಗಿವೆ. ಇಷ್ಟಾದರೂ ಭಾರತದ ಕಾರ್ಮಿಕ ಮಾರುಕಟ್ಟೆ ವಿದೇಶಿ ಬಂಡವಾಳ ಆಕರ್ಷಣೆಯಲ್ಲಿ ಅದರಲ್ಲೂ ವಿಶೇಷವಾಗಿ ಶ್ರಮ ಆಧರಿತ ವಲಯಗಳಾದ ಚರ್ಮದ ಉತ್ಪನ್ನಗಳು, ಜವಳಿ, ಹರಳು ಮತ್ತು ಆಭರಣ, ಕ್ರೀಡಾ ಸಾಮಗ್ರಿ, ಶಸ್ತ್ರಾಸ್ತ್ರ, ಪೀಠೋಪಕರಣ, ರಬ್ಬರ್ ಉತ್ಪನ್ನಗಳು, ಫ್ಯಾಬ್ರಿಕೇಟೆಡ್ ಮೆಟಲ್ ಉತ್ಪನ್ನಗಳ ವಲಯದಲ್ಲಿ ತೀರಾ ಶೋಚನೀಯ ಸ್ಥಿತಿಯಲ್ಲಿದೆ. ಕಾರ್ಮಿಕ

**ನಿಜವಾದ ಅರ್ಥದಲ್ಲಿ ಕಾರ್ಮಿಕ ಕಾನೂನುಗಳ ಸುಧಾರಣೆಗಳೆಂದರೆ, ಉತ್ಪಾದನಾ ಮತ್ತು ಸೇವಾ ವಲಯದ ಮೌಲ್ಯ ಹೆಚ್ಚಿಸುವಂತಹ ಕೌಶಲ್ಯ ಹೊಂದಿದ ಮಾನವ ಸಂಪನ್ಮೂಲ ಪೂರ್ಣ ಪ್ರಮಾಣದಲ್ಲಿ ಲಭ್ಯವಿರುವುದು. ಆದರೆ ಅಲ್ಲಿ ಕಾರ್ಖಾನೆಗಳ ಮುಖ್ಯಸ್ಥರೂ ಶೋಷಣೆಗೊಳಗಾಗಬಾರದು ಮತ್ತು ಅವರಿಗೆ ಭಯ ಇರಬಾರದು.**

* ಸಂಚಾಲಕರು, ಸಾರ್ವಜನಿಕ ನೀತಿ ಮತ್ತು ಆಡಳಿತ ಕೇಂದ್ರ ನವದೆಹಲಿ. E-mail : jha.srirang@gmail.com

ಸುಧಾರಣೆಗಳನ್ನು ನಾವು ಸಮಗ್ರ ರೀತಿಯಲ್ಲಿ ನೋಡಿದಾಗ ಮಾತ್ರ ಭಾರತ ತನ್ನ ಜನಸಂಖ್ಯಾ ಶಕ್ತಿಯನ್ನು ಬಳಸಿಕೊಂಡು ವಿಶ್ವದ ಉತ್ಪಾದನಾ ತಾಣವಾಗಿ ರೂಪುಗೊಳ್ಳಲು ಸಾಧ್ಯ. ಇದರಿಂದ ಹೆಚ್ಚಿನ ಕಾರ್ಮಿಕ ಉತ್ಪಾದನೆ, ಸರಳ ಕಾರ್ಮಿಕ ಮಾರುಕಟ್ಟೆ ಪದ್ಧತಿಗಳು, ಜಾಗತಿಕ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೆ ಕಡಿಮೆ ಕಾರ್ಮಿಕ ವೆಚ್ಚ ಸಾಧಿಸಬಹುದಾಗಿದೆ. ಭಾರತೀಯ ಕಾರ್ಮಿಕ ಮಾರುಕಟ್ಟೆ ಪುರಾತನ ಕಾನೂನುಗಳ ಸಂಕೀರ್ಣತೆಯಲ್ಲಿ ಸಿಲುಕಿ ನಲುಗುತ್ತಿದೆ.

ಆಡಳಿತಶಾಹಿಯ ವಿವೇಚನಾರಹಿತ ನಿಯಂತ್ರಣ ಮತ್ತು ಭ್ರಷ್ಟ ಪರಿವೀಕ್ಷಣಾ ಪದ್ಧತಿಗಳಿಂದಾಗಿ ಕಾರ್ಖಾನೆಗಳ ಮಾಲಿಕರನ್ನು ಸಂಶಯಾಸ್ಪದ ರೀತಿಯಲ್ಲಿ ನೋಡಲಾಗುತ್ತದೆ ಮತ್ತು ಕಾರ್ಮಿಕರ ಕಲ್ಯಾಣದ ಹಿತ ಕಾಯುವ ಬದಲು ಮಾಲಿಕರನ್ನೇ ಶೋಷಿಸಲಾಗುತ್ತಿದೆ. ಆದ್ದರಿಂದ ಕಾರ್ಮಿಕ ಮಾರುಕಟ್ಟೆ ಸರಳೀಕರಣಗೊಳಿಸುವ ತುರ್ತು ಅಗತ್ಯ ಇಂದು ಬಂದೊದಗಿದೆ. ಕಾರ್ಮಿಕ ಕಾನೂನುಗಳು ಪ್ರಗತಿ ಪರವಾಗಿರಬೇಕು ಮತ್ತು ಆಡಳಿತಶಾಹಿ ನಿಯಂತ್ರಣದ ಬದಲಿಗೆ ಪಾರದರ್ಶಕ ಆಡಳಿತವಿರಬೇಕು, ಸ್ವಪ್ರೇರಿತ ವರದಿ ಸಲ್ಲಿಸುವುದು ಮತ್ತು

ಕಾರ್ಮಿಕರ ಗುಣಮಟ್ಟ ಕಾಯ್ದುಕೊಳ್ಳುವ ಬಗ್ಗೆ ಸ್ವಯಂ ವರದಿ ಘೋಷಣೆ ಮಾಡಿಕೊಳ್ಳುವ ವ್ಯವಸ್ಥೆ ಬರಬೇಕು ಹಾಗೂ ಈಗ ದೋಷದಿಂದ ಕೂಡಿರುವ ಕಾರ್ಖಾನೆಗಳ ಪರಿವೀಕ್ಷಣೆ ಮತ್ತು ಪಾಲನಾ ವ್ಯವಸ್ಥೆ ಬದಲಾಗಬೇಕು. ಕಾರ್ಮಿಕ ಮಾರುಕಟ್ಟೆ ಸರಳೀಕರಣವೆಂದರೆ ಅದರಲ್ಲಿ ಉದ್ಯೋಗ ನಿಯಮಗಳು ಸರಳವಾಗಿರಬೇಕು. ಕೌಶಲ್ಯಾಭಿವೃದ್ಧಿ ಮತ್ತು ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಗೆ ಅವಕಾಶಗಳಿರಬೇಕು. ಮುಕ್ತ ಮಾರುಕಟ್ಟೆ ವ್ಯವಸ್ಥೆಗಳಲ್ಲಿ ಕಾರ್ಮಿಕ ಕಾನೂನುಗಳ ತಿದ್ದುಪಡಿಗೆ ಹೆಚ್ಚಿನ ಒತ್ತು ನೀಡಿದರೆ, ಉದ್ಯೋಗಿಗಳನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದು, ತೆಗೆದು ಹಾಕುವುದು, ಬೆಳವಣಿಗೆಯಾಗುತ್ತಿರುವ ಮಾರುಕಟ್ಟೆಗೆ ಅನುಗುಣವಾಗಿ ದುಡಿಯುವ ಜನಸಂಖ್ಯೆಗೆ ಪೂರಕವಾಗಿ ಉದ್ಯೋಗ ಷರತ್ತು ಹಾಗೂ ನಿಯಮಗಳನ್ನು ರೂಪಿಸಬೇಕು. ಹೆಚ್ಚಿನ ಪ್ರಮಾಣದ ಕಠಿಣ ಕಾನೂನುಗಳನ್ನು ಮಾಡಿದರೆ ಅದೇ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉತ್ಪಾದನಾ ಮತ್ತು ಸೇವಾ ವಲಯಕ್ಕೆ ಭದ್ರ ಬುನಾದಿ ಹಾಕುವ ಬದಲು




ಅವೇ ದೊಡ್ಡ ಅಡ್ಡಿಯಾಗುತ್ತವೆ. ಮತ್ತೊಂದು ಸಿದ್ಧಾಂತದ ವಾದವೆಂದರೆ ಪುರಾತನ ಕಾರ್ಮಿಕ ಕಾನೂನುಗಳ ವಿವೇಚನೆ ಮತ್ತು ಸರಳ ಕಾರ್ಮಿಕ ಮಾರುಕಟ್ಟೆಯ ಮೂಲಕ ಕಾರ್ಮಿಕರನ್ನು ಸಬಲೀಕರಣಗೊಳಿಸುವುದು ಮತ್ತು ಅವರಿಗೆ ತರಬೇತಿ ಮೂಲಕ ಕೌಶಲ್ಯಾಭಿವೃದ್ಧಿಗೊಳಿಸುವುದು, ಮುಕ್ತ ಕಾರ್ಮಿಕ ಮಾರುಕಟ್ಟೆಗೆ ವಿರುದ್ಧವಾದ ಕ್ರಮ ಎಂದು ಹೇಳಲಾಗುತ್ತದೆ. ನವ ಉದಾರೀಕರಣ ಪ್ರತಿಪಾದಕರ ಪ್ರಕಾರ ಆಡಳಿತ ಮಂಡಳಿಗಳ ಹಿಡಿತವನ್ನು ಎತ್ತಿ ಹಿಡಿಯುವ ಮತ್ತು ಬೇಕೆಂದಾಗ ಉದ್ಯೋಗಕ್ಕೆ ಸೇರಿಸಿಕೊಳ್ಳುವುದು ಮತ್ತು ತೆಗೆದುಹಾಕುವ ವಿಚಾರಕ್ಕೆ ಸಂಬಂಧಿಸಿದಂತೆ ಅನಿರ್ಬಂಧಿತ ಅಧಿಕಾರಗಳನ್ನು ಆಡಳಿತ ಮಂಡಳಿಗೆ ಒದಗಿಸುವುದು ಅಗತ್ಯ. ಸ್ವಾತಂತ್ರ್ಯಾನಂತರ ಭಾರತೀಯ ಕಾರ್ಮಿಕ ಮಾರುಕಟ್ಟೆ ಹೆಚ್ಚು ನಿಯಂತ್ರಿತ ಮತ್ತು ವ್ಯವಸ್ಥಿತ ರೂಪದಲ್ಲಿ ಆದೇಶ ಅನುಸರಣ ಆಧರಿತ ಮನೋಭಾವದಿಂದ ಕೂಡಿದೆ ಎಂಬುದು ನಿಜ.

ಭಾರತ ಸರ್ಕಾರ ಹಾಗೂ ದೇಶದಲ್ಲಿನ ಎಲ್ಲ ಪ್ರಾದೇಶಿಕ ಸರ್ಕಾರಗಳು ಉದಯವಾಗುತ್ತಿರುವ ಕಾರ್ಮಿಕ ಕಾನೂನು ಸುಧಾರಣೆಗಳಿಗೆ ತಕ್ಕಂತೆ ವೇಗವನ್ನು ಕಾಯ್ದುಕೊಂಡು ಜಾಗತೀಕರಣ ಮತ್ತು ಏಕರೂಪದ ಕಾರ್ಮಿಕ ಮಾರುಕಟ್ಟೆ, ಬಂಡವಾಳ ಹೂಡಿಕೆ ಮತ್ತು ವಸ್ತು ಆಧರಿತ ಮಾರುಕಟ್ಟೆಗಳಿಗೆ ಅನುಗುಣವಾಗಿ ಸುಧಾರಣೆಗಳನ್ನು ಅಳವಡಿಸಿಕೊಳ್ಳುತ್ತಾ ಬಂದಿವೆ. ಆದ್ದರಿಂದ ಕಳೆದ 25 ವರ್ಷಗಳಿಂದೀಚೆಗೆ ಆದೇಶ ಪಾಲನಾ ಒತ್ತಡ ಮತ್ತು ನಿರೀಕ್ಷಕರ ಭಯ ಕ್ರಮೇಣ ಕಡಿಮೆಯಾಗಿದೆ. ಮತ್ತೊಂದು ಆಸಕ್ತಿಕರ ಅಂಶವೆಂದರೆ ಸರ್ಕಾರವೇ ಗುತ್ತಿಗೆ ಕಾರ್ಮಿಕರನ್ನು ಅತಿದೊಡ್ಡ ಪ್ರಮಾಣದಲ್ಲಿ ನೌಕರಿಗೆ ಸೇರಿಸಿಕೊಳ್ಳುತ್ತಿರುವುದು. ಇದು ಗುತ್ತಿಗೆ ಕಾರ್ಮಿಕ ಕಾಯ್ದೆಗೆ ವಿರುದ್ಧವಾದ ಕ್ರಮ. ಇನ್ನೊಂದು ಆಶ್ಚರ್ಯಕರ ಅಂಶವೆಂದರೆ ಖಾಸಗಿ ಕಂಪನಿಗಳೂ ಕೂಡ ಗುತ್ತಿಗೆ ಆಧಾರದ ಮೇಲೆ ಕಾರ್ಮಿಕರನ್ನು ಉದ್ಯೋಗಕ್ಕೆ ಸೇರಿಸಿಕೊಳ್ಳಲು ಹೆಚ್ಚಿನ ಉತ್ಸುಕತೆ ತೋರುತ್ತಿರುವುದು. ಖಾಸಗಿ ಕಂಪನಿಗಳು ತನ್ನ ಪ್ರಮುಖ ಕಾರ್ಯಗಳಿಗೂ ಗುತ್ತಿಗೆ ಆಧಾರದ ಮೇಲೆ ನೌಕರರನ್ನು ತೆಗೆದುಕೊಳ್ಳುತ್ತಿವೆ. ಕಾರ್ಮಿಕ ಕಾನೂನುಗಳ ಪಾಲನೆಯಲ್ಲಿ ಸರ್ಕಾರವೇ ಗಂಭೀರವಾಗಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ಕೈಗಾರಿಕಾ ವಿವಾದಗಳಿಗೆ ಸಂಬಂಧಿಸಿದಂತೆ ತೀರ್ಪುಗಳನ್ನು ಪ್ರಕಟಿಸುವಾಗ ನ್ಯಾಯಾಲಯಗಳೂ ಕೂಡ ತರ್ಕಬದ್ಧವಾದ ಆದೇಶಗಳನ್ನು ನೀಡಿವೆ. ಮತ್ತೊಂದೆಡೆ ಭಾರತ ಸರ್ಕಾರ ಕಾರ್ಮಿಕ ಕಾನೂನುಗಳಿಗೆ ಸಂಬಂಧಿಸಿದಂತೆ ತನ್ನ ಧೋರಣೆಗಳನ್ನು ಮೃದುಗೊಳಿಸಿದೆ. ಆದರೂ ಸಹ ಅದು ನೌಕರರನ್ನು ಉದ್ಯೋಗಕ್ಕೆ ತೆಗೆದುಕೊಳ್ಳುವ ಸಂದರ್ಭಗಳಲ್ಲಿ ವಿಧಿಸಲಾಗುವ ಷರತ್ತು ಮತ್ತು ನಿಯಮಗಳನ್ನು ಸಂಪೂರ್ಣವಾಗಿ ಉದ್ಯೋಗದಾತರಿಗೆ ಹಸ್ತಾಂತರಿಸಿಲ್ಲ. ರಾಜ್ಯಗಳ ನಿಯಂತ್ರಣಕ್ಕೆ ಅನುಗುಣವಾಗಿ ಉದ್ಯೋಗದಾತ ಮತ್ತು ಉದ್ಯೋಗಿಯ ನಡುವೆ ಸ್ವಯಂ ಗುತ್ತಿಗೆ ಆಧರಿಸಿ ನೌಕರಿಗೆ ತೆಗೆದುಕೊಳ್ಳಲಾಗುತ್ತಿದೆ.

ದೇಶಾದ್ಯಂತ ಇರುವ ಅಗತ್ಯ ಕೌಶಲ್ಯ ಕೊರತೆ ಬಹುತೇಕ ಭಾರತೀಯ ಕಾರ್ಮಿಕ ಮಾರುಕಟ್ಟೆಯ ಮೇಲೆ ಅಗಾಧ ಪರಿಣಾಮ ಬೀರಿದೆ. ಪುರಾತನ ಕಾರ್ಮಿಕ ಕಾನೂನುಗಳಿಗಿಂತ ಹೆಚ್ಚಾಗಿ, ಈ ಅಂಶ ಬಂಡವಾಳ ಹೂಡಿಕೆಗೆ ವಿಶೇಷವಾಗಿ ವಿದೇಶಿ ನೇರ ಬಂಡವಾಳ ಹೂಡಿಕೆ ಆಕರ್ಷಣೆ ಕಳೆದುಕೊಳ್ಳುವಂತೆ ಮಾಡಿದೆ. ದೇಶೀಯ ಉದ್ದಿಮೆದಾರರು ಅತಿಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳು ಅಗತ್ಯ ಕೌಶಲ್ಯ ಹೊಂದಿದ ಮಾನವ ಸಂಪನ್ಮೂಲ ಕೊರತೆಯನ್ನು ಬಹುವಾಗಿ ಎದುರಿಸುತ್ತಿವೆ.

ಯೋಜನಾ ಆಯೋಗ (2001) ಅಧ್ಯಯನದಲ್ಲಿ ಉಲ್ಲೇಖಿಸಿರುವಂತೆ ಗ್ರಾಮೀಣ ಪ್ರದೇಶದಲ್ಲಿ ದುಡಿಯುವ ಪುರುಷರಲ್ಲಿ ಶೇಕಡ 10.1ರಷ್ಟು ಹಾಗೂ ಮಹಿಳೆಯರಲ್ಲಿ ಶೇಕಡ 6.3ರಷ್ಟು ಮಂದಿ ಮಾತ್ರ ಅಗತ್ಯ ಕೌಶಲ್ಯ ಹೊಂದಿದ್ದಾರೆ. ಅದೇ ರೀತಿ ನಗರ ಪ್ರದೇಶದಲ್ಲಿ ಪುರುಷ ಕಾರ್ಮಿಕರಲ್ಲಿ ಶೇಕಡ 19.6 ಮತ್ತು ಮಹಿಳಾ ಕಾರ್ಮಿಕರಲ್ಲಿ ಶೇಕಡ 11.2ರಷ್ಟು ಮಾತ್ರ ಅಗತ್ಯ ಕೌಶಲ್ಯ ಹೊಂದಿದ್ದಾರೆ. ಭಾರತೀಯ ಕಾರ್ಮಿಕ ಮಾರುಕಟ್ಟೆಯಲ್ಲಿ 20 ರಿಂದ 24ರ ವರೆಗಿನ ವಯೋಮಾನದ ಶೇಕಡ 5ರಷ್ಟು ಮಂದಿ

ಮಾತ್ರ ವೃತ್ತಿಪರ ತರಬೇತಿ ಪಡೆದಿದ್ದಾರೆ. ಕೈಗಾರಿಕಾ ಅಭಿವೃದ್ಧಿ ರಾಷ್ಟ್ರಗಳಲ್ಲಿ ಈ ಪ್ರಮಾಣ ಅತಿ ಹೆಚ್ಚು ಅಂದರೆ ಶೇಕಡ 60 ರಿಂದ 80ರಷ್ಟಿದೆ.(ಯೋಜನಾ ಆಯೋಗ 2001)

ಇನ್ನು ವೃತ್ತಿಪರ ಕೌಶಲ್ಯದ ಬಗ್ಗೆ ಹೇಳುವುದಾದರೆ ಭಾರತ ಅಭಿವೃದ್ಧಿ ಹೊಂದಿದ ಮೆಕ್ಸಿಕೊದಂತಹ ಸಣ್ಣ ರಾಷ್ಟ್ರಗಳಿಗಿಂತ ಕೆಟ್ಟ ಸ್ಥಿತಿಯಲ್ಲಿದೆ. ಆ ರಾಷ್ಟ್ರದಲ್ಲಿ ವೃತ್ತಿಪರ ತರಬೇತಿ ಪಡೆದಿರುವವರ ಪ್ರಮಾಣ ಶೇಕಡ 28ರಷ್ಟಿದೆ. (ಯೋಜನಾ ಆಯೋಗ 2001) ಸಮಗ್ರ ಕಾರ್ಮಿಕ ನೀತಿ ಇಲ್ಲದಿರುವುದು ದೇಶವನ್ನು ಸ್ಪರ್ಧಾತ್ಮಕ ಯುಗದಲ್ಲಿ ಸೇವಾ ಉದ್ದಿಮೆ ವ್ಯವಸ್ಥೆ ಉತ್ತಮಗೊಳಿಸುವ ಸರಳ ಕಾರ್ಮಿಕ ಮಾರುಕಟ್ಟೆ ಅಭಿವೃದ್ಧಿಯ ಹಾದಿಗೆ ಅತಿ ದೊಡ್ಡ ತೊಡಕಾಗಿದೆ. ಇದಕ್ಕೆ ಹಲವು ಅಧ್ಯಯನಗಳು, ವರದಿಗಳು ಮತ್ತು ಸಮಾಲೋಚನಾ ಸಭೆಗಳ ನಡಾವಳಿಕೆಗಳು ಪೂರಕವಾಗಿವೆ. ಆದರೂ ಸಮಗ್ರ ರಾಷ್ಟ್ರೀಯ ಕಾರ್ಮಿಕ ನೀತಿ ಅಗತ್ಯವಿದೆ. ಆದರೆ ಸರ್ಕಾರ ಅದರ ಬದಲಿಗೆ ಕಾಲ ಕಾಲಕ್ಕೆ ಕಾರ್ಮಿಕ ಕಾನೂನುಗಳಲ್ಲಿ ಸಣ್ಣಪುಟ್ಟ ಬದಲಾವಣೆ ಅಂದರೆ ಅಲ್ಲೊಂದು ಇಲ್ಲೊಂದು ಸುಧಾರಣೆಗಳನ್ನು ಮಾಡುತ್ತಿದೆ. ಇದಲ್ಲದೆ ಕಾರ್ಮಿಕರ ಕುರಿತಂತೆ ರಾಷ್ಟ್ರೀಯ ಉತ್ಪಾದನಾ ನೀತಿ, ರಾಷ್ಟ್ರೀಯ ಬಾಲಕಾರ್ಮಿಕ ನೀತಿ, ಕೌಶಲ್ಯಾಭಿವೃದ್ಧಿ ಕುರಿತ ರಾಷ್ಟ್ರೀಯ ನೀತಿ, ರಾಷ್ಟ್ರೀಯ ಉದ್ಯೋಗ ನೀತಿ, ಹೆಚ್‌ಐವಿ ಏಡ್ಸ್ ಕುರಿತಾದ ರಾಷ್ಟ್ರೀಯ ನೀತಿ ಮತ್ತು ವಿಶ್ವದ ಕೆಲಸ, ದುಡಿಯುವ ಸ್ಥಳಗಳಲ್ಲಿನ ಆರೋಗ್ಯ, ಪರಿಸರ ಮತ್ತು ರಾಷ್ಟ್ರೀಯ ಸುರಕ್ಷತಾ ನೀತಿ, ಮತ್ತಿತರ ನೀತಿಗಳಲ್ಲಿ ಆ ಬಗ್ಗೆ ಉಲ್ಲೇಖಿಸಲಾಗಿದೆ. ಹಿಂದಿನ ಕಾರ್ಮಿಕ ನೀತಿಯ ಕರಡು ಮೂರನೇ ಪಂಚವಾರ್ಷಿಕ ಯೋಜನೆ ಸಂದರ್ಭದಲ್ಲಿ ಸಿದ್ಧವಾಗಿತ್ತು. ಅದು ತೀರ ಹಳೆಯದು ಮತ್ತು ಈಗಿನ ಕಾಲಕ್ಕೆ ಅಪ್ರಸ್ತುತ. ಆ ರೀತಿ ಯಾವುದೇ ದಿಕ್ಸೂಚಿ ಅಥವಾ ದೂರದೃಷ್ಟಿ ಇಲ್ಲದ ಪ್ರಯತ್ನಗಳನ್ನು ನಡೆಸಿದ ಪರಿಣಾಮ ಭಾರತೀಯ ಕಾರ್ಮಿಕ ಮಾರುಕಟ್ಟೆ ಜಾಗತಿಕ ಮಾರುಕಟ್ಟೆಗೆ ಅನುಗುಣವಾಗಿ ಸರಳೀಕರಣಗೊಂಡಿಲ್ಲ. ಭಾರತೀಯ ಕಾರ್ಮಿಕ ಸುಧಾರಣೆಯ ಕೇಂದ್ರಬಿಂದು ಎಂದರೆ ದೇಶದ ಪುರಾತನ ಕಾರ್ಮಿಕ ಕಾನೂನುಗಳಲ್ಲಿ ಬದಲಾವಣೆ ತರುವುದಾಗಿದೆ. ಕೈಗಾರಿಕೆಗಳು ದೇಶದ ಕಾರ್ಮಿಕ



ಮಾರುಕಟ್ಟೆಯಲ್ಲಿರುವ ಸಂಪನ್ಮೂಲವನ್ನು ಯಾವುದೇ ಕಾನೂನಿನ ಭಯವಿಲ್ಲದೆ ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಬೇಕಾದರೆ ಈಗಿರುವ ಕಾರ್ಮಿಕ ಕಾನೂನುಗಳಲ್ಲಿರುವ ಗೊಂದಲಗಳು, ದ್ವಂದ್ವಾರ್ಥಗಳು ಮತ್ತು ಅಸಂಬದ್ಧ ಅಂಶಗಳನ್ನು ತೆಗೆದು ಹಾಕುವುದು ಅತ್ಯಂತ ಪ್ರಮುಖವಾಗಿದೆ. ಸೂಕ್ತ ಉದ್ಯೋಗಾವಕಾಶಗಳನ್ನು ದೊರಕಿಸಿಕೊಡುವ ಸಂಬಂಧ ಕಾರ್ಮಿಕ ಕಾನೂನುಗಳನ್ನು ಪೋಷಿಸಬೇಕಿದೆ. ನಾವು ಯಾವಾಗ ಈ ಜಾರಿ ಮನೋಭಾವ (ಕಠಿಣ ಕಾರ್ಮಿಕ ಕಾನೂನುಗಳ ಪರಿಣಾಮಗಳು)ದಿಂದ ಹೊರಬರುತ್ತೇವೆಯೋ ಆಗ ಜಾಗತಿಕ ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಮತ್ತು ಸೇವಾ ವಲಯದಲ್ಲಿ ನಮ್ಮ ಸ್ಥಾನ ಉತ್ತಮಗೊಳ್ಳುತ್ತದೆ. ಈಗಿರುವ ಕಾರ್ಮಿಕ ಕಾನೂನುಗಳನ್ನು ತೆಗೆದು ಏಕರೂಪದ ಕಾನೂನುಗಳನ್ನು ಜಾರಿಗೊಳಿಸಲು ಇದು ಸಕಾಲ. ಅದರಲ್ಲಿ ಕಾರ್ಮಿಕ – ಆಡಳಿತ ಮಂಡಳಿ ಸಂಬಂಧಗಳು, ವೇತನ, ಸಾಮಾಜಿಕ ಭದ್ರತೆ, ದುಡಿಯುವ ಸ್ಥಳದಲ್ಲಿ ರಕ್ಷಣೆ, ಕಲ್ಯಾಣ ಕಾರ್ಯಕ್ರಮಗಳು, ಉದ್ಯೋಗಿಗಳ ನಿಯಮ ಮತ್ತು ಷರತ್ತು, ಕಾರ್ಮಿಕ ಸಂಘಟನೆಗಳಿಗೆ ಮಾನ್ಯತೆ, ಸಾಮೂಹಿಕ ಹೊಣೆಗಾರಿಕೆ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಅಂತಾರಾಷ್ಟ್ರೀಯ ಕಾರ್ಮಿಕ ಗುಣಮಟ್ಟ ಜಾರಿ ಅಂಶಗಳು ಇರಬೇಕು. ಈ ರೀತಿಯ ಶಾಸನಾತ್ಮಕ ಕ್ರಮ ಎಲ್ಲ ಪ್ರಾದೇಶಿಕ ಸರ್ಕಾರಗಳಿಗೆ ಮಾದರಿಯಾಗಬೇಕು. ಇಂತಹ ಕೇಂದ್ರದ ಶಾಸನವನ್ನು ಬಹುತೇಕ ಎಲ್ಲ ಪ್ರಾದೇಶಿಕ ಸರ್ಕಾರಗಳು ಅಳವಡಿಸಿಕೊಳ್ಳಬಹುದು. ಇಲ್ಲವೆ ಅದೇ ಮಾದರಿಯನ್ನು ಅನುಸರಿಸಿ ಪ್ರಾದೇಶಿಕ ವಿಶೇಷತೆಗಳನ್ನು ಒಳಗೊಂಡ ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಕಾಯ್ದೆಯನ್ನು ರೂಪಿಸಿಕೊಳ್ಳಬಹುದು. ಅಂತಹ ಔಪಚಾರಿಕ ಹಾಗೂ ಅನೌಪಚಾರಿಕ ವಲಯಗಳಲ್ಲಿ ದುಡಿಯುವ ಎಲ್ಲ ಕಾರ್ಮಿಕರನ್ನು ಒಳಗೊಂಡ ಶಾಸನಾತ್ಮಕ ಕ್ರಮ ಏಕರೂಪವಾಗಿ ಇದ್ದಾಗ ಮಾತ್ರ ಅದು ಪರಿಣಾಮಕಾರಿಯಾಗಲಿದೆ.

ಅತ್ಯಂತ ವಿಸ್ತೃತ ಹಾಗೂ ಸಮಗ್ರ ಕಾರ್ಮಿಕ ನೀತಿ ಅಭಿವೃದ್ಧಿಗೊಳಿಸದೆ ಕಾರ್ಮಿಕ ಮಾರುಕಟ್ಟೆಯಲ್ಲಿ ಅಮೂಲಾಗ್ರ ಶಾಸನಾತ್ಮಕ ಬದಲಾವಣೆಗಳನ್ನು ತರಲು ಸಾಧ್ಯವಿಲ್ಲ. ಹಾಗಾಗಿ ಭಾರತ ಸರ್ಕಾರ, ಕೈಗಾರಿಕೆಗಳನ್ನು ಓಲೈಸಲು ಕಾರ್ಮಿಕ ಕಾನೂನುಗಳಿಗೆ ಯಾವುದೋ ಕೆಲವು ಸಣ್ಣಪುಟ್ಟ ತಿದ್ದುಪಡಿಗಳನ್ನು ಮಾಡುವುದಕ್ಕೆ ಬದಲಾಗಿ, ಕಾರ್ಮಿಕ ವಿಚಾರಗಳ ಕುರಿತಂತೆ ರಾಷ್ಟ್ರೀಯ ನೀತಿಯ ಚೌಕಟ್ಟು ಅಭಿವೃದ್ಧಿಗೊಳಿಸುವತ್ತ ಮೊದಲು ತನ್ನ ಗಮನಹರಿಸಬೇಕು. ಕಳೆದ 25 ವರ್ಷಗಳಿಂದ ಬಹಳಷ್ಟು ಅಧ್ಯಯನ, ಸಮಾಲೋಚನೆಗಳು ಹಾಗೂ ಸುಧಾರಣೆಗಳು ನಡೆದಿರುವ ಹಿನ್ನೆಲೆಯಲ್ಲಿ ಎಲ್ಲ ವರ್ಗದವರ ಹಿತ ಕಾಯುವಂತಹ ರಾಷ್ಟ್ರೀಯ ನೀತಿಯ ಕರಡು ಸಿದ್ಧಪಡಿಸುವುದು ಅತಿ ಸುಲಭವಾಗುತ್ತದೆ. ಉತ್ಪಾದನಾ ವಲಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಯಂತ್ರಗಳ ಬಳಕೆ ಹಿನ್ನೆಲೆಯಲ್ಲಿ ದೇಶದಲ್ಲಿ ಉದ್ಯೋಗಾವಕಾಶಗಳಿಲ್ಲದ ಮಾರುಕಟ್ಟೆ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಹಾಗಾಗಿ ಭಾರತ ಸರ್ಕಾರ ಹೊಸ ಹೊಸ ಅವಕಾಶಗಳ ಸೃಷ್ಟಿಯತ್ತ ಗಮನಹರಿಸುವುದು ಅಗತ್ಯ. 'ಮೇಕ್ ಇನ್ ಇಂಡಿಯಾ'ಕ್ಕೆ ಈಗಾಗಲೇ ಬಂಡವಾಳ ಹರಿದುಬರುತ್ತಿದೆ, ಆದರೆ ಅದಕ್ಕೆ ತಕ್ಕಂತೆ ಉತ್ಪಾದನಾ ವಲಯದಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತಿಲ್ಲ. ಆದ್ದರಿಂದ ಭಾರತ ಸರ್ಕಾರ, ದೇಶದ ಅತಿದೊಡ್ಡ ಯುವ ಸಮೂಹ ಉತ್ತಮ ಸಾಮರ್ಥ್ಯದೊಂದಿಗೆ ಸೇವಾ ವಲಯವನ್ನು ಪ್ರವೇಶಿಸಲು ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಅತ್ಯಗತ್ಯ. ಉನ್ನತ ಶಿಕ್ಷಣದಲ್ಲಿ ವೃತ್ತಿಪರ ತರಬೇತಿಯನ್ನು ಸೇರ್ಪಡೆಗೊಳಿಸಿದಾಗ ಇದನ್ನು ಸಾಧಿಸಬಹುದಾಗಿದೆ. ನಿಜವಾದ ಅರ್ಥದಲ್ಲಿ ಕಾರ್ಮಿಕ ಕಾನೂನುಗಳ ಸುಧಾರಣೆಗಳೆಂದರೆ, ಉತ್ಪಾದನಾ ಮತ್ತು ಸೇವಾ ವಲಯದ ಮೌಲ್ಯ ಹೆಚ್ಚಿಸುವಂತಹ ಕೌಶಲ್ಯಹೊಂದಿದ ಮಾನವ ಸಂಪನ್ಮೂಲ ಪೂರ್ಣ ಪ್ರಮಾಣದಲ್ಲಿ ಲಭ್ಯವಿರುವುದು, ಅದರೆ ಅಲ್ಲಿ ಕಾರ್ಖಾನೆಗಳ ಮುಖ್ಯಸ್ಥರು ಶೋಷಣೆಗೊಳಗಾಗಬಾರದು ಮತ್ತು ಅವರಿಗೆ ಭಯ ಇರಬಾರದು. ಹಾಗಾಗಿ, ಭಾರತ ಸರ್ಕಾರ ಇತ್ತೀಚೆಗೆ ಕೈಗೊಂಡಿರುವ ಕಾರ್ಮಿಕ ಕಾನೂನುಗಳ ಸುಧಾರಣಾ ಕ್ರಮ ಸ್ವಾಗತಾರ್ಹ, ಅದೇ ರೀತಿ ದುಡಿಯುವ ಶಕ್ತಿಗಳ ಸಾಮರ್ಥ್ಯ ಹೆಚ್ಚಳ ಮತ್ತು ಸಬಲೀಕರಣಕ್ಕೂ ಸರ್ಕಾರ ಹೆಚ್ಚಿನ ಒತ್ತು ನೀಡಬೇಕಾಗಿದೆ. ❑

ಕಾಳಜಿ

# ಅನೌಪಚಾರಿಕ ಕಾರ್ಮಿಕ ಮಾರುಕಟ್ಟೆ

* ಎ. ಸೃಜಾ



ಶಾಸನಗಳು ಮತ್ತು ಯೋಜನೆಗಳ ಜಾರಿಯು ಅನೌಪಚಾರಿಕ ಕಾರ್ಮಿಕರನ್ನು ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸಾಮಾಜಿಕ ಭದ್ರತೆಯ ವ್ಯಾಪ್ತಿಗೆ ತರುವುದರ ಜೊತೆಗೆ ವ್ಯವಸ್ಥಿತ ರೀತಿಯಲ್ಲಿ ಹೊಸ ಉದ್ಯೋಗಾವಕಾಶ ಸೃಷ್ಟಿಯನ್ನು ಕೂಡ ಖಾತರಿ ಮಾಡಬೇಕಿದೆ.

ಅನೌಪಚಾರಿಕ ವಲಯದಲ್ಲಿ ಶೇ. 92ರಷ್ಟು ಕಾರ್ಮಿಕರನ್ನು ಮತ್ತು ಶೇ. 10ಕ್ಕೂ ಕಡಿಮೆ ಉದ್ಯೋಗಿಗಳನ್ನು ಔಪಚಾರಿಕ ವಲಯದಲ್ಲಿ ಹೊಂದಿರುವ ಭಾರತದ ಕಾರ್ಮಿಕ ಮಾರುಕಟ್ಟೆಯು ಸಂಪೂರ್ಣ ವಿಭಿನ್ನವಾಗಿದೆ. ವಸಾಹತುಶಾಹಿ ಕಾಲದಿಂದಲೇ ಅಸ್ತಿತ್ವದಲ್ಲಿರುವ ಸಾಮಾಜಿಕ–ಆರ್ಥಿಕ ಕಾರಣಗಳು ಅಸಂಘಟಿತ ಕಾರ್ಮಿಕ ವಲಯ ಇಷ್ಟು ದೊಡ್ಡ ಪ್ರಮಾಣದಲ್ಲಿರಲು ಮುಖ್ಯ ಕಾರಣವಾಗಿವೆ. ವಸಾಹತುಶಾಹಿ ಆಡಳಿತ ಕಾಲದಲ್ಲಿ ಕಚ್ಚಾ ವಸ್ತುಗಳ ರಫ್ತು ಮತ್ತು ಸಿದ್ಧ ವಸ್ತುಗಳ ಆಮದನ್ನು ಉತ್ತೇಜಿಸುವ ಮಾದರಿಯ ಕೈಗಾರಿಕೀಕರಣವನ್ನು ಅನುಸರಿಸಲಾಗುತ್ತಿತ್ತು. ಬ್ರಿಟನ್‌ನಲ್ಲಿ ಆದ ಕೈಗಾರಿಕಾ ಕ್ರಾಂತಿ ಕೂಡ ಭಾರತದ ಆರ್ಥಿಕತೆಯ ಮೇಲೆ ಪ್ರಭಾವ ಬೀರಲು ವಿಫಲವಾಯಿತು. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಷ್ಟೇ ಕಾರ್ಖಾನೆ ಆಧರಿತ ತಯಾರಿಕೆ ಆರಂಭವಾಯಿತು ಮತ್ತು ಇದು ಯುದ್ಧದ ಅಗತ್ಯಗಳಿಗೆ ಅವಶ್ಯಕ ಕೂಡ ಆಗಿತ್ತು. ಆದ್ದರಿಂದ ಸ್ವಾತಂತ್ರ್ಯ ಬಂದ ಬಳಿಕ ನಮಗೆ ತೀರಾ ಬಡ ಆರ್ಥಿಕತೆ ಮತ್ತು ಜಾತಿ ಆಧರಿತ ಹಾಗೂ ಚಿಕ್ಕ ಸಂಖ್ಯೆಯ ಕಾರ್ಮಿಕ ವರ್ಗ ಮತ್ತು ಬಹುತೇಕ ಅಂತರ್ ಜಾತಿ ವೈಷಮ್ಯದಿಂದ ಕೂಡಿದ ಕೃಷಿಯೇತರ ಕಾರ್ಮಿಕ ವರ್ಗವಷ್ಟೇ ಉಳಿಯಿತು. ಉದ್ಯಮವು ಕೆಲವು ನಿರ್ದಿಷ್ಟ ಸಮುದಾಯಗಳಿಗೆ ಮಾತ್ರ ಸೀಮಿತವಾಗಿತ್ತು ಮತ್ತು ಕಾರ್ಮಿಕರ ಸಂಖ್ಯೆ ಕಡಿಮೆ ಅವಶ್ಯಕತೆಯಿರುವ ಕಬ್ಬಿಣ, ಉಕ್ಕು, ಗಣಿಗಾರಿಕೆ, ಜವಳಿ, ಮುದ್ರಣ ಕಾಗದ ಇತ್ಯಾದಿ ಕ್ಷೇತ್ರದಲ್ಲಿ ಕೈಗಾರಿಕೆಗಳು ತಲೆಯೆತ್ತಿದವು. ಸ್ವಾತಂತ್ರ್ಯದ ಬಳಿಕ ಹೆಚ್ಚು ಬಂಡವಾಳದತ್ತ ಗಮನ ನೀಡುವ ಮಹಾಲನೋಬಿಸಿಸ್ ಕಾರ್ಯತಂತ್ರವನ್ನು ಅನುಸರಿಸಲಾಯಿತು. ಜೊತೆಗೆ ಕೃಷಿಯೇತರ ವಲಯಕ್ಕಾಗಿ ಗ್ರಾಮೀಣ ಸಹಕಾರಿ ಸಂಘಗಳ ರಚನೆ ಮತ್ತು ಕೆಲವು ನಿರ್ದಿಷ್ಟ ಚಿಕ್ಕ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಮೀಸಲಾತಿಯ ಮೂಲಕ ಕಾರ್ಮಿಕ ಮಾರುಕಟ್ಟೆ ಅಭಿವೃದ್ಧಿಗೆ ಉತ್ತೇಜನ ನೀಡಲಾಯಿತು. ಕೃಷಿ, ಕರಕುಶಲ ವಸ್ತು ತಯಾರಿಕೆ, ಕೈಮಗ್ಗ, ಚಿಕ್ಕ ಮತ್ತು ಗ್ರಾಮೀಣ ಕೈಗಾರಿಕೆಗಳಂತಹ ಕಾರ್ಮಿಕರು ಹೆಚ್ಚು ಬೇಕಾಗುವ ಕೈಗಾರಿಕೆಗಳು ಅಭಿವೃದ್ಧಿ ಕಾಣದೆ ಹಾಗೂ ಚಿಕ್ಕ ಗಾತ್ರದವಾಗಿಯೇ ಉಳಿದಿದ್ದರಿಂದ ಕಾರ್ಮಿಕ ವರ್ಗ ಅನೌಪಚಾರಿಕವಾಗಿಯೇ ಉಳಿಯಿತು. 1977–78ರಲ್ಲಿ ಅಸಂಘಟಿತ ಕಾರ್ಮಿಕ ವಲಯದ ಉದ್ಯೋಗ ಪ್ರಮಾಣ ಶೇ. 92.2 ಆಗಿದ್ದರೆ, 1993–94ರಲ್ಲಿ ಇದು ಶೇ. 92.7 ಆಯಿತು. ಆದ್ದರಿಂದ 90ರ ದಶಕದ ಆರಂಭದಲ್ಲಿ ಕೈಗೊಳ್ಳಲಾದ ಉದಾರೀಕರಣ ಮತ್ತು ಜಾಗತೀಕರಣಕ್ಕೆ ಮೊದಲೇ ಐತಿಹಾಸಿಕವಾಗಿ ಭಾರತವು ದೊಡ್ಡ ಪ್ರಮಾಣದಲ್ಲಿ ಅನೌಪಚಾರಿಕ ಕಾರ್ಮಿಕ ವರ್ಗವನ್ನು ಹೊಂದಿದ್ದರೂ, ಆ ಬಳಿಕವಷ್ಟೇ ಅದು ಹೆಚ್ಚಾಗಿ ಗಮನಕ್ಕೆ ಬರುವಂತಾಯಿತು.

ಅಸಂಘಟಿತ ವಲಯದ ಉದ್ಯಮಕ್ಕಾಗಿನ ರಾಷ್ಟ್ರೀಯ ಆಯೋಗ (ಎನ್‌ಸಿಇಯುಎಸ್), ಅನೌಪಚಾರಿಕ/ಅಸಂಘಟಿತ ವಲಯವನ್ನು ಈ ರೀತಿ ವ್ಯಾಖ್ಯಾನಿಸಿದೆ. ಅದೇನೆಂದರೆ, 10ಕ್ಕಿಂತ ಕಡಿಮೆ ಕೆಲಸಗಾರರಿರುವ ಎಲ್ಲಾ ಏಕ ವ್ಯಕ್ತಿಯ ಮಾಲಿಕತ್ವ ಉದ್ಯಮ ಅಥವಾ ಮನೆ ಮಂದಿಯಿಂದಲೇ ಉತ್ಪನ್ನಗಳ ಮಾರಾಟದಲ್ಲಿ ತೊಡಗುವಿಕೆ ಮತ್ತು ಸರಕು ಉತ್ಪಾದನೆ ಮತ್ತು ಮಾಲಿಕರಿಂದಲೇ

* ನಿರ್ದೇಶಕರು, ನೀತಿ ಆಯೋಗ. E-mail : srija.a@nic.in

ಅಥವಾ ಪಾಲುದಾರಿಕೆ ಆಧಾರದಲ್ಲಿ ಸೇವಾ ಪೂರೈಕೆಯ ಎಲ್ಲಾ ನೊಂದಣಿಯಾಗದ ಖಾಸಗಿ ಉದ್ಯಮಗಳು ಎಂದು ವ್ಯಾಖ್ಯಾನ ಮಾಡಲಾಗಿದೆ. ಅನೌಪಚಾರಿಕ/ಅಸಂಘಟಿತ ಕಾರ್ಮಿಕ ವರ್ಗ ಸಂಘಟಿತ ಮತ್ತು ಅಸಂಘಟಿತ ವಲಯಗಳೆರಡರಲ್ಲೂ ಹರಡಿದ್ದು, ಎನ್‌ಸಿಇಯುಎಸ್ ಅವರನ್ನು ಈ ರೀತಿ ವ್ಯಾಖ್ಯಾನ ಮಾಡಿದೆ. 'ಅನೌಪಚಾರಿಕ ವಲಯದಲ್ಲಿ ಅಥವಾ ಉದ್ಯೋಗದಾತರಿಂದ ಸಾಮಾಜಿಕ ಭದ್ರತೆಯ ಲಾಭವನ್ನು ಪಡೆಯುವ ಗೃಹ ಉದ್ಯಮವನ್ನು ಹೊರತು ಪಡಿಸಿದ ಅನೌಪಚಾರಿಕ ವಲಯದ ನೌಕರರು ಮತ್ತು ಉದ್ಯೋಗದಾತರಿಂದ ಸಾಮಾಜಿಕ ಭದ್ರತೆಯ ಲಾಭವನ್ನು ಪಡೆಯದ ಔಪಚಾರಿಕ ವಲಯದ ನೌಕರರು' ಎಂದು ವ್ಯಾಖ್ಯಾನಿಸಲಾಗಿದೆ. ಎನ್‌ಸಿಇಯುಎಸ್ ವ್ಯಾಖ್ಯಾನವನ್ನು ಆಧರಿಸಿ ತಯಾರಿಸಲಾದ ಎನ್‌ಎಸ್‌ಎಸ್‌ಓ ಘಟಕ ಸ್ತರದ ಅನೌಪಚಾರಿಕ ಉದ್ಯೋಗ ದತ್ತಾಂಶಗಳು ಕೋಷ್ಟಕ-1 ರಲ್ಲಿವೆ.

ಹಿಂದೂ ಪ್ರಗತಿ ದರವನ್ನು ದಾಟಿದ ಮತ್ತು ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾದ ಭಾರತದ ಬದಲಾದ ಕೃಷಿ ವಲಯದ ಕಾರ್ಮಿಕ ಉದ್ಯೋಗಾವಕಾಶ, ರಚನಾತ್ಮಕ ಸ್ಥಿತ್ಯಂತರದ ಭಾಗವಾಗಿ ಇಳಿಮುಖವಾಯಿತು ಮತ್ತು ದೊಡ್ಡ ಪ್ರಮಾಣದಲ್ಲಿ ನಿರ್ಮಾಣ ಕ್ಷೇತ್ರ ಹಾಗೂ ಕಡಿಮೆ ಕೌಶಲ್ಯ ಬೇಡುವ ಅನೌಪಚಾರಿಕ ಉದ್ಯೋಗಾವಕಾಶವಾಗಿ ಬದಲಾಯಿತು.

ಉದಾರೀಕರಣದ ಬಳಿಕ ಜಾಗತಿಕ ಸ್ಪರ್ಧೆ ಹೆಚ್ಚಳ ಮತ್ತು ಮೀಸಲಾತಿ ಹಾಗೂ ಸಹಾಯಧನ ಹಿಂತೆಗೆತದಿಂದಾಗಿ ಅಪಾಯದ ಪ್ರಮಾಣ ಹೆಚ್ಚಳವಾಯಿತು. ಜೊತೆಗೆ ಉದ್ಯಮಿಗಳು ಕಾನೂನು ನಿಯಮ, ರಚನಾತ್ಮಕಕ ತೆರಿಗೆ, ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಸೇರಿದಂತೆ ಕಾರ್ಮಿಕ ಕಾನೂನುಗಳಿಂದ ರಕ್ಷಣೆ ಪಡೆಯಲು ಉದ್ಯಮವನ್ನು ಚಿಕ್ಕ ಪ್ರಮಾಣದಲ್ಲೇ ಉಳಿಸಿಕೊಂಡು ಹೋಗುವ ಪ್ರವೃತ್ತಿಯನ್ನು ಮುಂದುವರಿಸಿದರು. ಕಂಪನಿಯ ಗಾತ್ರವನ್ನು ಹೆಚ್ಚಿಸಲು ಉದ್ಯಮಿಗಳು ತೋರಿಸಿದ ನಿರಾಸಕ್ತಿಯಿಂದಾಗಿ ಉದಾರೀಕರಣದ ಬಳಿಕ ಸಾಂದರ್ಭಿಕ ಹಾಗೂ ಗುತ್ತಿಗೆ ಉದ್ಯೋಗಿಗಳ ಸಂಖ್ಯೆಯು ಹೆಚ್ಚುವಂತೆ ಮಾಡಿತು. ಬಳಿಕ ಬಹುರಾಷ್ಟ್ರೀಯ ಕಂಪನಿಗಳಿಂದ ಹೊರಗುತ್ತಿಗೆ ಹೆಚ್ಚಳ ಮತ್ತು ಆಂತರಿಕ ಉಪ ಗುತ್ತಿಗೆಯ ಹೆಚ್ಚಿ, ಖಾಯಂ ಉದ್ಯೋಗಿಗಳ ಬದಲಾಗಿ ತಾತ್ಕಾಲಿಕ ಉದ್ಯೋಗಿಗಳ ಸಂಖ್ಯೆ ಹೆಚ್ಚುವಂತೆ ಮಾಡಿತು. ಗುತ್ತಿಗೆ ಉದ್ಯೋಗಿಗಳ ನೇಮಕದಿಂದ ನೇಮಕಾತಿಯಲ್ಲಿ ಸ್ವಾತಂತ್ರ್ಯ ಮತ್ತು ಕೈಗಾರಿಕಾ ವಿವಾದಗಳ ಕಾಯ್ದೆ 1947ರ ಬಲದಿಂದ ಕೆಲಸದಿಂದ ವಜಾ ಮಾಡುವ ಸ್ವಾತಂತ್ರ್ಯ ಉದ್ಯಮಿಗಳಿಗೆ ಸಿಗುವಂತಾಗಿರುವುದು ಇದಕ್ಕೆ ಮುಖ್ಯ ಕಾರಣ. ತಂತ್ರಜ್ಞಾನದಲ್ಲಿ ಆದ ಕ್ಷಿಪ್ರ ಆವಿಷ್ಕಾರಗಳು ಉತ್ಪಾದನಾ ಕ್ಷೇತ್ರದ ಉತ್ಪನ್ನಗಳ ಜೀವಿತಾವಧಿಯನ್ನು ಕಡಿಮೆ ಮಾಡಿದ್ದರಿಂದ ಅನಿವಾರ್ಯವಾಗಿ ಹೊಸ ಸುಧಾರಿತ ಉತ್ಪನ್ನಗಳನ್ನು ತಯಾರಿಸುವಂತೆ ಮಾಡಿತು. ಆಮದು ಬಂಡವಾಳ ಸರಕಿಗೆ ರಿಯಾಯಿತಿ ಅಥವಾ ಸಂಪೂರ್ಣ ತೆರಿಗೆ ವಿನಾಯಿತಿ ನೀಡಲಾಯಿತು. ಉದ್ಯೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ಮೂಲಕ ಮತ್ತು ಬೇಡಿಕೆಯನ್ನು ಪೂರೈಸುವ ನಿಟ್ಟಿನಲ್ಲಿ ಗುತ್ತಿಗೆ ಕಾರ್ಮಿಕರಿಗೆ ಮೊರೆ ಹೋಗುವ ಮೂಲಕ ಈ ಸವಾಲನ್ನು ಚಿಕ್ಕ ಉತ್ಪಾದಕರು ಎದುರಿಸಲಾರಂಭಿಸಿದರು. ಸಾರ್ವಜನಿಕ ಕ್ಷೇತ್ರದಲ್ಲಿ ವೆಚ್ಚ ಕಡಿತದ ಅಂಗವಾಗಿ ನಡೆದ ಅನೌಪಚಾರಿಕತೆಯ ಹೆಚ್ಚಳ ಕೂಡ ಮತ್ತೊಂದು ಅಡ್ಡಿಯ ಪ್ರವೃತ್ತಿಯಾಗಿ ಕಂಡು ಬರುತ್ತಿದೆ. ಆರ್ಥಿಕ ಸಮೀಕ್ಷೆಯ ಪ್ರಕಾರ ಆರಕ್ಕಿಂತ ಕಡಿಮೆ ಕಾರ್ಮಿಕರಿರುವ ಘಟಕಗಳ ಸಂಖ್ಯೆ 1990ರಲ್ಲಿದ್ದ ಶೇ. 93ರಿಂದ 2013ರಲ್ಲಿ ಶೇ. 95.5ಕ್ಕೆ ಏರಿಕೆಯಾಗಿದೆ. ಇದೇ ವೇಳೆ 10 ಕಾರ್ಮಿಕರಿಗಿಂತ ಕಡಿಮೆಯಿರುವ ಘಟಕಗಳ ಶೇಕಡಾವಾರು ಪ್ರಮಾಣ ಇದೇ ಅವಧಿಯಲ್ಲಿ ಶೇ. 3.5ರಿಂದ ಶೇ. 3.1ಕ್ಕೆ ಇಳಿಕೆಯಾಗಿದೆ. 10ಕ್ಕಿಂತ ಹೆಚ್ಚು ಉದ್ಯೋಗಿಗಳಿರುವ ಘಟಕಗಳ ಸಂಖ್ಯೆ 1990ರಲ್ಲಿ ಶೇ. 3.1 ಇದ್ದರೆ 2013ರಲ್ಲಿ ಅದು ಶೇ. 1.4ಕ್ಕೆ ಇಳಿಯಿತು. ಜೊತೆಗೆ ಉದ್ಯೋಗಿಗಳ ಪಾಲು ಕೂಡ ಇದೇ ಅವಧಿಯಲ್ಲಿ ಅನುಕ್ರಮವಾಗಿ ಶೇ. 37.1ರಿಂದ ಶೇ. 21.2ಕ್ಕೆ ಇಳಿಕೆಯಾಯಿತು.

**ಕೋಷ್ಟಕ-1 ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿನ ಔಪಚಾರಿಕ ಮತ್ತು ಅನೌಪಚಾರಿಕ ಉದ್ಯೋಗಗಳು**
**(ದಶಲಕ್ಷಗಳಲ್ಲಿ, ಆವರಣವು ಶೇಕಡಾವಾರು ಪಾಲನ್ನು ಸೂಚಿಸುತ್ತದೆ)**

| | | | |
|---|---|---|---|
| **1999–2000** | | | |
| | **ಸಂಘಟಿತ** | **ಅಸಂಘಟಿತ** | **ಒಟ್ಟು** |
| **ಔಪಚಾರಿಕ** | 33.7 (62.3) | 1.4 (0.41) | 35 (8.8) |
| **ಅನೌಪಚಾರಿಕ** | 20.5 (37.9) | 341.3 (99.6) | 361.7 (91.2) |
| ಒಟ್ಟು | 54.1 (13.6) | 342.6 (86.3) | 396.8 100 |
| **2004–05** | | | |
| | **ಸಂಘಟಿತ** | **ಅಸಂಘಟಿತ** | **ಒಟ್ಟು** |
| **ಔಪಚಾರಿಕ** | 32.06 (52) | 1.35 (0.3) | 33.41 (7.30) |
| **ಅನೌಪಚಾರಿಕ** | 29.54 (48) | 396.66 (99.7) | 426.2 (92.7) |
| ಒಟ್ಟು | 61.61 (13) | 398.01 (87) | 459.61 100 |
| **2011–12** | | | |
| | **ಸಂಘಟಿತ** | **ಅಸಂಘಟಿತ** | **ಒಟ್ಟು** |
| **ಔಪಚಾರಿಕ** | 37.18 (45.4) | 1.39 (1.4) | 38.56 (8.1) |
| **ಅನೌಪಚಾರಿಕ** | 44.74 (54.6) | 390.92 (99.6) | 435.66 (91.9) |
| ಒಟ್ಟು | 81.92 (17.3) | 392.31 (82.7) | 474.23 100 |
| **ಮೂಲ : ಎನ್‌ಎಸ್‌ಎಸ್‌ಓ ಉದ್ಯೋಗ-ನಿರುದ್ಯೋಗದ ಘಟಕವಾರು ದತ್ತಾಂಶಗಳ ಆಧಾರದಲ್ಲಿ ಲೆಕ್ಕ ಹಾಕಲಾಗಿದೆ** | | | |
| **ಸಮೀಕ್ಷೆ 1999–2000, 2004–05 ಮತ್ತು 2011–12** | | | |



ಗುತ್ತಿಗೆ ಉದ್ಯೋಗಿಗಳು/ಸಾಂದರ್ಭಿಕ ಉದ್ಯೋಗಿಗಳ ಸಂಖ್ಯೆ ಹೆಚ್ಚಳದಿಂದ ಉದ್ಯೋಗ ಭದ್ರತೆ, ವೈಯಕ್ತಿಕ ಮತ್ತು ಕುಟುಂಬಕ್ಕೆ ವೈದ್ಯಕೀಯ ಸೌಲಭ್ಯ, ಪಿಂಚಣಿ, ಉದ್ಯೋಗ ಪರಿಹಾರಧನ, ಕನಿಷ್ಠ ವೇತನ, ಹೆಚ್ಚುವರಿ ಗಂಟೆ ಕೆಲಸಕ್ಕಾಗಿ ಹೆಚ್ಚುವರಿ ವೇತನ, ಉದ್ಯೋಗ ಸ್ಥಳದಲ್ಲಿ ಎದುರಾಗುವ ಸಮಸ್ಯೆಗಳು ಸೇರಿದಂತೆ ಸಾಮಾಜಿಕ ಭದ್ರತೆ ಕಳೆದುಕೊಳ್ಳುವ ಸನ್ನಿವೇಶವನ್ನು ಎದುರಿಸುವಂತಾಯಿತು. ಅನೌಪಚಾರಿಕ ಉದ್ಯೋಗ ವಲಯ ಹೆಚ್ಚುತ್ತಿರುವುದನ್ನು ತಡೆಯಲು ಹಲವಾರು ಸಮಿತಿಗಳು ಮತ್ತು ಆಯೋಗಗಳನ್ನು ರಚಿಸಲಾಯಿತು. ಇವುಗಳ ಪೈಕಿ ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗ (2002), '10ನೇ ಪಂಚ ವಾರ್ಷಿಕ ಯೋಜನೆ ಅವಧಿಯೊಳಗೆ (2002) ವಾರ್ಷಿಕ 10 ದಶಲಕ್ಷ ಉದ್ಯೋಗಾವಕಾಶ ಸೃಷ್ಟಿ' ಕುರಿತ ಎಸ್. ಪಿ. ಗುಪ್ತಾ ವರದಿ, 10 ದಶ ಲಕ್ಷ ಉದ್ಯೋಗಾವಕಾಶ ಸೃಷ್ಟಿಗೆ ಕಾರ್ಯಪಡೆ (2002), ಅಸಂಘಟಿತ ವಲಯದಲ್ಲಿನ ಉದ್ಯೋಗಕ್ಕಾಗಿ ರಾಷ್ಟ್ರೀಯ ಆಯೋಗ (2004–2008) ಮುಖ್ಯವಾದವು. ಕಾರ್ಮಿಕ ವರ್ಗವು ಬಹುತೇಕ ಅವಿದ್ಯಾವಂತರಾಗಿದ್ದು, ತೀರಾ ಕಡಿಮೆ ಕೌಶಲ್ಯ ಹೊಂದಿರುವುದು ಈ ವರದಿಗಳಿಂದ ಬೆಳಕಿಗೆ ಬಂದಿತು. ಇದು ಅವರನ್ನು ಕೃಷಿ ಕ್ಷೇತ್ರದಿಂದ ಉತ್ಪಾದನಾ ಸೇವಾ ಕ್ಷೇತ್ರಕ್ಕೆ ವರ್ಗಾಯಿಸಲು ತಡೆಯಾಗಿರುವುದು ತಿಳಿದು ಬಂದಿತು. ಕೃಷಿ ಕ್ಷೇತ್ರದಿಂದ ಕಡಿಮೆ ಕೌಶಲ್ಯ ಅವಶ್ಯಕವಾಗುವ ನಿರ್ಮಾಣ ವಲಯ, ಚಿಲ್ಲರೆ ಮಾರಾಟದ ಸ್ವಯಂ ಉದ್ಯಮ, ಖಾಸಗಿ ವಾಹನ ಚಾಲಕ ಸೇರಿದಂತೆ ಸಾರಿಗೆ ವಲಯ, ಮನೆಗೆಲಸ, ಗೃಹ ಆಧರಿತ ಕಾರ್ಮಿಕರು ಅಥವಾ ಭದ್ರತಾ ಸಿಬ್ಬಂದಿಯಂತ ವಲಯಕ್ಕೆ ಕಾರ್ಮಿಕ ಮಾರುಕಟ್ಟೆಯ ರಚನಾತ್ಮಕ ಸ್ಥಿತ್ಯಂತರವಾಯಿತು. ಆಯೋಗ/ ಸಮಿತಿಗಳ ಶಿಫಾರಸುಗಳು ಕಾರ್ಮಿಕ ಕಾನೂನು ಸುಧಾರಣೆ, ಕೌಶಲ್ಯ ಅಭಿವೃದ್ಧಿ, ವೃತ್ತಿಪರ ತರಬೇತಿ ಇತ್ಯಾದಿಗಳತ್ತ ಕೇಂದ್ರೀಕೃತವಾಗಿತ್ತು.

### ಕಾನೂನು ನೀತಿ

ಕಡಿಮೆ ಕೌಶಲ್ಯದ ಉದ್ಯೋಗ ವಲಯಗಳು ಅಂದರೆ ನಿರ್ಮಾಣ, ಕಟ್ಟಡ ಮತ್ತಿತರ ನಿರ್ಮಾಣ ಕಾರ್ಮಿಕರ ಹಿತಾಸಕ್ತಿ ರಕ್ಷಣೆಗಾಗಿ ಜಾರಿಗೆ ಬಂದ ಪ್ರಮುಖ ನೀತಿಗಳೆಂದರೆ, ಉದ್ಯೋಗಾವಕಾಶ ನಿಯಂತ್ರಣ ಮತ್ತು ಸೇವಾ ಷರತ್ತು ಕಾಯ್ದೆ 1996. ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಮೇಲ್ತೆರಿಗೆ ಕಾಯ್ದೆ 1996ನ್ನು ಇಂತಹ ಕಾರ್ಮಿಕರ ವೇತನ ನಿಯಂತ್ರಣ, ಕೆಲಸ ಮಾಡುವ ಪರಿಸ್ಥಿತಿ, ಸುರಕ್ಷತೆ ಮತ್ತು ಆರೋಗ್ಯ, ಕಲ್ಯಾಣ ಕ್ರಮ ಇತ್ಯಾದಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಜಾರಿಗೆ ತರಲಾಯಿತು. ಅಸಂಘಟಿತ ವಲಯದ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತೆಗಾಗಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ ಕಾಯ್ದೆ 2008ನ್ನು ಜಾರಿಗೊಳಿಸಲಾಯಿತು. ಇದನ್ನು ಹೊರತು ಪಡಿಸಿ ಸಮಾಜ ಕಲ್ಯಾಣದ ಭಾಗವಾಗಿ 2008ರಲ್ಲಿ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ (ವಿಮಾ) ಯೋಜನೆಯನ್ನು ಆರಂಭಿಸಿ, ಈ ಮೂಲಕ ಅಸಂಘಟಿತ ವಲಯದ ಕಾರ್ಮಿಕರ ಕೈಗೆಟುಕದ ವೈದ್ಯಕೀಯ ವೆಚ್ಚವನ್ನು ಭರಿಸಲು ಕ್ರಮ ಕೈಗೊಳ್ಳಲಾಯಿತು. ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರು, ರೈಲ್ವೆ ಕಾರ್ಮಿಕರು, ಬೀದಿ ವ್ಯಾಪಾರಿಗಳು, ಎಂಎನ್ಆರ್ಇಜಿಎ ಕೆಲಸಗಾರರು, ಮನೆಗೆಲಸದವರು, ಆಟೋ ಮತ್ತು ಟ್ಯಾಕ್ಸಿ ಚಾಲಕರು, ರಿಕ್ಷಾ ತಳ್ಳುವವರು, ಚಿಂದಿ ಆಯುವವರು, ಬೀಡಿ ಕಾರ್ಮಿಕರು, ಗಣಿ ಕಾರ್ಮಿಕರು ಮತ್ತು ನೈರ್ಮಲ್ಯ ಕೆಲಸಗಾರರು ಸೇರಿದಂತೆ ಅಸಂಘಟಿತ ವಲಯದ ಹಲವಾರು ವಿಭಾಗಗಳು ಈ ಯೋಜನೆಯ ವ್ಯಾಪ್ತಿಗೆ ಬರುತ್ತದೆ. 2016ರ ಮಾರ್ಚ್ 31ಕ್ಕೆ ಅನ್ವಯವಾಗುವಂತೆ ದೇಶದಲ್ಲಿ ಒಟ್ಟು 41.3 ಕೋಟಿ ಆರ್ಎಸ್‌ಬಿವೈ ಸ್ಮಾರ್ಟ್ ಕಾರ್ಡ್‌ದಾರರಿದ್ದಾರೆ.

ಗುತ್ತಿಗೆ ಕಾರ್ಮಿಕ ವಲಯದ ನಿಯಂತ್ರಣಕ್ಕೆ ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ರದ್ದು) ಕಾಯ್ದೆ 1970 ಇದೆ. ಆದರೆ ಇದರ ವ್ಯಾಪ್ತಿ 20ಕ್ಕಿಂತ ಹೆಚ್ಚು ಕಾರ್ಮಿಕರಿರುವ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿದ್ದು, ಇದರಿಂದ ದೊಡ್ಡ ಸಂಖ್ಯೆಯಲ್ಲಿ ಗುತ್ತಿಗೆ ಕಾರ್ಮಿಕರು ಈ ಕಾಯ್ದೆಯ ವ್ಯಾಪ್ತಿಯಿಂದ ಹೊರಗುಳಿದಿದ್ದಾರೆ. ಅಂತರ್ ರಾಜ್ಯ ವಲಸೆ ಕಾರ್ಮಿಕರನ್ನು ನಿಯಂತ್ರಿಸಲು ಮತ್ತು ಅವರ ಸೇವಾ ಪರಿಸ್ಥಿತಿಯನ್ನು ಸುಧಾರಿಸಲು ಅಂತರ್ ರಾಜ್ಯ ವಲಸೆ ಕಾರ್ಮಿಕ (ಉದ್ಯೋಗಾವಕಾಶ ನಿಯಂತ್ರಣ ಮತ್ತು ಸೇವಾ ಷರತ್ತು) ಕಾಯ್ದೆ 1979ನ್ನು ಜಾರಿಗೆ ತರಲಾಗಿದೆ. ಈ ಕಾಯ್ದೆಯು ಸ್ಥಳೀಯ ಕಾರ್ಮಿಕರಷ್ಟೇ ಸಮಾನ ವೇತನ, ವೇತನ ನಷ್ಟವಿಲ್ಲದೆ ಕಾಲಾನುಕಾಲಕ್ಕೆ ತವರು ಊರಿಗೆ ಮರಳುವ ಹಕ್ಕು, ವೈದ್ಯಕೀಯ ವೆಚ್ಚದ ಹಕ್ಕು ಮತ್ತು ಉದ್ಯೋಗಾವಕಾಶ ಸ್ಥಳದಲ್ಲಿ ಮನೆ

**ಕೋಷ್ಟಕ – 2 ಸಂಸ್ಥೆಗಳ ಗಾತ್ರ – ಉದ್ಯೋಗಾವಕಾಶ ಪ್ರಮಾಣದ ಹಂಚಿಕೆ (ಶೇಕಡಾದಲ್ಲಿ)**

| ಕ್ರಮ ಸಂಖ್ಯೆ | ಉದ್ಯೋಗಿಗಳ ಸಂಖ್ಯೆ | ವಿವರ | ಆರ್ಥಿಕ ಸಮೀಕ್ಷೆ ನಡೆದ ವರ್ಷ | | | |
|---|---|---|---|---|---|---|
| | | | 1990 | 1998 | 2005 | 2013 |
| 1 | 1–5 | ಸಂಸ್ಥೆ | 93.4 | 94.0 | 95.4 | 95.5 |
| | | ಉದ್ಯೋಗಾವಕಾಶ | 54.5 | 58.6 | 67.3 | 69.5 |
| 2 | 6–9 | ಸಂಸ್ಥೆ | 3.5 | 3.3 | 3.4 | 3.1 |
| | | ಉದ್ಯೋಗಾವಕಾಶ | 8.4 | 8.3 | 10.3 | 9.3 |
| 3 | 10 ಅಥವಾ ಅದಕ್ಕಿಂತ ಹೆಚ್ಚು | ಸಂಸ್ಥೆ | 3.1 | 2.8 | 1.3 | 1.3 |
| | | ಉದ್ಯೋಗಾವಕಾಶ | 37.1 | 33.1 | 22.4 | 21.2 |

ಮೂಲ : ಐದು ಮತ್ತು ಆರನೇ ಆರ್ಥಿಕ ಸಮೀಕ್ಷೆ – ಅಖಿಲ ಭಾರತ ವರದಿ



ಇತ್ಯಾದಿ ಸೇರಿದಂತೆ ವಲಸೆ ಕಾರ್ಮಿಕರ ಕಲ್ಯಾಣಕ್ಕಾಗಿ ಹಲವಾರು ಅಂಶಗಳನ್ನು ಒಳಗೊಂಡಿದೆ. ಆದರೆ ಈ ಕಾಯ್ದೆಯ ಅಂಶಗಳು ಸಮರ್ಪಕವಾಗಿ ಜಾರಿಯಾಗದೆ ವಲಸೆ ಕಾರ್ಮಿಕರು ದುಸ್ಥಿತಿಯಲ್ಲೇ ಮುಂದುವರಿಯುವಂತಾಗಿದೆ. ಇದನ್ನು ಹೊರತು ಪಡಿಸಿ ನಿರ್ದಿಷ್ಟ ಉದ್ಯೋಗ ವಿಭಾಗಳಾದ ಸಿನಿಮಾ ವಿಭಾಗದ ಕೆಲಸಗಾರರು, ಗಣಿ ಕಾರ್ಮಿಕರು, ಬೀಡಿ ಮತ್ತು ಸಿಗಾರ್ ಕಾರ್ಮಿಕರು ಮೊದಲಾದವರ ಕಲ್ಯಾಣಕ್ಕಾಗಿ ಹಲವಾರು ಶಾಸನಗಳಿವೆ. ಆದರೆ ಈ ಕಾಯ್ದೆಯ ಅಂಶಗಳ ಬಗ್ಗೆ ನಿರ್ಲಕ್ಷ್ಯ ಅಥವಾ ಅರಿವಿಲ್ಲದಿರುವಿಕೆ ಮತ್ತು ಕೌಶಲ್ಯ ರಹಿತ ಕಾರ್ಮಿಕರ ಅತಿಯಾದ ಪೂರೈಕೆಯಿಂದ ಚೌಕಾಸಿಯ ಸಾಮರ್ಥ್ಯ ಕಳೆದುಕೊಂಡಿರುವುದರಿಂದ ಅಸಂಘಟಿತ ಕಾರ್ಮಿಕ ವಲಯದ ಉದ್ಯೋಗಿಗಳ ಪರಿಸ್ಥಿತಿ ಶೋಚನೀಯವಾಗಿಯೇ ಮುಂದುವರಿದಿದೆ.

ಅನೌಪಚಾರಿಕ ವಲಯದ ಸಮಗ್ರ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ನೀಡುವ ಗುರಿಯೊಂದಿಗೆ 18ರಿಂದ 40 ವರ್ಷ ವಯಸ್ಸಿನವರ ಸದಸ್ಯತ್ವವನ್ನು ಆಧರಿಸಿ 60 ವರ್ಷ ತಲುಪಿದ ಬಳಿಕ ಮಾಸಿಕ 1,000 ರೂ. ಕನಿಷ್ಠ ಪಿಂಚಣಿ ಒದಗಿಸುವ ಅಟಲ್ ಪಿಂಚಣಿ ಯೋಜನೆ, ವಾರ್ಷಿಕ 12 ರೂ. ಪ್ರೀಮಿಯಂನಲ್ಲಿ ಅಪಘಾತ ಮತ್ತು ಅಂಗವೈಕಲ್ಯಕ್ಕಾಗಿ 2 ಲಕ್ಷ ರೂ. ನೀಡುವ ಪ್ರಧಾನ ಮಂತ್ರಿ ಸುರಕ್ಷಾ ಬಿಮಾ (ವಿಮಾ) ಯೋಜನೆ ಮತ್ತು 330 ರೂ. ವಾರ್ಷಿಕ ಪ್ರೀಮಿಯಂನಲ್ಲಿ 2 ಲಕ್ಷ ರೂ. ಜೀವ ವಿಮೆ ಒದಗಿಸುವ ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನಾ ಮೊದಲಾದ ಹಲವಾರು ಯೋಜನೆಗಳಿವೆ. ಇದಲ್ಲದೆ ಬಿತ್ತನೆಗೆ ಮೊದಲಿನಿಂದ ಹಿಡಿದು ಫಸಲು ನಾಶದ ಹಂತದವರೆಗೆ ಬೆಳೆ / ಹಾನಿಗೊಳಗಾದ ರೈತರಿಗೆ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನಾ ಹಣಕಾಸು ನೆರವು ಒದಗಿಸುತ್ತದೆ.

ಪ್ರಧಾನ ಮಂತ್ರಿ ರೋಜ್‌ಗಾರ್ ಪ್ರೋತ್ಸಾಹನ್ ಯೋಜನಾ ಅಡಿಯಲ್ಲಿ ಸರ್ಕಾರವು ಉದ್ಯೋಗಿಗಳ ಭವಿಷ್ಯ ನಿಧಿಗೆ ಉದ್ಯೋಗದಾತರಿಂದ ಶೇ. 8.33 ಭಾಗವನ್ನು ನೀಡುವಂತೆ ಮಾಡಿದೆ ಮತ್ತು ಒಂದು ವೇಳೆ ಜವಳಿ ವಲಯವಾದರೆ 2016ರ ಏಪ್ರಿಲ್ ಬಳಿಕ ತೆರೆಯಲಾದ ಎಲ್ಲಾ ಹೊಸ ಖಾತೆಗಳಿಗೆ ಉದ್ಯೋಗದಾತರ ಶೇ. 12 ಭಾಗವನ್ನು ಸಂಪೂರ್ಣವಾಗಿ ಸರ್ಕಾರವೇ ಭರಿಸುತ್ತದೆ. ಇದು ಚಿಕ್ಕ ಸಂಸ್ಥೆಗಳು ಹೆಚ್ಚು ಕೆಲಸಗಾರರನ್ನು ನೇಮಕ ಮಾಡಿಕೊಂಡು ಅವರಿಗೆ ಸಾಮಾಜಿಕ ಭದ್ರತೆಯ ಲಾಭ ನೀಡಲು ಉತ್ತೇಜನ ನೀಡಿದೆ.

ಉದ್ಯೋಗದಾತರು ಕೆಲಸಗಾರರಿಗೆ ಶಿಷ್ಯ ವೃತ್ತಿ (ಅಪ್ರೆಂಟೀಸ್) ನೀಡುವುದನ್ನು ಉತ್ತೇಜಿಸಲು ರಾಷ್ಟ್ರೀಯ ತರಬೇತಿ ಉತ್ತೇಜನಾ ಯೋಜನೆಯನ್ನು ಆರಂಭಿಸಲಾಗಿದ್ದು, ಇದರಲ್ಲಿ ಶಿಷ್ಯವೃತ್ತಿ ಮಾಡುತ್ತಿರುವವರಿಗೆ ನಿಗದಿತ ಮಾಸಿಕ ಗರಿಷ್ಠ 1,500 ರೂ. ಸ್ಟೈಪೆಂಡಿನಲ್ಲಿ ಶೇ. 25ರಷ್ಟನ್ನು ಸರ್ಕಾರವೇ ಭರಿಸುತ್ತದೆ. ಜೊತೆಗೆ ಮೂಲ ತರಬೇತಿ ಅಂದರೆ ಹೊಸಬರಿಗೆ (ಯಾವುದೇ ಔಪಚಾರಿಕ ತರಬೇತಿಯಿಲ್ಲದೆ ನೇರವಾಗಿ ಶಿಷ್ಯವೃತ್ತಿ ತರಬೇತಿಗೆ ಸೇರಿಕೊಂಡವರು) ಗರಿಷ್ಠ 500 ಗಂಟೆ / 3 ತಿಂಗಳಿಗೆ ಗರಿಷ್ಠ 7,500 ರೂ. ಶಿಷ್ಯ ವೇತನ ನಿಗದಿ ಪಡಿಸಲಾಗಿದೆ.

ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ್ ಯೋಜನಾ ಮತ್ತು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳು 20ಕ್ಕೂ ಹೆಚ್ಚು ಸಚಿವಾಲಯಗಳಲ್ಲಿ ಜಾರಿಗೆ ಬರಲಿರುವ ನಡುವೆಯೇ, ಕೌಶಲ್ಯ ಭಾರತ ಮಿಷನ್ ಅಡಿಯಲ್ಲಿ ಕಾರ್ಮಿಕ ವರ್ಗಕ್ಕೆ ಪ್ರವೇಶಿಸುವ ಹೊಸಬರನ್ನು ಕೌಶಲ್ಯಪೂರ್ಣಗೊಳಿಸುವ ಮೂಲಕ ಇನ್ನಷ್ಟು ಉತ್ತಮ ವೇತನ ಸಿಗುವ ಕೆಲಸ ಪಡೆಯಲು ನೆರವು ನೀಡಲಾಗುತ್ತದೆ. ಉದ್ಯಮ ಆರಂಭವನ್ನು ಸರಳಗೊಳಿಸುವ ನಿಟ್ಟಿನಲ್ಲಿ ನೊಂದಣಿ, ಕಾರ್ಮಿಕ ಕಾನೂನು ಜಾರಿ ಮತ್ತು ಪರಿವೀಕ್ಷಣೆ ಮೊದಲಾದ ಪ್ರಕ್ರಿಯೆಗಳನ್ನು ಸರಳಗೊಳಿಸುವ ಮೂಲಕ ಇನ್ನಷ್ಟು ಹೆಚ್ಚು ಸಂಖ್ಯೆಯಲ್ಲಿ ಉದ್ಯಮ ಸ್ಥಾಪನೆಯ ಮೂಲಕ ಗುಣಮಟ್ಟದ ಉದ್ಯೋಗಾವಕಾಶ ಸೃಷ್ಟಿಗೆ ಅವಕಾಶ ಮಾಡಿಕೊಡಲಾಗಿದೆ. "ಮೇಕ್ ಇನ್ ಇಂಡಿಯಾ', ಡಿಜಿಟಲ್ ಇಂಡಿಯಾ, ಸ್ವಚ್ಛ ಭಾರತ್ ಅಭಿಯಾನ್ ದಂತಹ ಮಹತ್ವಾಕಾಂಕ್ಷೆಯ ಯೋಜನೆಗಳು ಉದ್ಯೋಗಾವಕಾಶ ಸೃಷ್ಟಿಗೆ ಅವಕಾಶ ನೀಡುತ್ತಿವೆ. ಇದಲ್ಲದೆ ಸ್ಟಾರ್ಟ್ ಅಪ್ ಇಂಡಿಯಾ, ಸ್ಟ್ಯಾಂಡ್ ಅಪ್ ಇಂಡಿಯಾ, ಮುದ್ರಾ, ಅಸ್ಪೈರ್, ಅಟಲ್ ಇನೋವೇಶನ್ ಮಿಷನ್, ಪ್ರಧಾನ ಮಂತ್ರಿ ಯುವ ಯೋಜನಾ ಇತ್ಯಾದಿ ಉದ್ಯಮಶೀಲತೆ ಉತ್ತೇಜನ ಯೋಜನೆಗಳು ಉದ್ಯಮಗಳನ್ನು ಹೆಚ್ಚಿಸುವ ಮೂಲಕ ಹೆಚ್ಚು ವೇತನದ ಉದ್ಯೋಗ ಸೃಷ್ಟಿಗೆ ನಾಂದಿ ಹಾಡಲಿವೆ.

ಒಟ್ಟಿನಲ್ಲಿ ಶಾಸನಗಳು ಮತ್ತು ಯೋಜನೆಗಳ ಜಾರಿಯು ಅನೌಪಚಾರಿಕ ಕಾರ್ಮಿಕರನ್ನು ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸಾಮಾಜಿಕ ಭದ್ರತೆಯ ವ್ಯಾಪ್ತಿಗೆ ತರುವುದರ ಜೊತೆಗೆ ವ್ಯವಸ್ಥಿತ ರೀತಿಯಲ್ಲಿ ಹೊಸ ಉದ್ಯೋಗಾವಕಾಶ ಸೃಷ್ಟಿಯನ್ನು ಕೂಡ ಖಾತರಿ ಮಾಡಬೇಕಿದೆ. ❑


# ಯೋಜನಾ

## ಮೇ 2017 ಸಂಚಿಕೆಯ ವಿಷಯ

# ಪ್ರಗತಿ ಪಥದಲ್ಲಿ ದೇಶ

# ಕಾರ್ಮಿಕ ನೀತಿ ಮತ್ತು ಕಲ್ಯಾಣ-ವಿಶ್ಲೇಷಣೆ

* ಪ್ರದೀಪ್ ಅಗರ್‌ವಾಲ್



ಜಪಾನಿ ಶೈಲಿಯ ನಮ್ಯತೆಯನ್ನು ಹೊಂದಿದ ವೇತನ ವ್ಯವಸ್ಥೆಯನ್ನು ಕೊರಿಯಾ, ತೈವಾನ್, ಮಲೇಶಿಯಾ ಮತ್ತು ಸಿಂಗಾಪುರ ದೇಶಗಳೂ ಅಳವಡಿಸಿಕೊಂಡಿವೆ. ಉದ್ಯೋಗಿಗಳಿಗೆ ತಮ್ಮ ಸಂಸ್ಥೆಗೆ ಬಂದಿರುವ ಲಾಭವನ್ನು ಆಧರಿಸಿ ಲಾಭಾಂಶವನ್ನು ಹಂಚುವ ಕ್ರಮ ಉದ್ಯೋಗಿಗಳು ಹೆಚ್ಚು ಸಹಕಾರಿ ಮನೋಭಾವದವರು ಹಾಗೂ ಜವಾಬ್ದಾರಿ ಹೊಂದಿದವರೂ ಆಗುವಂತೆ ಮಾಡುತ್ತದೆ.

ದೇಶದ ಕ್ಷಿಪ್ರ ಆರ್ಥಿಕ ಬೆಳವಣಿಗೆಗೆ ಕಾರ್ಮಿಕ ಕಲ್ಯಾಣಗಳ ದಕ್ಷ ಬಳಕೆಯು ಅತ್ಯಗತ್ಯವಾಗಿದೆ. ಇದೇ ಸಮಯದಲ್ಲಿ ಕಾರ್ಮಿಕನು ಉತ್ಪಾದಕತೆಯ ಅನನ್ಯ ಅಂಶವಾಗಿರುತ್ತಾನೆ, ಏಕೆಂದರೆ ಕೆಲಸಗಾರರು ಮನುಷ್ಯರೇ ವಿನಃ ಸರಕುಗಳಲ್ಲ. ಆದ್ದರಿಂದ ಕಾರ್ಮಿಕ ನೀತಿಗಳು ಅವರಿಗಾಗಿ ನಿರ್ದಿಷ್ಟ ಸಾಮಾಜಿಕ ಕಲ್ಯಾಣಗಳ ಆಯಾಮವನ್ನು ಹೊಂದಿರಬೇಕಾಗುತ್ತದೆ. ಆದ್ದರಿಂದಲೇ ಕಾರ್ಮಿಕ ಮಾರುಕಟ್ಟೆ ನೀತಿಗಳ ಮೇಲೆ ಅಭಿಪ್ರಾಯಗಳು ತೀವ್ರವಾಗಿ ವಿಂಗಡಿಸಲ್ಪಟ್ಟಿವೆ. ಕಲ್ಯಾಣ ಅಥವಾ ಸಾಮಾಜಿಕ ಅಂಶಗಳನ್ನು ಪ್ರತಿಪಾದಿಸಿದ ವ್ಯಕ್ತಿಗಳು ಉದ್ಯೋಗ ಕಡಿತ ಇನ್ನಿತರೆ ಸಂದರ್ಭಗಳಲ್ಲಿ ಒಕ್ಕೂಟಗಳನ್ನು ರಚಿಸುವ ಸ್ವಾತಂತ್ರ್ಯ, ಕನಿಷ್ಠ ವೇತನ ಕಾನೂನುಗಳು, ಕೆಲವು ಪ್ರಮಾಣದ ಉದ್ಯೋಗ ಸುರಕ್ಷತೆ, ನಿರುದ್ಯೋಗ ವಿಮೆ, ಅನುದಾನಿತ ಸೌಲಭ್ಯಗಳ ಪರವಾಗಿಯೂ ಪದೇ ಪದೇ ವಾದ ಮಂಡಿಸಿದ್ದಾರೆ. (ಉದಾಹರಣೆಗಾಗಿ ನೋಡಿ, ಸ್ಟಾಂಡಿಂಗ್ ಅಂಡ್ ತೊಕ್ಮನ್, 1991; ಐಎಲ್ಓ, 1990, ಭಾದುರಿ, 1996). ಕಾರ್ಮಿಕ ಮಾರುಕಟ್ಟೆಗಳ ದಕ್ಷತೆಯ ಅಂಶಗಳಿಗೆ ಅತ್ಯಂತ ಪ್ರಾಮುಖ್ಯತೆಯನ್ನು ನೀಡುವವರು ಹೀಗೆ ವಾದ ಮಾಡಿದರು. ಉದ್ಯೋಗ ಭದ್ರತೆ ಅನುಬಂಧಗಳಂತಹ ವಿಷಯಗಳಲ್ಲಿ ಸರ್ಕಾರದ ಮಧ್ಯಪ್ರವೇಶವು ಉದ್ಯೋಗ, ಉತ್ಪಾದಕತೆ ಮತ್ತು ಅಭಿವೃದ್ಧಿಯನ್ನು ಕಡಿತಗೊಳಿಸಬಹುದು ಹಾಗೂ ಆ ಮೂಲಕ ಕೆಲಸಗಾರರಿಗೆ ದೀರ್ಘಾವಧಿಯಲ್ಲಿ ತೊಂದರೆ ಉಂಟಾಗಬಹುದು (ಉದಾ. ನೋಡಿ, ಕ್ರುಗೇರ್, 1974; ಒಲ್ಸಾನ್, 1982; ಲೇಜಿಯರ್, 1990; ಫಾಲನ್ ಅಂಡ್ ಲುಕಾಸ್, 1991 ಅಂಡ್ 1993; ಮೆಹ್ತಾ, 1995). ಅವರು ಪದೇ ಪದೇ ಮುಂದಿನ ಅಂಶಗಳನ್ನು ಒಳಗೊಂಡ ನೀತಿಗಳನ್ನು ಪ್ರತಿಪಾದಿಸಿದರು: (1) ಉತ್ತಮವಾಗಿ ಕೆಲಸ ಮಾಡಿರುವುದಕ್ಕೆ ವೇತನ, ಲಾಭಾಂಶ ಮತ್ತು ಭಡ್ತಿ ನೀತಿಗಳ ಮೂಲಕ ಸೂಕ್ತವಾದ ಕೆಲಸದ ಪ್ರೋತ್ಸಾಹಧನಗಳನ್ನು ನೀಡುವ ಮೂಲಕ ಹಾಗೂ ಸರಿಯಾದ ಶಿಕ್ಷಣ ಮತ್ತು ತರಬೇತಿ ಮೂಲಕ ಕಾರ್ಮಿಕರನ್ನು ಸಾಧ್ಯವಾದಷ್ಟು ಹೆಚ್ಚಿನ ಉತ್ಪಾದಕರನ್ನಾಗಿ ಮಾಡಿ, (2) ಕಾರ್ಮಿಕ ಮತ್ತು ವ್ಯವಸ್ಥಾಪಕ ಮಂಡಳಿ ನಡುವಿನ ವಿವಾದಕ್ಕೆ ಪರಿಹಾರ ಹುಡುಕಲು ಸರಿಯಾದ ಕಾರ್ಯವಿಧಾನವನ್ನು ರಚಿಸುವ ಮೂಲಕ ಮೃದು ಕೈಗಾರಿಕಾ ಸಂಬಂಧಗಳನ್ನು ದೃಢಪಡಿಸಿಕೊಳ್ಳಿ. ಇದರಿಂದ ಧರಣಿಗಳು ಇತರ ಕಾರಣಗಳಿಂದ ಕೆಲಸದ ದಿನಗಳು ನಷ್ಟವಾಗುವುದನ್ನು ಕಡಿಮೆಗೊಳಿಸಬಹುದು, (3) ಸುಲಭ ವಜಾಗೊಳಿಸುವಿಕೆಗೆ ಅವಕಾಶ ನೀಡುವ ಮೂಲಕ ಮತ್ತು ಕೆಲಸಗಾರರಿಗೆ ಮರು ತರಬೇತಿ ನೀಡುವ ಮೂಲಕ ಆರ್ಥಿಕತೆಗೆ ತಗಲುವ ವಿವಿಧ ಆಘಾತಗಳೊಂದಿಗೆ ಹೆಚ್ಚು ಪರಿಣಾಮಕಾರಿಯಾಗಿ ವರ್ತಿಸಲು ಹಾಗೂ ಅದರ ಕ್ಷೇತ್ರೀಯ ತುಲನಾತ್ಮಕ ಪ್ರಯೋಜನ ಇತ್ಯಾದಿ ಪಲ್ಲಟಗಳ ಜೊತೆಗೆ ಕಾರ್ಮಿಕರನ್ನು ಹೊಂದಿಕೊಳ್ಳುವಂತೆ ಬಳಸುವುದಕ್ಕಾಗಿ ಸಿದ್ಧವಾಗಿಟ್ಟುಕೊಳ್ಳಬೇಕು, ಮತ್ತು (4) ಕಾರ್ಮಿಕ ಮಾರುಕಟ್ಟೆಯಲ್ಲಿ ವದಂತಿ ಹಾಗೂ ಮಧ್ಯಸ್ಥಿಕೆಗಳನ್ನು ಕನಿಷ್ಠಗೊಳಿಸಿ.

ನೈಜವಾಗಿ, ತೋರಿಕೆಯಲ್ಲಿ ವಿರುದ್ಧವಾದ ಈ ಅಂಶಗಳು ಮುಖ್ಯವಾಗಿವೆ ಹಾಗೂ ಆಯ್ಕೆಯು ಒಂದು ಅಥವಾ ಇತರರ ಮಧ್ಯೆ ಇರದೆ, ಎರಡರ ಮಧ್ಯೆ ಸರಿಯಾಗಿ

* ಅರ್ಥ ಶಾಸ್ತ್ರದ ಚೇರ್ ಪ್ರೊಫೆಸರ್ – ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಆರ್ಥಿಕ ಅಭಿವೃದ್ಧಿಯ ಶಿಕ್ಷಣ ಸಂಸ್ಥೆ, ದೆಹಲಿ. E-mail : pradeep@iegindia.org

ಸಮತೋಲನ ಮಾಡುವುದರ ಮಧ್ಯೆ ಇರುತ್ತದೆ. ಹೀಗೆ ಹೆಚ್ಚಿನ ದೇಶಗಳು ಈ ತೀವ್ರ ಸ್ಥಾನಗಳ ಮಧ್ಯೆಯೆ ಕಾರ್ಮಿಕ ನೀತಿಗಳನ್ನು ಅನುಸರಿಸಿವೆ. ಸ್ವಲ್ಪ ಮಟ್ಟಿಗೆ, ಆಯ್ಕೆಯು ಕೂಡ ಅಭಿವೃದ್ಧಿಯ ಮಟ್ಟವನ್ನು ಹಾಗೂ ದೇಶದಲ್ಲಿನ ನಿರುದ್ಯೋಗದ ಮಟ್ಟವನ್ನು ಅವಲಂಬಿಸಿರುತ್ತದೆ. ದೇಶವು ಅಭಿವೃದ್ಧಿ ಹೊಂದಿದ್ದಾಗ ಹಾಗೂ ಸಂಪೂರ್ಣ ಉದ್ಯೋಗೀಕರಣಕ್ಕೆ ಹತ್ತಿರವಿರುವಾಗ, ಅದು ಹೆಚ್ಚು ಕಲ್ಯಾಣ ಆಧರಿತವಾಗಿರುವುದನ್ನು ತಾಳಿಕೊಳ್ಳಬಹುದು, ಆಗ ನಿರುದ್ಯೋಗಿಗಳಾಗುವ ಸಣ್ಣ ಪ್ರಮಾಣದ ಕೆಲಸಗಾರರಿಗೆ ಸಹಾಯ ಮಾಡಬೇಕಾಗುತ್ತದೆ ಅಷ್ಟೇ. ಏನೇ ಆದರೂ ಕೈಗಾರಿಕೀಕರಣದ ಮುಂಚಿನ ಹಂತಗಳಲ್ಲಿ, ವಿಶೇಷವಾಗಿ ದೊಡ್ಡ ಸಂಖ್ಯೆಯ ಜನರು ಸಂಪೂರ್ಣವಾಗಿ ಅಥವಾ ಲಾಭದಾಯಕ ಉದ್ಯೋಗ ಹೊಂದಿರದಿದ್ದಲ್ಲಿ, ದಕ್ಷತೆ ಅಂಶಗಳತ್ತ ಗಮನ ಹರಿಸಬೇಕಾಗುತ್ತದೆ. ಅಂತೆಯೇ, ಹೆಚ್ಚು ತೆರೆದ ಆರ್ಥಿಕತೆಗಳನ್ನು ಹೊಂದಿರುವ ದೇಶಗಳು ರಫ್ತುಗಳಿಗೆ ಒತ್ತು ನೀಡುತ್ತಿದ್ದರೆ ಮತ್ತು ವಿದೇಶಿ ನೇರ ಬಂಡವಾಳವನ್ನು ಆಕರ್ಷಿಸುತ್ತಿದ್ದರೆ, ರಫ್ತು ಮಾರುಕಟ್ಟೆಗಳಲ್ಲಿ ಸ್ಪರ್ಧಿಸಲು ಹಾಗೂ ವಿದೇಶಿ ನೇರ ಬಂಡವಾಳ ಆಕರ್ಷಿಸುವಲ್ಲಿ ತಮ್ಮ ಕಾರ್ಮಿಕರನ್ನು ದಕ್ಷರನ್ನಾಗಿ ಮಾಡಬೇಕಾಗುತ್ತದೆ. ಹೀಗೆ ಅವರು ದಕ್ಷತೆಯ ಅಂಶಕ್ಕೆ ಒತ್ತು ನೀಡಲು ಹೆಚ್ಚು ಇಚ್ಛಿಸುತ್ತಾರೆ.

ಉತ್ಪಾದಿತ ಸರಕುಗಳನ್ನು ರಫ್ತು ಮಾಡುವ ಜಗತ್ತಿನ ಅತಿದೊಡ್ಡ ದೇಶವಾದ ಚೀನಾವನ್ನು ನೋಡಿದಾಗ, ಅದು ಕಾರ್ಮಿಕರ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದಲೇ ಸ್ಥಾಪಿತವಾದಂತಹ ಕಮ್ಯುನಿಸ್ಟ್ ಪಕ್ಷದ ಆಡಳಿತ ಇರುವ ದೇಶವಾದರೂ, ಕಾರ್ಮಿಕರ ಬಳಕೆಯಲ್ಲಿ ದಕ್ಷತೆ ಮತ್ತು ಉತ್ಪಾದಕತೆಯನ್ನು ದೃಢಪಡಿಸುವ ವಿಷಯದಲ್ಲಿ ಕೊಂಚ ಪ್ರಾಯೋಗಿಕವಾದ ಕಾರ್ಮಿಕ ಕಾನೂನುಗಳನ್ನು ಅಳವಡಿಸಿಕೊಂಡಿದೆ. ಚೀನಾದ ಕಾರ್ಮಿಕ ಕಾನೂನುಗಳು ಅನಿರ್ದಿಷ್ಟ ಕಾಲಾವಧಿಯ (ಅಥವಾ ಕಾಯಂ) ಉದ್ಯೋಗ ಹೊಂದಿರುವ ಉದ್ಯೋಗಿಗಳನ್ನು ಕೂಡ ಗಂಭೀರ ರೂಪದ ಕಾರ್ಮಿಕ ಶಿಸ್ತು ಅಥವಾ ಉದ್ಯೋಗಿಗಳ ನಿಯಮಗಳು ಮತ್ತು ಕಾನೂನುಗಳನ್ನು ಉಲ್ಲಂಘಿಸಿದರೆ, ಕರ್ತವ್ಯದ ಗಂಭೀರ ಲೋಪಗಳಿಗೆ ಅಥವಾ ಭ್ರಷ್ಟರಾದರೆ ವಜಾಗೊಳಿಸಬಹುದು.



ಅಲ್ಲದೇ, ನಿರ್ದಿಷ್ಟ ಗಡುವು ದಿನಾಂಕವನ್ನು ಹೊಂದಿದ ಒಪ್ಪಂದಗಳೊಂದಿಗೂ ಉದ್ಯೋಗಿಗಳನ್ನು ನೇಮಿಸಿಕೊಳ್ಳಬಹುದು ಹಾಗೂ ಗಡುವು ಮುಗಿದ ನಂತರ ಮುಂದುವರಿಸಲ್ಪಡದ ಉದ್ಯೋಗಿಗಳಿಗೆ ಯಾವುದೇ ರೀತಿಯ ಬೇರ್ಪಡುವಿಕೆಯ ವೇತನ ಇತ್ಯಾದಿಯನ್ನು ಪಾವತಿಸಬೇಕಾಗಿಲ್ಲ. ಉದ್ಯೋಗದಾತ ಸಂಸ್ಥೆಯು ಉತ್ಪಾದನೆ ಅಥವಾ ಕಾರ್ಯಾಚರಣೆಯಲ್ಲಿ ಗಂಭೀರ ರೂಪದ ಸಮಸ್ಯೆಗಳನ್ನು ಎದುರಿಸುತ್ತಿರುವಾಗ (ಮುಖ್ಯವಾದ ಮರುಸ್ಥಾಪನೆ, ವ್ಯವಹಾರ ಅಥವಾ ರಫ್ತು ಮಾರುಕಟ್ಟೆ, ಇನ್ನಿತರ ವಿಷಯದಲ್ಲಿ ಹಿನ್ನಡೆಯಾದ ಕಾರಣದಿಂದ ಉತ್ಪಾದನೆಯಲ್ಲಿ ದೊಡ್ಡ ಪ್ರಮಾಣದ ಕಡಿತ ಉಂಟಾದರೆ) ಗಣನೀಯ ಸಂಖ್ಯೆಯ ಉದ್ಯೋಗಿಗಳನ್ನು ವಜಾಗೊಳಿಸಲೂ ಅವಕಾಶವಿದೆ. ಏನೇ ಆದರೂ ಇಂತಹ ವಜಾಗೊಳಿಸುವಿಕೆಗೆ ಕನಿಷ್ಠ 1 ತಿಂಗಳುಗಳ ನೋಟೀಸ್ ಅವಧಿ ಮತ್ತು ಸೇವೆ ಸಲ್ಲಿಸಿದ ಪ್ರತಿ ವರ್ಷಕ್ಕಾಗಿ ಒಂದು ತಿಂಗಳಿನ ಬೇರ್ಪಡುವಿಕೆಯ ವೇತನವನ್ನು ನೀಡಬೇಕಾಗುತ್ತದೆ. ಇಂತಹ ಬೇರ್ಪಡುವಿಕೆಯ ವೇತನವನ್ನು ಒಬ್ಬನೇ ಉದ್ಯೋಗಿಯನ್ನು ತೆಗೆದು ಹಾಕಿದರೂ ನೀಡಬೇಕಾಗುತ್ತದೆ. ಉದ್ಯೋಗಿಯು ತನ್ನ ಅಶಿಸ್ತು ಅಥವಾ ಇತರ ಪ್ರಮುಖ ತಪ್ಪುಗಳಿಗಾಗಿ ತೆಗೆದುಹಾಕಲ್ಪಟ್ಟಿದ್ದರೆ ಇದು ಅನ್ವಯವಾಗುವುದಿಲ್ಲ. ಕಾರ್ಮಿಕ ಕಾನೂನುಗಳು ರಫ್ತು ಪ್ರಕ್ರಿಯೆ ವಲಯಗಳಲ್ಲಿ ಇನ್ನಷ್ಟು ಹೆಚ್ಚು ನಮ್ಯವಾಗಿರುತ್ತವೆ. ಇಲ್ಲಿ ಮಾಲಿಕರು ಹೆಚ್ಚು ಕಡಿಮೆ ಅನಿರ್ದಿಷ್ಟ ಪ್ರಮಾಣದಲ್ಲಿ ನೇಮಿಸಿಕೊಳ್ಳುವ ಮತ್ತು ವಜಾಗೊಳಿಸುವ ಹಕ್ಕು ಹೊಂದಿರುತ್ತಾರೆ. ವಿದೇಶಿ ನೇರ ಬಂಡವಾಳ ಆಕರ್ಷಿಸಲು ಹಾಗೂ ರಫ್ತುಗಳಲ್ಲಿ ಹೆಚ್ಚಿನ ಅನಿಶ್ಚಿತತೆ ಮತ್ತು ಏರಿಳಿತ ಇರುವ ಕಾರಣ ಉತ್ಪಾದನೆಯಲ್ಲಿ ಅತಿ ಹೆಚ್ಚು ನಮ್ಯತೆ ಅಗತ್ಯವಿರುವಾಗ ಹೀಗೆ ಮಾಡಲಾಗುತ್ತದೆ. ಈ ಕಾನೂನುಗಳು ಶಿಸ್ತುಬದ್ಧ ಮತ್ತು ದಕ್ಷತ ಕೆಲಸದ ಶಕ್ತಿಯನ್ನು ದೃಢಪಡಿಸಲು ಸಹಾಯ ಮಾಡುತ್ತವೆ.

ಇಂಡೋನೇಶಿಯಾ, ಥೈಲ್ಯಾಂಡ್, ಮಲೇಶಿಯಾ, ತೈವಾನ್ ಮತ್ತು ದಕ್ಷಿಣ ಕೊರಿಯಾದಂತಹ ಪೂರ್ವ ಮತ್ತು ಆಗ್ನೇಯ ಏಶಿಯಾದ ಹೆಚ್ಚಿನ ದೇಶಗಳಲ್ಲಿ ದೇಶದಿಂದ ದೇಶಕ್ಕೆ ಭಿನ್ನ ಕಾನೂನುಗಳು ಇದ್ದರೂ ಹೆಚ್ಚು ಕಡಿಮೆ ಇಂತಹುದೇ ನೀತಿಗಳನ್ನು ಹೊಂದಿವೆ. ಈ ದೇಶಗಳಲ್ಲಿ ಹೆಚ್ಚಿನವು ಅವುಗಳ ಆರ್ಥಿಕತೆಗಳು ದೃಢಗೊಂಡಂತೆ ಕಾರ್ಮಿಕ ಕಾನೂನುಗಳನ್ನು ಶಕ್ತಿಯುತಗೊಳಿಸಿವೆ. ಈಗ ಅವು ಉದ್ಯೋಗಿಯು ಕೆಲಸ ಮಾಡುವ ಕೊನೆಯ ದಿನದಂದು ನೀಡುವ ಬೇರ್ಪಡುವಿಕೆಯ ವೇತನದಲ್ಲಿ ಕೆಲಸ ಮಾಡಿದ ಪ್ರತಿ ವರ್ಷಕ್ಕೆ ಒಂದು ತಿಂಗಳಿನ (ಅಥವಾ ಅವುಗಳಲ್ಲಿ ಒಂದು ಭಾಗ) ವೇತನವನ್ನು ನೀಡಬೇಕಾಗುತ್ತದೆ. ಸೇವೆಯ ದೀರ್ಘಾವಧಿಗೆ ತಕ್ಕಂತೆ ಗರಿಷ್ಠ 8 ರಿಂದ 12 ತಿಂಗಳುಗಳ ವೇತನಗಳನ್ನು (ಒಂದು ವೇಳೆ, 20 ವರ್ಷ ಎಂದರೂ ಕೂಡ) ನೀಡಬೇಕಾಗುತ್ತದೆ. ಸಿಂಗಾಪುರದಲ್ಲಿ, 3 ವರ್ಷಗಳಿಗಿಂತ ಕಡಿಮೆ ಅವಧಿಗೆ ಕೆಲಸ ಮಾಡಿದ ಉದ್ಯೋಗಿಗಳು ಅಥವಾ ವ್ಯವಸ್ಥಾಪಕ ಸ್ಥಾನಗಳಲ್ಲಿ ಇರುವವರಿಗೆ ಬೇರ್ಪಡುವಿಕೆಯ ವೇತನ ನೀಡಬೇಕಾಗಿಲ್ಲ. ಹೆಚ್ಚಿನ ಪೂರ್ವ ಏಶಿಯಾ ರಾಷ್ಟ್ರಗಳು ಹಲವು ತಿಂಗಳುಗಳ ವೇತನಗಳಿಗೆ ಸಮನಾದ ದೊಡ್ಡ ಮೊತ್ತದ ಲಾಭಾಂಶಗಳನ್ನು ನೀಡುವ ಸಂಪ್ರದಾಯವನ್ನೂ ಹೊಂದಿವೆ. ಏನೇ ಆದರೂ ಲಾಭಾಂಶವು ನಿರ್ದಿಷ್ಟವಾಗಿಲ್ಲ ಮತ್ತು ಸಂಸ್ಥೆಗಳ ಲಾಭದೊಂದಿಗೆ ಸಂಪರ್ಕ ಹೊಂದಿವೆ ಮತ್ತು ಪ್ರತಿ ಉದ್ಯೋಗಿಯ ಕಾರ್ಯನಿರ್ವಹಣೆ ಮೌಲ್ಯಮಾಪನವನ್ನು ಅವಲಂಬಿಸಿವೆ. ಇವು ಉದ್ಯೋಗಿಗಳಲ್ಲಿ ಸಹಕಾರ ಮನೋಭಾವನೆ ದೃಢಪಡಿಸಲು ಸಹಾಯವಾಗುತ್ತದೆ ಹಾಗೂ ಸಂಸ್ಥೆಯ ದಕ್ಷ ಮತ್ತು ಸುಗಮ ಕೆಲಸಕ್ಕೆ ಸಹಾಯ ಮಾಡುತ್ತದೆ.

ಹೆಚ್ಚಿನ ಯೂರೋಪಿಯನ್ ದೇಶಗಳು ಇಂತಹ ಕಾನೂನುಗಳನ್ನು ಹೊಂದಿವೆ (ಮೂಲದಲ್ಲಿ ಐರೋಪ್ಯ ದೇಶಗಳು ಹೊಂದಿದ್ದ ಕಾರ್ಮಿಕ ರಕ್ಷಣಾ ಚೌಕಟ್ಟನ್ನು ಕಾಲಾನುಕ್ರಮದಲ್ಲಿ ಪೂರ್ವ ಏಶಿಯಾ ದೇಶಗಳು ಅಳವಡಿಸಿಕೊಂಡವು). ಏನೇ ಆದರೂ, ಐರೋಪ್ಯ ದೇಶಗಳು ಹೆಚ್ಚು ಅಭಿವೃದ್ಧಿ ಹೊಂದಿವೆ ಮತ್ತು ನಿರುದ್ಯೋಗದ ಕುರಿತು ಕಡಿಮೆ ವಿವಾದಗಳನ್ನು ಹೊಂದಿವೆ. ಕಾರ್ಮಿಕ ಕಾನೂನುಗಳು ಸ್ವಲ್ಪ ಪ್ರಮಾಣದಲ್ಲಿ

ಹೆಚ್ಚು ಉದ್ಯೋಗಿಗಳ ಪರವಾಗಿವೆ. ಆದಾಗ್ಯೂ, ಅವುಗಳಲ್ಲಿ ಹೆಚ್ಚಿನವು ಉದ್ಯೋಗಿಗಳು ಅಶಿಸ್ತು ಅಥವಾ ಅದಕ್ಷತೆ ಹೊಂದಿದ್ದರೆ ವಜಾಗೊಳಿಸಲು ಮತ್ತು ಸಂಸ್ಥೆಯೊಂದು ಗಂಭೀರ ಕಾರ್ಯನಿರ್ವಹಣೆ ಸಮಸ್ಯೆಗಳನ್ನು ಹೊಂದಿದ್ದರೆ ಹಾಗೂ ತನ್ನ ಉತ್ಪಾದನೆಯನ್ನು ಕಡಿತಗೊಳಿಸಬೇಕಾಗಿದ್ದರೆ ವಜಾಗೊಳಿಸಲು ಅವಕಾಶ ನೀಡುತ್ತವೆ. ಭಾರತದ ಕಾರ್ಮಿಕ ಕಾನೂನುಗಳು ಬ್ರಿಟನ್ನಲ್ಲಿ ಹತ್ತೊಂಬತ್ತನೇ ಶತಮಾನದಲ್ಲಿ ಸೃಷ್ಟಿಯಾದವು. ವಿನಾಕಾರಣ ವಜಾ ಶಾಸನವು ಮಾಲಿಕನಿಗೆ ಕೆಲಸಗಾರರನ್ನು ವಜಾಗೊಳಿಸಲು ಈ ಸಂದರ್ಭಗಳಲ್ಲಿ ಮಾತ್ರ ಅವಕಾಶ ನೀಡುತ್ತದೆ: (1) ವಜಾಗೊಳಿಸಲು ನ್ಯಾಯಬದ್ಧ ಕಾರಣವನ್ನು ಹೊಂದಿದೆ; ಮತ್ತು (2) ನ್ಯಾಯಬದ್ಧ ಮತ್ತು ಸಮಂಜಸವಾದ ಪ್ರಕ್ರಿಯೆಯನ್ನು ಪಾಲಿಸುತ್ತದೆ. ಇಲ್ಲಿ ಒಟ್ಟೂ ಐದು ಕಾರಣಗಳಿದ್ದು, ಅವನ್ನು ಕಾನೂನಿನಡಿ ನ್ಯಾಯಬದ್ಧ ಕಾರಣಗಳೆಂದು ಪರಿಗಣಿಸಲಾಗಿದೆ: (ಎ) ಪುನರುಕ್ತಿ (ಮಾಲಿಕನೋರ್ವ ಉದ್ಯೋಗಿಗಳ ಸಂಖ್ಯೆಯನ್ನು ನಿರ್ದಿಷ್ಟ ವಿಷಯದಲ್ಲಿ ಮತ್ತು/ ಅಥವಾ ನಿರ್ದಿಷ್ಟ ಸ್ಥಳದಲ್ಲಿ ಕಡಿಮೆಗೊಳಿಸುತ್ತಾನೆ); (ಬಿ) ತಪ್ಪು ಕಾರ್ಯಾಚರಣೆ (ಸಿ) ಸಾಮರ್ಥ್ಯ (ಅಂದರೆ, ಕಾರ್ಯನಿರ್ವಹಣೆ ವಿವಾದಗಳು ಅಥವಾ ಉದ್ಯೋಗವೊಂದನ್ನು ಮಾಡುವುದರಲ್ಲಿ ಸಾಮರ್ಥ್ಯ ಕೊರತೆ); (ಡಿ) ಉದ್ಯೋಗ ಮುಂದುವರಿಸುವುದು ಕಾನೂನು ಕರ್ತವ್ಯವನ್ನು ಉಲ್ಲಂಘಿಸಬಹುದಾದಲ್ಲಿ (ಅನರ್ಹಗೊಳಿಸಿದ ಚಾಲಕನನ್ನು ಚಾಲನೆಯಲ್ಲಿ ಮುಂದುವರಿಸಲು ಅವಕಾಶ ನೀಡಿದಂತೆ); ಮತ್ತು (ಇ) ಇನ್ನು ಕೆಲವು ಎಲ್ಲಾ ವರ್ಗಕ್ಕೆ ಸೇರಿದ ಗಮನಾರ್ಹ ಕಾರಣಗಳು. ಬ್ರಿಟನ್ನಲ್ಲಿ ಮತ್ತು ಕೆಲವು ಯೂರೋಪ್ ಐರೋಪ್ಯ ದೇಶಗಳಲ್ಲಿ, ನಿರ್ದಿಷ್ಟ–ಅವಧಿಯ ಒಪ್ಪಂದಗಳ ಗಡುವನ್ನೇ ವಜಾ ಎಂದು ಪರಿಗಣಿಸಲಾಗುವುದು. ಏನೇ ಆದರೂ, ಬ್ರಿಟನ್ನಲ್ಲಿ ಮಾತ್ರ ಬೇರ್ಪಡುವಿಕೆಯ ವೇತನವಾಗಿ ಕೆಲಸ ಮಾಡಿದ ಪ್ರತಿ ವರ್ಷಕ್ಕೆ ಒಂದು ವಾರದಂತೆ ಗರಿಷ್ಠ ಮೂರು ತಿಂಗಳ ವೇತನಗಳನ್ನು ನೀಡಬೇಕಾಗುತ್ತದೆ. ಏನೇ ಆದರೂ, ಪಾಶ್ಚಿಮಾತ್ಯ ಐರೋಪ್ಯ ದೇಶಗಳು ಅಭಿವೃದ್ಧಿ ಹೊಂದಿವೆ ಮತ್ತು ಅತಿ ಹೆಚ್ಚು ಆದಾಯ ಹೊಂದಿದ ದೇಶಗಳಾಗಿದ್ದು, ಜೊತೆಗೆ ಉತ್ತಮವಾಗಿ ಅಭಿವೃದ್ಧಿ ಹೊಂದಿದ ಸಾಮಾಜಿಕ ಸುರಕ್ಷತಾ ವ್ಯವಸ್ಥೆಯನ್ನು



ಹೊಂದಿವೆ. ಅಲ್ಲದೇ, ನಿರುದ್ಯೋಗಿಗಳಿಗೆ ಸಮಂಜಸವಾದ ಹಣವನ್ನು ನೀಡುತ್ತವೆ ಎಂಬುದನ್ನು ಪರಿಗಣಿಸಬೇಕಾಗುತ್ತದೆ. ಅಂತಿಮವಾಗಿ, ಎಲ್ಲ ಕಾರ್ಮಿಕ ರಕ್ಷಣಾ ನಿಯಮಗಳು ಕಾನೂನು ಮಾದರಿಯಲ್ಲಿದ್ದು, ಇವನ್ನು ಕಾರ್ಮಿಕ ನ್ಯಾಯಮಂಡಳಿಗಳು ಅಥವಾ ನ್ಯಾಯಾಲಯಗಳ ಮೂಲಕ ಜಾರಿಗೆ ತರಬೇಕಾಗುತ್ತದೆ ಎಂಬುದನ್ನು ಗಮನಿಸಬೇಕು. ಭಾರತದಲ್ಲಿ ಹೀಗಿಲ್ಲ. 100ಕ್ಕೂ ಹೆಚ್ಚು ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಯೊಂದು ಕೆಲಸಗಾರನೋರ್ವನನ್ನು ತೆಗೆದುಹಾಕಲು ಸರ್ಕಾರದಿಂದ ಒಪ್ಪಿಗೆ ಪಡೆಯಬೇಕಾಗಿದ್ದು, (ಸರಿಯಾಗಿ ಯೋಚಿಸುವ ಯಾವುದೇ ರಾಜಕಾರಣಿಯು ವ್ಯಾಪಾರ ಒಕ್ಕೂಟಗಳಿಂದ ಪ್ರತಿಕೂಲ ಪರಿಣಾಮ ಉಂಟಾಗುವ ಭಯದಿಂದ ಒಪ್ಪಲು ಸಾಧ್ಯವಿಲ್ಲ) ವಜಾಗಳು ದೇಶದ ಕಾನೂನು ಪ್ರಕಾರ ಇವೆ ಎಂಬುದನ್ನು ಸಂಸ್ಥೆಗಳು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಬೇಕಾಗುತ್ತದೆ.

ಅಮೇರಿಕದಲ್ಲಿ ಮಾಲಿಕರಿಗೆ ಮನಬಂದಂತೆ ಕೆಲಸಗಾರರನ್ನು ತೆಗೆದುಹಾಕಲು (ಯಾವುದೇ ಬೇರ್ಪಡುವಿಕೆಯ ವೇತನ ಇತರೆ ಇಲ್ಲದೆ) ಕಾರ್ಮಿಕ ಕಾನೂನುಗಳು ಅವಕಾಶ ನೀಡುತ್ತವೆ. ಆದರೆ, ನಿರ್ದಿಷ್ಟ ಕಾರ್ಮಿಕ ಒಕ್ಕೂಟ ಒಪ್ಪಂದಗಳು ಇದ್ದಲ್ಲಿ ಒಪ್ಪಂದದ ಷರತ್ತುಗಳನ್ನು ಪಾಲಿಸಬೇಕಾಗುತ್ತದೆ. ಏನೇ ಆದರೂ, ಅಮೇರಿಕವು ಅತ್ಯುತ್ತಮ ಕೆಲಸಗಾರಿಕೆಯ ಸಾಮಾಜಿಕ ಸುರಕ್ಷತಾ ವ್ಯವಸ್ಥೆಯನ್ನು ಹೊಂದಿದ್ದು, ನಿರುದ್ಯೋಗಿಗಳಿಗೆ ಒಂದು ವರ್ಷದವರೆಗೆ ನಿರುದ್ಯೋಗ ಸೌಲಭ್ಯಗಳನ್ನು ಒದಗಿಸುತ್ತದೆ ಹಾಗೂ ಅಗತ್ಯ ಬಿದ್ದಲ್ಲಿ ಹೆಚ್ಚುವರಿ ಕೆಲಸದ ತರಬೇತಿಯನ್ನೂ ನೀಡುತ್ತದೆ.

ಇನ್ನೊಂದು ರೀತಿಯಲ್ಲಿ ಜಪಾನ್ ಅತ್ಯಂತ ನಿರ್ಬಂಧಿತ ಕಾರ್ಮಿಕ ಕಾನೂನುಗಳನ್ನು ಹೊಂದಿದೆ. ಬಹುತೇಕ, 2ನೇ ಜಾಗತಿಕ ಮಹಾಯುದ್ಧದ ನಂತರ ಜಪಾನ್ ಸರ್ಕಾರವು ದೇಶವನ್ನೂ ರೂಪುಗೊಳಿಸಲು ಸಜ್ಜಾದ ಸಂದರ್ಭದಲ್ಲಿ ಅಲ್ಲಿಯ ಸಂಸ್ಥೆಗಳ ಮೇಲೆ ಹಾಕಿದ ಒತ್ತಡದ ಪರಿಣಾಮವಾಗಿ ಈ ಕಾನೂನುಗಳು ಜಾರಿಗೆ ಬಂದವು. ಜಪಾನೀಯರು ಸೇರಿದ ಸಂಸ್ಥೆಯಲ್ಲಿ ಜೀವನ ಪೂರ್ತಿ ಕೆಲಸ ಮಾಡುವ ಸಂಪ್ರದಾಯ ಹೊಂದಿದ್ದಾರೆ. ಇದಕ್ಕೆ ಬಹುತೇಕ ಸಂಪ್ರದಾಯಬದ್ಧವಾಗಿ ಜಾರಿಗೆ ಬಂದಿರುವ ನಿರ್ಬಂಧಿತ ಕಾನೂನುಗಳು ಕಾರಣ. ಶಾಶ್ವತ ಉದ್ಯೋಗ ಕೊರತೆ ಹೊರತಾಗಿಯೂ ಜಪಾನೀಯರು ಕಾರ್ಮಿಕ ದಕ್ಷತೆ ಮತ್ತು ಉತ್ಪಾದಕತೆಯನ್ನು ರೂಢಿಸಿಕೊಂಡಿದ್ದಾರೆ. ಇದು ಸಂಸ್ಥೆಗಳು ತಮ್ಮ ಲಾಭದ ಪ್ರಮಾಣ ಮತ್ತು ಉದ್ಯೋಗಿಗಳ ಕಾರ್ಯನಿರ್ವಹಣೆ ಗುಣಮಟ್ಟವನ್ನು ಆಧರಿಸಿ 3–4 ತಿಂಗಳುಗಳ ವೇತನದಷ್ಟು ಲಾಭಾಂಶ ನೀಡುತ್ತಿರುವುದರಿಂದ ಸಾಧ್ಯವಾಗಿದೆ. ಇದರಿಂದ ಕೆಲಸಗಾರರಿಗೆ ತಾವು ಸಂಸ್ಥೆಯ ಲಾಭಾಂಶದಲ್ಲಿ ಪಾಲುಗಳನ್ನು ಹೊಂದಿರುವುದು ದೃಢಪಡುತ್ತದೆ ಹಾಗೂ ಈ ಅಂಶಗಳು ಕೆಲಸಗಾರರು ಮತ್ತು ಸಂಸ್ಥೆಯು ದಕ್ಷತೆಯಿಂದ ಕಾರ್ಯ ನಿರ್ವಹಿಸಲು ಸಹಾಯ ಮಾಡುತ್ತದೆ.

ಆಶ್ಚರ್ಯಕರವಾಗಿ ಅಭಿವೃದ್ಧಿಶೀಲ ದೇಶವಾಗಿರುವ ಭಾರತವು ನಿರುದ್ಯೋಗಿಗಳು ಹಾಗೂ ಅರೆನಿರುದ್ಯೋಗಿಗಳ ದೊಡ್ಡ ಪಡೆಯನ್ನೇ ಹೊಂದಿದ್ದರೂ, ಕಲ್ಯಾಣ ಅಂಶವನ್ನು ಅಂಗೀಕರಿಸಿದೆ ಹಾಗೂ ತನ್ನ ಸಂಘಟಿತ ವಲಯದ ಕಾರ್ಮಿಕರಿಗೆ ಜಗತ್ತಿನಲ್ಲಿಯೇ ಅತ್ಯಂತ ರಕ್ಷಣಾತ್ಮಕ ಎನ್ನಿಸಿಕೊಂಡಿರುವ ಕಾರ್ಮಿಕ ಕಾನೂನುಗಳನ್ನು ಅಂಗೀಕರಿಸಿದೆ. ಇಂತಹ ಕಾನೂನು ಪ್ರಾಯೋಗಿಕವಾಗಿ ನಿರುದ್ಯೋಗವೇ ಇಲ್ಲದ ಅಭಿವೃದ್ಧಿ ಹೊಂದಿದ ದೇಶಗಳಲ್ಲಿಯೂ ಕಂಡುಬರುವುದಿಲ್ಲ. ಹೀಗೆ ಭಾರತದ ಸಂಘಟಿತ ವಲಯದಲ್ಲಿ ಸ್ವಲ್ಪ (ಸಾಮಾನ್ಯವಾಗಿ ಒಂದು ವರ್ಷ ಅಥವಾ ಅದಕ್ಕಿಂತ ಕಡಿಮೆ) ಪರೀಕ್ಷಣಾವಧಿಯ ನಂತರ ಶಾಶ್ವತ ಉದ್ಯೋಗ ಸಿಗುತ್ತದೆ. ಉದ್ಯೋಗಿಗಳನ್ನು (100ಕ್ಕಿಂತ ಹೆಚ್ಚು ಉದ್ಯೋಗಿಗಳಿರುವ ಸಂಸ್ಥೆಯೊಂದರಲ್ಲಿ) ಸರ್ಕಾರದ ಅನುಮತಿ ಇಲ್ಲದೇ ತೆಗೆದುಹಾಕುವುದು ಸಾಧ್ಯವಿಲ್ಲ. ಸಂಸ್ಥೆಗೆ ಅಗತ್ಯವೇ ಇಲ್ಲದಿದ್ದ ಸಂದರ್ಭದಲ್ಲಿ ಮಾತ್ರ

ಸರ್ಕಾರ ಇಂತಹ ಅನುಮತಿಯನ್ನು ನೀಡುತ್ತದೆ (ಭಾರತದ ಅತ್ಯುತ್ತಮ ಸಂಘಟಿತ ಕಾರ್ಮಿಕ ಒಕ್ಕೂಟಗಳಿಗೆ ಕೋಪ ತರಿಸಲು ಯಾವುದೇ ರಾಜಕೀಯ ವ್ಯಕ್ತಿ ಇಚ್ಛಿಸುವುದಿಲ್ಲ). ಸಾರ್ವಜನಿಕ ಕ್ಷೇತ್ರದ ಉದ್ಯೋಗಿಗಳು ಕಾರ್ಯನಿರ್ವಹಣೆಯ ಗುಣಮಟ್ಟವನ್ನು ಪರಿಗಣಿಸಲ್ಪಡದೆ ಸಾಮಾನ್ಯವಾಗಿ ನಿಗದಿತ ವಾರ್ಷಿಕ ವೇತನ ಏರಿಕೆಗಳನ್ನು ಪಡೆಯುತ್ತಾರೆ. ಇಲ್ಲಿ ಉದ್ಯೋಗಿಯು ಶ್ರಮದಿಂದ ಕೆಲಸ ಮಾಡಲು ಮತ್ತು ಕಾರ್ಯನಿರ್ವಹಣೆ ಗುಣಮಟ್ಟ ಸುಧಾರಣೆಗೆ ಶ್ರಮಿಸಲು ಪ್ರೋತ್ಸಾಹ ಧನಗಳನ್ನು ನೀಡಲಾಗುವುದಿಲ್ಲ. ಇದರ ಪರಿಣಾಮದಿಂದ ಕಡಿಮೆ ಉತ್ಪಾದಕತೆ, ಉತ್ಪನ್ನಗಳಿಗೆ ಅತಿ ಹೆಚ್ಚು ಬೆಲೆ, ಕಡಿಮೆ ರಫ್ತುಗಳು ಹಾಗೂ ಅಂತಿಮವಾಗಿ ಕಡಿಮೆ ವೇತನಗಳು, ಕೆಲವೇ ಉದ್ಯೋಗಗಳು, ಹಾಗೂ ಅತಿ ಹೆಚ್ಚು ನಿರುದ್ಯೋಗ ಕಂಡುಬರುತ್ತದೆ.

ನಮ್ಮಲ್ಲಿ ಉದ್ಯೋಗಗಳಿಗಾಗಿ ಎದುರು ನೋಡುತ್ತಿರುವ ಹತ್ತಾರು ಲಕ್ಷ ಯುವಜನತೆ ಇದ್ದಾರೆ. ಈ ಸಂದರ್ಭದಲ್ಲಿ ಉತ್ಪಾದಕತೆ ಹಾಗೂ ದಕ್ಷತೆಯ ವೆಚ್ಚದಲ್ಲಿ ಇಂತಹ ಅತ್ಯುನ್ನತ ಮಟ್ಟದ ರಕ್ಷಣೆಯು ಸರಿಯೇ ಎಂಬುದನ್ನು ನಾವು ಚಿಂತಿಸಬೇಕಾಗಿದೆ. ಚೀನಾ, ಪೂರ್ವ ಏಶಿಯಾ ಮತ್ತು ಭಾರತದ ಅನುಭವವನ್ನು ಪರಿಗಣಿಸಿದರೆ, ಅತಿಯಾದ ಕಾರ್ಮಿಕ ರಕ್ಷಣಾ ನೀತಿಯು ದೀರ್ಘಾವಧಿಯಲ್ಲಿ ಕೆಲಸಗಾರರ ಹಿತಾಸಕ್ತಿಗೆ ಪೂರಕವಾಗಿರುವುದಿಲ್ಲ ಹಾಗೂ ಕೆಲಸಗಾರರ ಉತ್ಪಾದಕತೆ ಕಡಿಮೆಗೊಳಿಸುವ ಮೂಲಕ ಉತ್ತಮ ಪರಿಣಾಮದ ಬದಲು ಅಪಾಯವನ್ನೇ ತಂದೊಡ್ಡುತ್ತದೆ. ಅಲ್ಲದೇ, ಇದರಿಂದ ವಸ್ತುಗಳ ದರ ಹೆಚ್ಚಳವಾಗುವ ಕಾರಣ ಉತ್ಪನ್ನದ ಸ್ಪರ್ಧೆ ನೀಡುವ ಸಾಮರ್ಥ್ಯ ಉತ್ಪಾದಕತೆ ಮತ್ತು ಉದ್ಯೋಗದ ಅಭಿವೃದ್ಧಿಗೆ ಕಾರಣವಾಗುವ ರಫ್ತು ಮಾರುಕಟ್ಟೆಯಲ್ಲಿ ಕುಸಿತಗೊಳ್ಳುತ್ತದೆ.

ಪೂರ್ವ ಏಶಿಯಾ ರಾಷ್ಟ್ರಗಳಲ್ಲಿ ಕಾರ್ಮಿಕ ಕಾನೂನುಗಳು ಕಾರ್ಮಿಕನ ಸಮರ್ಥ ಮತ್ತು ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳಲು ಪೂರಕವಾಗಿವೆ. ಹೆಚ್ಚಿನ ದೇಶಗಳಲ್ಲಿ ಶಾಂತಿಯುತ ಕೈಗಾರಿಕಾ ಸಂಬಂಧ ವಾತಾವರಣವನ್ನು ನಿರ್ವಹಿಸಲಾಗಿದೆ. ಇದಕ್ಕಾಗಿ ರಚಿಸಲಾಗಿರುವ ಪ್ರತಿಭಟನೆಗೆ ಕರೆ ನೀಡುವ ಮೊದಲು ಅಗತ್ಯ ಶಾಂತಗೊಳಿಸುವ ಅವಧಿ (ಸುಮಾರು ಒಂದು ತಿಂಗಳು) ಹಾಗೂ ಸ್ವಯಂ ಸೇವೆ ಮತ್ತು ಕಡ್ಡಾಯ ದಾವೆ ಕಾನೂನುಗಳ ಸಹಾಯ ಪಡೆಯಲಾಗಿದೆ. ಇದರ ಪರಿಣಾಮದಿಂದ ಧರಣಿ ಮತ್ತು ಕೆಲಸ ಸ್ಥಗಿತಗೊಳಿಸುವ ಪ್ರಕ್ರಿಯೆಗಳು ವಿರಳವಾಗಿವೆ. ಅಲ್ಲದೇ, ಸಂಸ್ಥೆಗಳು ಕೆಲಸಗಾರರನ್ನು ವಜಾಮಾಡ–ಬಹುದಾದರೂ, ವಜಾಗೊಳಿಸುವ ಪರಿಹಾರವನ್ನು ಪಾವತಿಸಬೇಕಾಗುತ್ತದೆ (ಸಂಸ್ಥೆಯಲ್ಲಿ ಕೆಲಸ ಮಾಡಿದ ಪ್ರತಿ ವರ್ಷಕ್ಕೆ ಸುಮಾರು ಒಂದು ತಿಂಗಳ ವೇತನಗಳು). ಈ ಕಾನೂನು ಕಾರ್ಮಿಕರನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳಲು ಅವಕಾಶ ನೀಡುತ್ತದೆ ಹಾಗೂ ಕೆಲಸಗಾರರ ಮೇಲೆಯೂ ಕೆಲವು ಶಿಸ್ತುಗಳನ್ನು ಪಾಲಿಸುವಂತೆ ಒತ್ತಡ ಹೇರುತ್ತದೆ. ಆದ್ದರಿಂದ ಉದ್ಯೋಗ ಮತ್ತು ವೇತನಗಳು ವೇಗವಾಗಿ ಹೆಚ್ಚಾಗಲು ಕೈಗಾರಿಕೋದ್ಯಮಿಗಳು ಅವರನ್ನು ನೇಮಿಸಿಕೊಳ್ಳಲು ಇಚ್ಛಿಸುತ್ತಾರೆ.

ಜಪಾನಿ ಶೈಲಿಯ ನಮ್ಯತೆಯನ್ನು ಹೊಂದಿದ ವೇತನ ವ್ಯವಸ್ಥೆಯನ್ನು ಕೊರಿಯಾ, ತೈವಾನ್, ಮಲೇಶಿಯಾ ಮತ್ತು ಸಿಂಗಾಪುರ ದೇಶಗಳೂ ಅಳವಡಿಸಿಕೊಂಡಿವೆ. ಉದ್ಯೋಗಿಗಳಿಗೆ ತಮ್ಮ ಸಂಸ್ಥೆಗೆ ಬಂದಿರುವ ಲಾಭವನ್ನು ಆಧರಿಸಿ ಲಾಭಾಂಶವನ್ನು ಹಂಚುವುದರಿಂದ ಉದ್ಯೋಗಿಗಳು ಹೆಚ್ಚು ಸಹಕಾರಿ ಮನೋಭಾವದವರು ಹಾಗೂ ಜವಾಬ್ದಾರಿ ಹೊಂದಿದವರೂ ಆಗುವಂತೆ ಮಾಡುತ್ತದೆ. ಪ್ರತಿ ಉದ್ಯೋಗಿಯು ತೋರುವ ತನ್ನ ಕಾರ್ಯನಿರ್ವಹಣೆಗೆ ಸ್ವೀಕರಿಸುವ ಲಾಭಾಂಶದ ಮೊತ್ತವನ್ನು (ಮತ್ತು ಬಡ್ತಿಗಳನ್ನು) ಜೋಡಿಸುವುದರಿಂದ, ಸಹಾಯಧನಗಳನ್ನು ನೀಡುವುದರಿಂದ ಜಪಾನ್‌ನಲ್ಲಿ ಇರುವಂತೆ ಉದ್ಯೋಗ ಭದ್ರತೆ ನೀಡಿಯೂ ಅತ್ಯುತ್ತಮ ಕಾರ್ಯನಿರ್ವಹಣೆಯನ್ನು ಸೃಷ್ಟಿಸಬಹುದು. ಅಂತಿಮವಾಗಿ ಪೂರ್ವ ಏಶಿಯಾ ರಾಷ್ಟ್ರಗಳು ಸಾಮಾನ್ಯ ಶಿಕ್ಷಣ ಮತ್ತು ಅವರ ಕೆಲಸಗಾರರಿಗೆ ತರಬೇತಿ ನೀಡುವುದನ್ನು ತೀವ್ರವಾಗಿ ಸುಧಾರಿಸಿವೆ. ಇದರಿಂದ ಅವು ಹೆಚ್ಚು ಉತ್ಪಾದಕತೆಯನ್ನು ಹೊಂದಲು ಸಾಧ್ಯವಾಗಿದೆ.

ಆದ್ದರಿಂದ ಚೀನಾ ಮತ್ತು ಜಪಾನ್ ಸೇರಿದಂತೆ ಪೂರ್ವ ಏಶಿಯಾ ರಾಷ್ಟ್ರಗಳು ಅತ್ಯುತ್ತಮ ಶಿಸ್ತು ಹೊಂದಿದ,



ಪ್ರೋತ್ಸಾಹದಾಯಕ, ಹೊಂದಿಕೊಳ್ಳಬಲ್ಲ ಹಾಗೂ ಉತ್ತಮ ತರಬೇತಿ ಹೊಂದಿದ ಕಾರ್ಮಿಕ ಶಕ್ತಿಯನ್ನು ಸೃಷ್ಟಿಸುವಲ್ಲಿ ಯಶಸ್ಸು ಪಡೆದಿವೆ.

ಹೀಗೆ ಭಾರತದಲ್ಲಿ ದಕ್ಷತೆ ಮತ್ತು ಕಲ್ಯಾಣ (ಅಥವಾ ಭದ್ರತೆ) ಅಂಶಗಳ ಸಮತೋಲನವನ್ನು ಸರಿಯಾಗಿ ನಿರ್ವಹಿಸಿಲ್ಲ ಹಾಗೂ ದಕ್ಷತೆಯ ಪರಿಗಣನೆಯಿಂದ ಮಾಪಕಗಳು ಅತ್ಯಂತ ಅಪಾಯಕಾರಿ ಮಟ್ಟದಲ್ಲಿ ದೂರ ಸರಿದಿವೆ. ಒಂದು ವೇಳೆ ಭಾರತದ ವಿಭಿನ್ನ ಐತಿಹಾಸಿಕ ಹಾಗೂ ಸಾಮಾಜಿಕ ಸನ್ನಿವೇಶವು ಪೂರ್ವ ಏಶಿಯಾ ರಾಷ್ಟ್ರಗಳು ದಕ್ಷತೆ ಗಳಿಸುವುದಕ್ಕಾಗಿ ನಡೆಸಿದ ಅನ್ವೇಷಣೆಗಳಿಗೆ ಅವಕಾಶ ನೀಡದಿದ್ದರೂ, ಕಾರ್ಮಿಕರ ದಕ್ಷತೆಯನ್ನು ಸುಧಾರಿಸಲು ಅಗತ್ಯ ಶ್ರಮ ವಹಿಸಬೇಕಾಗಿದೆ. ಈ ಉದ್ದೇಶಕ್ಕಾಗಿ ಪೂರ್ವ ಏಶಿಯಾ ರಾಷ್ಟ್ರಗಳು ಹೊಂದಿರುವ ಈ ಮುಂದಿನ ದಕ್ಷತೆ ಹೆಚ್ಚಳದ ಕಾರ್ಮಿಕ ನೀತಿಗಳನ್ನು ಭಾರತದಲ್ಲಿ ಅಳವಡಿಸಿಕೊಳ್ಳಬಹುದು ಹಾಗೂ ಭಾರತೀಯ ಕೆಲಸಗಾರರಿಗೆ ದೀರ್ಘಕಾಲದ ಕಲ್ಯಾಣವನ್ನು ಸುಧಾರಿಸಿಕೊಳ್ಳಲು ಸಹಾಯ ಮಾಡಬೇಕು. ಇದಕ್ಕಾಗಿ ಉದ್ಯೋಗ ಮತ್ತು ಕೆಲಸಗಾರರ ನೈಜ ಗಳಿಕೆಯ ಅಭಿವೃದ್ಧಿಯನ್ನು ಸುಧಾರಿಸಬೇಕು:

(1) ಕಾರ್ಮಿಕನು ಉದ್ಯೋಗ ಭದ್ರತೆಯನ್ನು ಬಯಸುತ್ತಾನೆ ಎಂದು ಗುರುತಿಸುವಾಗ ಕಾರ್ಮಿಕರ ಬಳಕೆಯಲ್ಲಿ ಕೆಲವು ನಮ್ಯತೆಗೆ ಅವಕಾಶ ನೀಡಬೇಕು. ಸಾರ್ವಜನಿಕ ಅನುದಾನವನ್ನು ಆಧರಿಸಿದ ಅನಗತ್ಯ ಸಂಸ್ಥೆಗಳು ದೀರ್ಘ ಕಾಲದವರೆಗೆ ಬಾಳುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಸಂಸ್ಥೆಗಳು ಸ್ಪರ್ಧೆ ನೀಡುವಂತಾಗಲು ತಾಂತ್ರಿಕವಾಗಿ ಪುನರ್ ಸಂಘಟಿತವಾಗುವ ಅಗತ್ಯ ಬಿದ್ದಾಗ ಉತ್ಪನ್ನವನ್ನು ಕಡಿಮೆಗೊಳಿಸಲು ಅಥವಾ ನಿಲ್ಲಿಸಲು ಮಾನವೀಯತೆಯೊಂದಿಗೆ

ಉದ್ಯೋಗಿಗಳನ್ನು ವಜಾಗೊಳಿಸಲು ಸಂಸ್ಥೆಗಳಿಗೆ ಅವಕಾಶ ನೀಡಬೇಕು. ಇದರ ಜೊತೆಯಲ್ಲಿ, ತಪ್ಪು ನಡವಳಿಕೆ ತೋರುವ ಅಥವಾ ಉದ್ಯೋಗದಲ್ಲಿ ಸರಿಯಾಗಿ ಕೆಲಸ ಮಾಡದ ಉದ್ಯೋಗಿಗಳನ್ನು ತೆಗೆದುಹಾಕಲು ಉದ್ಯೋಗದಾತರಿಗೆ ಕೆಲವು ಮಾರ್ಗಗಳನ್ನೂ ನೀಡಬೇಕು. ಪ್ರತಿ ಸಮತೋಲನವಾಗಿ, ವಜಾಗೊಳಿಸುವ ಪ್ರಕ್ರಿಯೆಗಳು ದುರುಪಯೋಗವಾಗದಂತೆ ತಡೆಯಲು ಉದ್ಯೋಗಿಯ ತಪ್ಪುಗಳನ್ನು ಕಾನೂನಿನ ನ್ಯಾಯಾಲಯದಲ್ಲಿ ಉದ್ಯೋಗದಾತನು ಸಾಬೀತು ಮಾಡಬೇಕು ಹಾಗೂ ಹೆಚ್ಚುವರಿ ಪರಿಹಾರವನ್ನು ಪಾವತಿಸಬೇಕು ಹಾಗೂ / ಅಥವಾ ಅನ್ಯಾಯದಿಂದ ವಜಾಗೊಳಿಸಿದ್ದರೆ (ಮಲೇಶಿಯಾದಲ್ಲಿ ಇರುವಂತೆ) ಕೆಲಸಗಾರನನ್ನು ಪುನಃ ನೇಮಿಸಿಕೊಳ್ಳಬೇಕು. ಕಂಬಳಿ ಉದ್ಯೋಗ ಭದ್ರತೆಯನ್ನು ಎಲ್ಲ ಸನ್ನಿವೇಶಗಳಲ್ಲಿ ನೀಡುವುದರಿಂದ ಕೆಲಸಗಾರನು ಶಿಸ್ತು ಪಾಲಿಸುವಂತೆ ನೋಡಿಕೊಳ್ಳುವುದು ಅತ್ಯಂತ ಕಷ್ಟವಾಗುತ್ತದೆ ಹಾಗೂ ಕೆಲಸಗಾರನ ಪ್ರೇರಣೆಯನ್ನು ಹಾಗೂ ಉತ್ಪಾದಕತೆಯನ್ನು ಕಡಿಮೆಗೊಳಿಸುತ್ತದೆ.

(2) ಉದ್ಯೋಗಿಯೊಬ್ಬನನ್ನು 240 ದಿನಗಳಿಂದ ಮೂರು ವರ್ಷಗಳವರೆಗೆ ಸುಲಭವಾಗಿ ವಜಾಗೊಳಿಸಲು ಸಾಧ್ಯವಾಗದಂತೆ ಸೇವೆಯ ಅವಧಿಯನ್ನು ಹೆಚ್ಚಿಸುವುದು ಮತ್ತು ಉದ್ಯೋಗಿಗಳಿಗೆ (ಕೆಲಸಗಾರರು ಮತ್ತು ವ್ಯವಸ್ಥಾಪಕರು ಇಬ್ಬರಿಗೂ) ಸಂಸ್ಥೆಯ ಲಾಭಾಂಶದಲ್ಲಿ ಒಂದು ಪಾಲು ಕೊಡುವ ಜಪಾನೀ ಶೈಲಿಯನ್ನು ಅಳವಡಿಸಿಕೊಳ್ಳುವುದು. ಇಲ್ಲಿ



ಬಡ್ತಿಗಳು ಉತ್ತಮ ಉದ್ಯೋಗ ಕಾರ್ಯ ನಿರ್ವಹಣೆಯನ್ನು ಅವಲಂಬಿಸಿರಬೇಕು. ಉದ್ಯೋಗಿಗಳಿಗೆ ತಮ್ಮ ಕೌಶಲ್ಯಗಳನ್ನು ಸುಧಾರಿಸಿಕೊಳ್ಳಲು ಪ್ರೋತ್ಸಾಹ ಧನಗಳನ್ನು ನೀಡಬೇಕು ಹಾಗೂ ಉತ್ಪಾದಕತೆಯನ್ನು ಸುಧಾರಿಸಿಕೊಳ್ಳಲು ಸಹಕರಿಸಬೇಕು. ಕಠಿಣ ಉದ್ಯೋಗ ಭದ್ರತೆ ಇರುವ ಭಾರತದಂತಹ ದೇಶಗಳಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಲು ಇದೊಂದು ಉತ್ತಮ ಮತ್ತು ರಾಜಕೀಯವಾಗಿ ಒಪ್ಪುವಂತಹ ಮಾರ್ಗವಾಗಿದೆ.

(3) ನಾವು ಹೆಚ್ಚಿನ ನಮ್ಯತೆ ಇರುವ ಕಾರ್ಮಿಕ ಕಾನೂನುಗಳೊಂದಿಗೆ ಪ್ರಯೋಗ ಮಾಡಬೇಕು, ಉದಾಹರಣೆಗೆ ರಫ್ತು ಪ್ರಕ್ರಿಯೆ ಇರುವ ವಲಯಗಳಲ್ಲಿ ಹೆಚ್ಚು ದಕ್ಷ ಮತ್ತು ಸ್ಪರ್ಧಾತ್ಮಕ ಕಾರ್ಮಿಕ ಶಕ್ತಿಯ ಭಾರೀ ಅಗತ್ಯವಿದೆ. ಇದರಿಂದ ನಾವು ಹೆಚ್ಚು ವಿದೇಶಿ ನೇರ ಬಂಡವಾಳವನ್ನು ಆಕರ್ಷಿಸಬಹುದು. ಈ ವಲಯಗಳಲ್ಲಿ ಇನ್ನಷ್ಟು ಹೆಚ್ಚು ತೀವ್ರವಾಗಿ ಉದ್ಯೋಗ ಸೃಷ್ಟಿಸುವುದರಿಂದ ಹೆಚ್ಚು ದಕ್ಷತೆ ಕೇಂದ್ರಿತ ಕಾರ್ಮಿಕ ಕಾನೂನುಗಳಿಗೆ ಸಂಬಂಧಿಸಿದಂತೆ ಕೆಲಸಗಾರರಲ್ಲಿ ಹಾಗೂ ವ್ಯಾಪಾರ ಒಕ್ಕೂಟಗಳಲ್ಲಿರುವ ಭಯವನ್ನು ತೊಡೆದುಹಾಕಬಹುದು.

(4) ಕಾರ್ಮಿಕರ ಉತ್ಪಾದಕತೆ ಹೆಚ್ಚಿಸಲು ಶಿಕ್ಷಣ ಸುಧಾರಿಸಲು ಮತ್ತು ತರಬೇತಿ ನೀಡಲು ಹೆಚ್ಚು ಶ್ರಮವನ್ನು ಹಾಕಬೇಕಾಗುತ್ತದೆ. ಇದರಲ್ಲಿ ಎಲ್ಲ ಮಕ್ಕಳಿಗೆ 10ನೇ ತರಗತಿವರೆಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಮತ್ತು ವೃತ್ತಿಪರ ತರಬೇತಿಯಲ್ಲಿ ಹೆಚ್ಚು ಪಾಲ್ಗೊಳ್ಳುವಿಕೆಯು ಒಳಗೊಂಡಿರಬೇಕು. ದೀರ್ಘಾವಧಿಗಾಗಿ ಸ್ಥಿರ ಆರ್ಥಿಕ ಬೆಳವಣಿಗೆ ಹೊಂದಲು ಹಿರಿಯ ವ್ಯಕ್ತಿಯು ಅತ್ಯಗತ್ಯವಾಗಿರುತ್ತಾರೆ. ಅಂತೆಯೇ, ಪ್ರತಿ ಕೆಲಸಗಾರನಿಗೆ ಭೌತಿಕ ಬಂಡವಾಳ ಲಭ್ಯತೆಯನ್ನು ಹೆಚ್ಚಿಸಲು ಹೆಚ್ಚು ಶ್ರಮವನ್ನೂ ವಹಿಸಬೇಕಾಗಿದೆ. ಇದು ಉಳಿತಾಯಗಳನ್ನು, ಅಂತೆಯೇ ದೇಶಿ ಹಾಗೂ ವಿದೇಶಿ ಬಂಡವಾಳ ಹೂಡಿಕೆಯನ್ನು ಪ್ರೇರೇಪಿಸಲು ನೀತಿಗಳನ್ನೂ ಒಳಗೊಳ್ಳುತ್ತದೆ. ಕಾರ್ಮಿಕ ನೀತಿಯಲ್ಲಿ ಈ ಗುಣಲಕ್ಷಣಗಳನ್ನು ಒಳಗೊಳ್ಳುವಂತೆ ಮಾಡಿದರೆ, ಭಾರತದ ಕಾರ್ಮಿಕ ಅಗತ್ಯವನ್ನು ಗಣನೀಯವಾಗಿ ವಿಸ್ತರಿಸಬಹುದು. ಇದೇ ಸಮಯದಲ್ಲಿ, ಉದ್ಯೋಗದ ತೀವ್ರ ಬೆಳವಣಿಗೆ ಹಾಗೂ ಪ್ರತಿ ಉದ್ಯೋಗಿಯ ನೈಜ ಗಳಿಕೆಯು ಕಾರ್ಮಿಕ ಪ್ರೋತ್ಸಾಹ ಧನದ ಒಟ್ಟೂ ವ್ಯಾಪ್ತಿ ಹಾಗೂ ಕಾರ್ಮಿಕ ನೀತಿಗಳೊಂದಿಗೆ ರಫ್ತು ಕೇಂದ್ರಿತ ಔದ್ಯೋಗೀಕರಣ ನೀತಿಗಳ ಒಟ್ಟು ಸೇರಿಸಿದ ಪರಿಣಾಮವಾಗಿದೆ. ಭಾರತವು ರಫ್ತು ಕೇಂದ್ರಿತ ಔದ್ಯೋಗೀಕರಣದತ್ತ ಹೆಚ್ಚು ಸುಧಾರಣೆಗಳನ್ನು ಈಗಾಗಲೇ ಕೈಗೊಂಡಿದೆ. ಕಾರ್ಮಿಕ ನೀತಿ ಸುಧಾರಣೆಗಳಿಂದ ಉದ್ಯೋಗ ಅತಿ ಹೆಚ್ಚು ಬೆಳವಣಿಗೆ ಹಾಗೂ ಪ್ರತಿ ಉದ್ಯೋಗಿಯ ನೈಜ ಗಳಿಕೆಯನ್ನು ಹೆಚ್ಚಿಸುವತ್ತ, ಸಾಧಿಸುವತ್ತ ಸಾಗಿದೆ. ❑

## ಯೋಜನಾ ಚಂದಾದಾರರಲ್ಲಿ ಕೋರಿಕೆ

ಯೋಜನಾ ಪತ್ರಿಕೆಗೆ ಚಂದಾ ಬಯಸುವವರು ಮನಿಆರ್ಡರ್ ಕಳಿಸುವಾಗ ತಮ್ಮ **ಇ-ಮೇಲ್, ಫೋನ್ ನಂಬರ್ ಸೇರಿದಂತೆ, ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಒಳಗೊಂಡ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು.** ಚಂದಾದಾರರು, ಮನಿಆರ್ಡರ್ ಕಳಿಸಿದ ಎಂಟು ದಿನಗಳಲ್ಲಿ ನಮ್ಮ ಕಚೇರಿಯನ್ನು ಸಂಪರ್ಕಿಸಿ ತಮ್ಮ ವಿಳಾಸವನ್ನು ಸರಿ ಇದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು ಹಾಗೂ ಚಂದಾ ಸಂಖ್ಯೆಯನ್ನು ಪಡೆದುಕೊಳ್ಳಬೇಕು. **ಚಂದಾದಾರರು ತಮ್ಮ ಯಾವುದೇ ಅಗತ್ಯಗಳಿಗೆ ಕಚೇರಿ ಸಂಪರ್ಕಿಸಿದಾಗ ತಮ್ಮ ಚಂದಾ ಸಂಖ್ಯೆಯನ್ನು ತಿಳಿಸುವುದು ಅತ್ಯವಶ್ಯಕ.** ಯೋಜನಾ ರವಾನೆ ಬಗ್ಗೆ ಯಾವುದೇ ದೂರು ದುಮ್ಮಾನಗಳನ್ನು ಆಯಾ ತಿಂಗಳೇ ಪರಿಹರಿಸಿಕೊಳ್ಳಬೇಕು. ಸಂಪರ್ಕಿಸಬೇಕಾದ ಇ-ಅಂಚೆ : yojanakannada@yahoo.com ದೂರವಾಣಿ ಸಂಖ್ಯೆ : 080 25537244 (ಸೋಮವಾರದಿಂದ – ಶುಕ್ರವಾರ. ವೇಳೆ 2.00 ರಿಂದ 4.00)

# ಲಿಂಗ ಸಂವೇದಿ ನ್ಯಾಯ

* ನೀತಾ ಎನ್.



ಸಾಮಾಜಿಕ ಮತ್ತು ಸಾಂಸ್ಕೃತಿಕ ನಿರ್ಬಂಧಗಳು (ಪ್ರದೇಶವಾರು ಮತ್ತು ಸಮುದಾಯಗಳಲ್ಲಿ ವಿಭಿನ್ನತೆ ಇದೆ) ಈಗಲೂ ಮಹಿಳಾ ಉದ್ಯೋಗಕ್ಕೆ ಅಡೆತಡೆಯಾಗಿವೆ. ಗ್ರಾಮೀಣರು ಮತ್ತು ಪಟ್ಟಣಿಗರು ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಲು ಆಸಕ್ತಿ ಹೊಂದಿದ್ದಾರೆ. ಆದರೆ ಅವರು ಪಡೆಯುವ ಶಿಕ್ಷಣ, ಉದ್ಯೋಗಕ್ಕೆ ದಾರಿಯಾಗುವ ರೀತಿಯಲ್ಲಿರುವುದಿಲ್ಲ.

ಉತ್ಪಾದನಾ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕಡಿಮೆ ಇರುವ ದೇಶಗಳಲ್ಲಿ ಭಾರತವೂ ಒಂದಾಗಿದೆ. ಇದು ಆಫ್ರಿಕಾದ ಕೆಲ ದೇಶಗಳು ಮತ್ತು ಮಧ್ಯ ಪೂರ್ವ ರಾಷ್ಟ್ರಗಳ ಕೆಲದೇಶಗಳಿಗಿಂತ ಕಡಿಮೆಯಾಗಿದೆ. (2016). ಇರಾನ್. ಪಾಕಿಸ್ತಾನ್, ಸೌದಿ ಅರೆಬಿಯಾ ದೇಶಗಳ ಪರಿಸ್ಥಿತಿ ಈ ಕ್ಷೇತ್ರದಲ್ಲಿ ಭಾರತಕ್ಕಿಂತ ಕಳಪೆಯಾಗಿದೆ. 2013ರಲ್ಲಿ ದಕ್ಷಿಣ ಏಶಿಯಾದಲ್ಲಿ ಮಹಿಳಾ ಪಾಲ್ಗೊಳ್ಳುವಿಕೆಯ ಪ್ರಮಾಣ 30.5% ಇತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಕೆಲ ದೇಶಗಳಲ್ಲಿ ಪ್ರಗತಿ ಸ್ವಲ್ಪ ಮಟ್ಟಿಗೆ ಚೇತರಿಕೆ ತಂದಿದೆ. ಆದರೆ ಈ ಕ್ಷೇತ್ರದಲ್ಲಿ ಭಾರತ ತೀರಾ ಕುಸಿತ ಕಂಡಿದ್ದರಿಂದ ದಕ್ಷಿಣ ಏಶಿಯಾದಲ್ಲಿ ಪರಿಸ್ಥಿತಿ ಹಾಗೆಯೇ ಇದೆ. ಆರ್ಥಿಕ ಪ್ರಗತಿ ಸಾಕಷ್ಟು ಆಶಾದಾಯಕವಿರುವ ಈ ಅವಧಿಯಲ್ಲಿ ಮಹಿಳಾ ಶಿಕ್ಷಣ ಪ್ರಮಾಣ ಮತ್ತು ಶಾಲಾ ದಾಖಲಾತಿ ಪ್ರಮಾಣ ತೃಪ್ತಿಕರವಾಗಿದ್ದರೂ ಮಹಿಳಾ ಔದ್ಯೋಗಿಕ ಕ್ಷೇತ್ರದಲ್ಲಿ ಇನ್ನೂ ಸಾಕಷ್ಟು ಸವಾಲುಗಳಿವೆ. ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಅವಲೋಕಿಸಿದಾಗ ಈ ಸಮಸ್ಯೆ ಇನ್ನು ಹೆಚ್ಚು ಗೊಂದಲಮಯವೆನಿಸುತ್ತದೆ. ಮಹಿಳಾ ಕಾರ್ಮಿಕ ಶಕ್ತಿ ಪ್ರಮಾಣ 2004–05ರಲ್ಲಿ 28.2% ಇದ್ದು 2011–12 ರಲ್ಲಿ 21.7% ಆಗಿ ತೀವ್ರ ಹಿನ್ನಡೆಯಾಯಿತು. ಇದು ಮುಗಿಯದ ಸಂಕಷ್ಟವೆನ್ನಬಹುದು. ಈ ಸ್ಥಿತಿಯಿಂದಾಗಿ ಭಾರತದ ಸ್ಥಾನ 2010ರಲ್ಲಿ 83 ದೇಶಗಳ ಪಟ್ಟಿಯಲ್ಲಿ 68ನೇ ಸ್ಥಾನವನ್ನು ಪಡೆದಿತ್ತು. ಆದರೆ 2012 ರ ಹೊತ್ತಿಗೆ 87 ದೇಶಗಳ ಪಟ್ಟಿಯಲ್ಲಿ 84 ನೇ ಸ್ಥಾನ ಪಡೆದಿದೆ.

## ಮಹಿಳಾ ಉದ್ಯೋಗದ ಪ್ರವೃತ್ತಿ

ಈ ಕ್ಷೇತ್ರದ ಅಂಕಿ ಅಂಶ ನೀಡುವ ವ್ಯವಸ್ಥೆಯಲ್ಲಿ ಹಲವಾರು ಸಮಸ್ಯೆಗಳಿದ್ದು, ನಿಖರ ಅಂಕಿ ಅಂಶ ನೀಡಲು ಅಥವಾ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಸ್ಥೂಲ ವಿವರ ಸಿದ್ಧಪಡಿಸಲಾಗಿದೆ. 1999–2000 ಮತ್ತು 2004–2005 ರಲ್ಲಿ ಕೆಲಸದಲ್ಲಿ ಪಾಲ್ಗೊಳ್ಳುವ ದರದಲ್ಲಿ ಸ್ವಲ್ಪ ಚೇತರಿಕೆಯಾಗಿ ಈ ಕ್ಷೇತ್ರದಲ್ಲಿ 3% ಪ್ರಗತಿಯಾಗಿತ್ತು. ನಂತರ ಮತ್ತೆ ಕಡಿಮೆಯಾಗಿರುವುದು ವಿಷಾದನೀಯ. ಗ್ರಾಮೀಣ ಭಾಗದಲ್ಲಿ ಈ ಕ್ಷೇತ್ರ ನಾಟಕೀಯವಾಗಿ ಕುಸಿತ ಕಂಡಿದ್ದು ಪಟ್ಟಣಗಳಲ್ಲಿ ಸ್ಥಿತಿ ನಿಂತ ನೀರಿನಂತಾಗಿದೆ. ಇಲ್ಲಿ ನಿಖರವಾಗಿ ದೊರೆಯುವ ಕೂಲಿ ಮತ್ತು ಮಹಿಳಾ ಶಿಕ್ಷಣ ಸಂಬಂಧಿ ಕಾರ್ಯಕ್ರಮಗಳ ಸಕಾರಾತ್ಮಕ ಗುಣಗಳು ಮತ್ತು ಲಕ್ಷಣಗಳು ಮಹಿಳಾ ಉದ್ಯೋಗ ಕ್ಷೇತ್ರದ ಮೇಲೆ ಪರಿಣಾಮ ಬೀರಿವೆ ಎಂದು ಅಭಿಪ್ರಾಯಪಡಲಾಗಿದೆ. ಒಟ್ಟಿನಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯಿಂದಲೂ ಅಥವಾ ಕೂಲಿ ಹೆಚ್ಚಳದಿಂದಲೊ ಎಂದು ನಿಖರವಾಗಿ ಹೇಳಲು ಸಾಧ್ಯವಾಗಿಲ್ಲ. ಈ ಲೆಕ್ಕ ಹಾಕುವಾಗ ಬಹಳಷ್ಟು ಪ್ರಮಾಣದಲ್ಲಿ ಮಹಿಳೆಯರನ್ನು ಪೂರ್ಣಾವಧಿ ಕೆಲಸಗಾರರೆಂದು ಪರಿಗಣಿಸಿಲ್ಲ. ಕಾರಣ ಬಹಳಷ್ಟು ಪ್ರಮಾಣದಲ್ಲಿ ಮಹಿಳೆಯರು ದಿನನಿತ್ಯದ ಗೃಹಕೃತ್ಯಗಳ ಕಡೆ ಹೆಚ್ಚು ಒಲವು ತೋರಿಸಿದ್ದಾರೆ. ಪೂರ್ಣಾವಧಿ ಉದ್ಯೋಗದ ಕೊರತೆ ಒಂದೆಡೆ ಆದರೆ, ಮತ್ತೊಂದೆಡೆ ಸಾಮಾಜಿಕವಾಗಿ, ಕೌಟುಂಬಿಕ ಜವಾಬ್ದಾರಿ ಮಹಿಳೆಯ ಮೇಲೆ ಹೆಚ್ಚಿದೆ. ಇಂತಹ

* ಹಿರಿಯ ಪ್ರಾಧ್ಯಾಪಕರು, ಮಹಿಳಾ ಅಭಿವೃದ್ಧಿ ಅಧ್ಯಯನ ಕೇಂದ್ರ, ನವದೆಹಲಿ. E-mail : neethapillai@gmail.com

**ಪಟ್ಟಿ 1 : ಕೆಲಸದಲ್ಲಿ ಪಾಲ್ಗೊಳ್ಳುವ ದರ**

| ಸುತ್ತುಗಳು | ಒಟ್ಟು | | ಗ್ರಾಮೀಣ | | ಪಟ್ಟಣ | |
|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು |
| 1993–94 | 54.4 | 28.3 | 55.3 | 32.8 | 52.1 | 15.5 |
| 1999–2000 | 52.7 | 25.4 | 53.1 | 29.9 | 51.8 | 13.9 |
| 2004–05 | 54.7 | 28.2 | 54.60 | 32.70 | 54.90 | 16.60 |
| 2007–08 | 55.0 | 24.6 | 54.80 | 28.90 | 55.4 | 13.8 |
| 2009–10 | 54.60 | 22.5 | 54.70 | 26.10 | 54.30 | 13.80 |
| 2011–12 | 54.40 | 21.70 | 54.30 | 24.8 | 54.6 | 14.7 |

ಆಕರ: N.S.S. ನವರು ನಡೆಸಿದ ವಿವಿಧ ಸುತ್ತುಗಳ ಸಮೀಕ್ಷೆ.

ಸಹಾಯಕ ಮಹಿಳಾ ಉದ್ಯೋಗಿಗಳ ಸಂಖ್ಯೆ 2011–12 ರಲ್ಲಿ 22% ಇತ್ತು. ಮುಖ್ಯ ಮತ್ತು ಸಹಾಯಕ ಮಹಿಳಾ ಉದ್ಯೋಗಿಗಳ ಸಂಖ್ಯೆ ಎರಡೂ ಕ್ಷೇತ್ರದಲ್ಲಿ ಕುಸಿತ ಕಂಡು ಬಂದಿದೆ. ಇದರಲ್ಲಿ ಮುಖ್ಯ ಮಹಿಳಾ ಉದ್ಯೋಗಿಗಳ ಕುಸಿತ ಪ್ರಮಾಣ ಅಧಿಕವಾಗಿದೆ. ಸಮಾಜದ ಸಂಘಗಳ ವಿಶ್ಲೇಷಣೆಯ ಪ್ರಕಾರ ದುರ್ಬಲ ವರ್ಗದ ಮಹಿಳಾ ಕಾರ್ಮಿಕರ ಪ್ರಮಾಣವೂ ಕಡಿಮೆಯಾಗಿದೆ.

ವಲಯವಾರು ಅಂಕಿ ಅಂಶಗಳನ್ನು ಗಮನಿಸಿದಾಗ 2011–12 ರಲ್ಲಿ ಕೃಷಿ ವಲಯದಲ್ಲಿ 62.3% ಮಹಿಳೆಯರು ಉದ್ಯೋಗವಕಾಶ ಪಡೆದಿದ್ದರೆ, ಕೇವಲ 20% ಮಹಿಳೆಯರು ದ್ವಿತೀಯ ವಲಯದಲ್ಲಿ ಉದ್ಯೋಗಾವಕಾಶ ಪಡೆದಿದ್ದಾರೆ, ಮತ್ತು ಸೇವಾ ವಲಯದಲ್ಲಿ 18% ಮಹಿಳೆಯರು ಉದ್ಯೋಗಾವಕಾಶವನ್ನು ಪಡೆದಿದ್ದಾರೆ. ಎರಡನೇ ವಲಯದ ನಿರ್ಮಾಣ ಕಾಮಗಾರಿಯಲ್ಲಿ ಇತ್ತೀಚೆಗೆ ಮಹಿಳೆಯರು ಪ್ರವೇಶಿಸುತ್ತಿದ್ದು ಕೆಲಸ ನಿರ್ವಹಿಸುತ್ತಿದ್ದಾರೆ. ಕೃಷಿ ವಲಯದಲ್ಲಿ ಅವಕಾಶ ವಂಚಿತರಾದವರು, ನಿರುದ್ಯೋಗಿಗಳು ನಿರ್ಮಾಣ ಸಂಬಂಧಿ ಕ್ಷೇತ್ರದಲ್ಲಿ ಧುಮಕಿದ್ದಾರೆ. ಉದಾರೀಕರಣದ ಇಂದಿನ ದಿನಗಳಲ್ಲಿ ರಿಯಲ್ ಎಸ್ಟೇಟ್ ಉದ್ಯಮ ಸಾಕಷ್ಟು ಬೆಳೆದಿರುವದು ಇದಕ್ಕೆ ಕಾರಣ ಎನ್ನಬಹುದು. ಹಲವು ಕುಟುಂಬಗಳು ಗ್ರಾಮೀಣ ಭಾಗದಿಂದ ಪಟ್ಟಣಗಳಿಗೆ ವಲಸೆ ಬರುತ್ತಿರುವದನ್ನು ಗಮನಿಸಲಾಗಿದೆ. ಇತ್ತಿಚೆಗೆ ನಿರ್ಮಾಣದ ಕೆಲಸ ತಪ್ಪದೆ ದೊರೆಯುವ ಕೆಲಸವಾಗಿದೆ. ಆದರೆ ಸಾಕಷ್ಟು ಶೋಷಣೆಯಿಂದ ಕೂಡಿದೆ. ಇಲ್ಲಿ ಗುತ್ತಿಗೆದಾರರು ಕೆಲಸಗಾರರನ್ನು ತಮ್ಮ ಸಾಲದ ಸುಳಿಯಲ್ಲಿ ಸಿಲುಕಿಸಿ ಅವರನ್ನು ಜೀತದಾಳುಗಳಾಗಿ ಮಾಡಿಬಿಡುತ್ತಾರೆ. ಈ ವಲಯದಲ್ಲಿನ ಇನ್ನೊಂದು ಆತಂಕಕಾರಿ ವಿಷಯವೆಂದರೆ (ಗಂಡ, ಹೆಂಡತಿ ಇಬ್ಬರಿಗೂ) ಜೋಡಿ ಜೀತದಾಳು ಪದ್ಧತಿ ಚಾಲ್ತಿಯಲ್ಲಿದೆ.

### ಮಹಿಳಾ ಉದ್ಯೋಗದ ಗುಣ ಮತ್ತು ಲಕ್ಷಣ

ಮಹಿಳಾ ಉದ್ಯೋಗದ ಗುಣ ಮತ್ತು ಲಕ್ಷಣ ಹೇಗಿದೆ? ಗ್ರಾಮೀಣ ಭಾಗದಲ್ಲಿ ಸಂಬಳ ರಹಿತ / ಸಹಾಯಕಿಯರ ಗುಂಪು ಅತಿ ದೊಡ್ಡದಾಗಿದ್ದು 41% ಇದೆ. ಸಾಂದರ್ಭಿಕ ಮಹಿಳಾ ಕಾರ್ಮಿಕರ ಸಂಖ್ಯೆ 35% ಇದೆ. ಕೃಷಿ ಮತ್ತು ಕುಶಲ ಕರ್ಮಿಗಳ ಕ್ಷೇತ್ರಗಳು ಸಂಕಷ್ಟದಲ್ಲಿದ್ದು ಇಲ್ಲಿ ಪುರುಷ ಕೆಲಸಗಾರರು ಬೇರೆ ಆದಾಯ ತರುವ ಕ್ಷೇತ್ರಗಳತ್ತ ವಾಲುತ್ತಿದ್ದಾರೆ. ಪರಿಣಾಮವಾಗಿ ಮೂಲ ಕುಲಕಸುಬು ನಿರ್ವಹಿಸುವ ಹೊಣೆಗಾರಿಕೆ ಮಹಿಳಾ ಕಾರ್ಮಿಕರ ಮೇಲೆ ಬಿದ್ದಿದೆ. ಇಂತಹವರನ್ನು ಸ್ವಯಂ ಉದ್ಯೋಗಿಗಳೆಂದು ತೋರಿಸಲಾಗುತ್ತಿದೆ. ಇತ್ತೀಚೆಗೆ ಸಾಂದರ್ಭಿಕ ಕೆಲಸಗಾರರ ಪ್ರಮಾಣ ತೀವ್ರವಾಗಿ ಕಡಿಮೆಯಾಗುತ್ತಿದ್ದು ಇದು 4% ರಷ್ಟಿದೆ. ಕಾಯಂ ಕೆಲಸಗಾರರ ಪ್ರಮಾಣ 6% ಇದ್ದು ಇದು ಸ್ವಲ್ಪ ಏರಿಕೆಯಾಗಿದೆ ಎನ್ನಬಹುದು.

ಗ್ರಾಮೀಣ ಮಹಿಳಾ ಕಾರ್ಮಿಕರ ಸ್ಥಿತಿಯನ್ನೂ ಅವಲೋಕಿಸಿದಾಗ ಒಟ್ಟಾರೆಯಾಗಿ ಖಾಯಂ ಕೆಲಸಗಾರರ ಸಂಖ್ಯೆ ಹೆಚ್ಚಾಗುತ್ತಿದೆ. ಕಳೆದ 20 ವರ್ಷಗಳಲ್ಲಿ ಅದು 10% ಆಗಿದೆ. ಆದರೆ ಪಟ್ಟಣಗಳಲ್ಲಿ ಮಹಿಳಾ ಉದ್ಯೋಗಿಗಳ ಪಾಲ್ಗೊಳ್ಳುವಿಕೆ ದರ ಕಡಿಮೆ ಇದ್ದು 2011–12 ರಲ್ಲಿ 15% ಇದೆ. ಇದನ್ನೆಲ್ಲ ಗಮನಿಸಿದಾಗ ಕಾಯಂ ಕೆಲಸ ಎಂದರೇನು ಎಂದು ವ್ಯಾಖ್ಯಾನಿಸುವದು ಸ್ವಲ್ಪ ಕಷ್ಟ. ಅಂದರೆ ಇದು ಸಹಜವಾಗಿ ಆರೋಗ್ಯಕರ ವಾತಾವರಣದಲ್ಲಿ ಕನಿಷ್ಠ ಕೂಲಿಯೊಂದಿಗೆ ಮಾಡುವ ಕೆಲಸವಲ್ಲ. ಇದು ಅತಿ ಕಠಿಣ ಪರಿಸ್ಥಿತಿಯಲ್ಲಿ ಮಾಡುವ ಸತತವಾಗಿ ದೊರೆಯುವ ಕೆಲಸವಿದ್ದರೂ ಅದರ ಅವಧಿ,

**ಪಟ್ಟಿ 2 : ಕಾರ್ಖಾನೆಗಳಲ್ಲಿ ಸ್ಥೂಲವಾಗಿ ಉದ್ಯೋಗಿಗಳ ಹಂಚಿಕೆ (1999–00 ದಿಂದ 2011–12)**

| ವಲಯ | 1999–2000 | | 2004–05 | | 2011–12 | |
|---|---|---|---|---|---|---|
| | ಗಂ. | ಹೆ. | ಗಂ. | ಹೆ. | ಗಂ. | ಹೆ. |
| ಕೃಷಿ ವಲಯ | 52.7 | 75.4 | 48.6 | 72.8 | 42.50 | 62.0 |
| ಗಣಿಗಾರಿಕೆ | 0.7 | 0.3 | 0.70 | 0.30 | 0.60 | 0.30 |
| ಉತ್ಪಾದನಾ ಕ್ಷೇತ್ರ | 11.50 | 905 | 12.4 | 11.3 | 12.6 | 13.40 |
| ವಿದ್ಯುತ್, ಇಂಧನ ಮತ್ತು ನೀರು ಸರಬರಾಜು | 0.40 | 0.0 | 0.40 | 0.0 | 0.4 | 0.1 |
| ನಿರ್ಮಾಣ ಕ್ಷೇತ್ರ | 5.80 | 1.6 | 7.6 | 1.8 | 12.4 | 6.0 |
| ಸೇವೆಗಳು | 28.8 | 13.2 | 30.2 | 13.7 | 31.5 | 18.30 |
| **ಒಟ್ಟು** | **100.0** | **100.0** | **100.0** | **100.0** | **100.0** | **100.0** |

ಆಕರ : ಎನ್ಎಸ್ಎಸ್ಓ ವಿವಿಧ ಸುತ್ತುಗಳಲ್ಲಿ ನಡೆಸಿದ ಉದ್ಯೋಗಸ್ಥ ಮತ್ತು ನಿರುದ್ಯೋಗಿಗಳ ವರದಿ.

ಸ್ಥಳ ನಿಶ್ಚಿತವಿರುವದಿಲ್ಲ. ಇದರಲ್ಲಿ ಮನೆ ಕೆಲಸ, ಸೇವಾವಲಯದ ಕೆಲಸಗಳಾದ ಸ್ವಾಗತಕಾರರು, ಅಂಗಡಿಯ ಸಹಾಯಕರ ಮತ್ತು ಗುತ್ತಿಗೆ ಆಧಾರದ ಕೆಲಸಗಳು ಸೇರಿವೆ. ಹೀಗಾಗಿ ಅಸಂಪ್ರದಾಯಿಕ ವಲಯದಲ್ಲಿ ಖಾಯಂ ಕೆಲಸಗಾರರ ಸಂಖ್ಯೆ ವೃದ್ಧಿಯಾಗುತ್ತಿರುವ ಭಾಗವಾಗಿದೆ. ಸ್ವ-ಉದ್ಯೋಗಿಗಳಲ್ಲಿ 1% ದಷ್ಟು ವೃದ್ಧಿಯಾಗಿದೆ. ಇದು ಯಾವ ರೀತಿಯ ಕೆಲಸ ಅಂದರೆ ಈ ಕ್ಷೇತ್ರದಿಂದ ಮಹಿಳೆಯರು ತಮ್ಮ ಕುಟುಂಬದ ಇತರ ಸದಸ್ಯರ ಆದಾಯ ಹೊರತು ಪಡಿಸಿ ಸ್ವಲ್ಪ ಆದಾಯ ಪಡೆಯುತ್ತಿದ್ದು ಇದು ಸಹ ಅವರ ಬಿಡುವಿನ ವೇಳೆಯಲ್ಲಿ ದುಡಿದ ಈ ಹಣ ಅವರ ದಿನನಿತ್ಯದ ಖರ್ಚುಗಳಿಗೆ ವಿನಿಯೋಗವಾಗುತ್ತದೆ. ಅಂದರೆ ಇವರಾರು ಉದ್ದಿಮೆದಾರರಲ್ಲ ಆದರೆ ಸಾಕಷ್ಟು ಪ್ರಗತಿ ಹೊಂದುತ್ತಿರುವ ಗೃಹ ಕೈಗಾರಿಕೆಗಳು ಅಂದರೆ ಬೀಡಿ ಕಟ್ಟುವದು, ಬಟ್ಟೆ ನೇಯುವದು. ಬಳೆ ಅಥವಾ ಬಿಂದಿ ತಯಾರಿಕೆ, ಮುಂತಾದವುಗಳು ಗೃಹ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ. ಇಲ್ಲಿ ಕೂಲಿ ಬಹಳ ಕಡಿಮೆ ಇದೆ. ಅದು ತಯಾರಿಸಿದ ಪ್ರತಿ ವಸ್ತುವಿನ ಕೂಲಿ ಅಥವಾ ಪ್ರತಿ ಗಂಟೆ ಆಧರಿಸಿದ ಕೂಲಿ ಇರಬಹುದು ಆದರೆ ಈ ಕೆಲಸಗಳನ್ನು ಮುಗಿಸಲು ಸಾಕಷ್ಟು ಸಮಯ ತಗಲುವದಲ್ಲದೆ ಜವಾಬ್ದಾರಿಯಿಂದ ಕೂಡಿದ ಕೆಲಸಗಳಾಗಿವೆ ಅಲ್ಲದೆ ಅವರು



ಗುತ್ತಿಗೆದಾರರ ಮೇಲೆ ಅವಲಂಬಿತವಾಗಿದೆ. ಇಂತಹ ಕೆಲಸಗಾರರ ಕುಟುಂಬಗಳಿಗೆ ಯಾವುದೆ ಮನ್ನಣೆ ದೊರೆಯುವದಿಲ್ಲ ಆದರೂ ಅವರು ಇಂತಹ ಕಠಿಣ ಕೆಲಸವನ್ನು ಸಾಕಷ್ಟು ಆರ್ಥಿಕವಾಗಿ ಸಬಲರಾದಾಗ ತ್ಯಜಿಸಲು ಸಿದ್ಧರಾಗಿರುತ್ತಾರೆ. ಈ ಕ್ಷೇತ್ರ ಸಾಕಷ್ಟು ವಿಶಾಲ ವ್ಯಾಪ್ತಿ ಹೊಂದಿದ್ದು ಇಲ್ಲಿ ಉದ್ಯೋಗಕ್ಕೆ ಇರುವ ಅವಕಾಶಗಳತ್ತ ಗಮನಹರಿಸುವ ಅವಶ್ಯಕತೆ ಇದೆ. ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ವ್ಯಾಪಾರಿ ಕ್ಷೇತ್ರ, ಆತಿಥ್ಯ ಕ್ಷೇತ್ರ ಮತ್ತು ದೂರ ಸಂಪರ್ಕ ಕ್ಷೇತ್ರದಲ್ಲಿ ಮಹಿಳೆಯರು ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿರುವುದು ವ್ಯಕ್ತವಾಗಿದೆ. ಶಿಕ್ಷಣ ಕ್ಷೇತ್ರ ಮತ್ತು ಗೃಹಕೃತ್ಯ (ಮನೆಗೆಲಸದವರು) ಕ್ಷೇತ್ರದಲ್ಲಿ ಸಾಕಷ್ಟು ಮಹಿಳೆಯರು ದುಡಿಯುತ್ತಿದ್ದಾರೆ. ಮನೆಗೆಲಸ ಮಾಡುವ ಉದ್ಯೋಗದಲ್ಲಿ ಬಹಳ ವಿಭಿನ್ನ ಪರಿಸರ ಮತ್ತು ಕೂಲಿ ದರಗಳಿದ್ದು ಇವು ಹೆಚ್ಚಾಗಿ ಒಬ್ಬ ವ್ಯಕ್ತಿಯ ಹಿಡಿತದಲ್ಲಿರುತ್ತವೆ. ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವುದೇ ಕಾನೂನುಗಳಿಲ್ಲ. ಈ ಕ್ಷೇತ್ರದಲ್ಲಿ ಕನಿಷ್ಠ ಕೂಲಿ ನಿಗದಿ ಮಾಡುವ ಅವಶ್ಯಕತೆ ಇದೆ. ಮಹಿಳೆಯರಿಗೆ ಒಂದು ಗೌರವಾನ್ವಿತ ಸ್ಥಾನ ಕೊಡುವ ಶಕ್ತಿ ಶಿಕ್ಷಣ ಕ್ಷೇತ್ರಕ್ಕಿದೆ. ಆದರೆ ಎಲ್ಲ ಹಂತದಲ್ಲಿ ಶಿಕ್ಷಣ ಖಾಸಗೀಕರಣವಾಗುತ್ತಿರುವದರಿಂದ, ಅಲ್ಲಿ ಅವರು ಸರಿಯಾಗಿ ಆದಾಯ ದೊರೆಯದೆ ಉದ್ಯೋಗದ ಖಾತ್ರಿ ಇಲ್ಲದೆ ಶೋಷಣೆಗೆ ಒಳಗಾಗುತ್ತಿದ್ದಾರೆ. ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಸರ್ಕಾರದ ಹಲವು ಯೋಜನೆಗಳ ಕಾರ್ಯಕರ್ತರು ಯೋಜನೆಗಳನ್ನು ಸಾರ್ವಜನಿಕರಿಗೆ ತಲಪುವಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆ. ಉದಾ: ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು. ಇವರು ಹಲವು ಜವಾಬ್ದಾರಿಗಳನ್ನು ಏಕಕಾಲಕ್ಕೆ ತೆಗೆದುಕೊಳ್ಳುತ್ತಾರೆ, ಆದರೂ ಅವರನ್ನು ಉದ್ಯೋಗಿಗಳೆಂದು ಪರಿಗಣಿಸದೆ ಸ್ವಯಂ ಸೇವಕರೆಂದು ಪರಿಗಣಿಸಿ ಅವರಿಗೆ ಗೌರವಧನ ನೀಡಲಾಗುತ್ತಿದೆ. ಸಂಗ್ರಹಿಸಿದ ದತ್ತಾಂಶವನ್ನು ಪರಿಗಣಿಸಿದಾಗ ಮಹಿಳೆಯರ ಜವಾಬ್ದಾರಿಯಿಂದ ನಿರ್ವಹಿಸಬಹುದಾದ ಸಮಾನ ಲಕ್ಷಣದ ಕೆಲಸಗಳ ವಲಯದಲ್ಲಿ ಬೆಳವಣಿಗೆ ಕಂಡು ಬರುತ್ತಿದೆ. ಆದರೆ ಅವರಿಗೆ ಕೆಲಸಕ್ಕೆ ಯೋಗ್ಯ ಮೌಲ್ಯ ನೀಡದೆ ಗೌರವಧನ ನೀಡುವ ಪರಿಪಾಠ ಮುಂದುವರೆದಿದೆ. ಸಮಾನ ಕೆಲಸಕ್ಕೆ ಸಮಾನ ವೇತನ ಕಾನೂನು 1974 ರಲ್ಲಿಯೇ

**ಪಟ್ಟಿ – 3 ಉತ್ಪಾದನಾ ವಲಯದಲ್ಲಿ ಕಾರ್ಮಿಕರ ಹಂಚಿಕೆ (ಸೇವಾ ವಲಯ 1999–2000 ದಿಂದ 2011–12)**

| ಸೇವೆಗಳು | 1999–2000 | | 2004–05 | | 2011–12 | |
|---|---|---|---|---|---|---|
| | ಗಂ. | ಹೆ. | ಗಂ. | ಹೆ. | ಗಂ. | ಹೆ. |
| ವ್ಯಾಪಾರ | 40.8 | 27.8 (12) | 41.3 | 24.4 (11.2) | 39.7 | 22.7 (11.0) |
| ಹೋಟೆಲ್ ಮತ್ತು ರೆಸ್ಟೋರೆಂಟ್ | 4.8 | 5.1 (17.7) | 5.2 | 5.8 (14.50) | 6.2 | 5.2 (15.4) |
| ಸಾರಿಗೆ, ದಾಸ್ತಾನು ಸಂಪರ್ಕ | 18.3 | 2.7 (2.9) | 14.4 | 2.6 (2.8) | 14.2 | 1.8 (2.0) |
| ಸಾರ್ವಜನಿಕ ಆಡಳಿತ ಮತ್ತು ರಕ್ಷಣೆ | 12.1 | 7.5 (11.0) | 8.6 | 5.4 (11.8) | 6.8 | 4.4 (12.20) |
| ಶಿಕ್ಷಣ | 6.8 | 21.1 (38.4) | 7.2 | 24.3 (41.9) | 7.6 | 27.0 (43.50) |
| ಸಮುದಾಯ ವೈಯಕ್ತಿಕ ಸೇವೆಗಳು | 8.4 | 19.10 (31.2) | 7.0 | 9.3 (22.30) | 6.2 | 11.5 (28.6) |
| ಖಾಸಗಿ ಗ್ರಹ ಸಂಬಂಧಿ ವಲಯ | 0.7 | 6.7 (64.0) | 1.5 | 16.6 (70.90) | 1.2 | 11.7 (67.2) |
| ಇತರ ಸೇವೆಗಳು | 8.0 | 10.1 (20.1) | 9.9 | 11.5 (19.9) | 13.0 | 15.7 (20.70) |
| ಮೊತ್ತ | 100.0 | 100.0 (16.7) | 100.0 | 100.0 (17.6) | 100.0 | 100.0 (17.80) |

ಆಕರ : ಎನ್‌ಎಸ್‌ಎಸ್‌ಓ ನವರು ಹಲವು ಸುತ್ತುಗಳಲ್ಲಿ ಮಾಡಿದ ಸರ್ವೆ.

ಜಾರಿಯಾಗಿದೆಯಾದರೂ ಎಲ್ಲಾ ವಯಸ್ಸಿನ, ವರ್ಗದ, ಸಮುದಾಯದ ಮತ್ತು ಪ್ರದೇಶದ ಮಹಿಳಾ ಕಾರ್ಮಿಕರ ವೇತನ ಪುರುಷ ಉದ್ಯೋಗಿಗಳ ವೇತನಕ್ಕೆ ಸಮನಾಗಿಲ್ಲ. ಈ ಕಾನೂನನ್ನು ಜಾರಿಗೊಳಿಸಬೇಕಿರುವದು ಒಂದು ಕಳಕಳಿ ವಿಚಾರ. ಇತ್ತೀಚೆಗೆ (ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ ನಡೆಸಿದ 2017)ರ ಅಧ್ಯಯನದಂತೆ ಮಹಿಳಾ ಮತ್ತು ಪುರುಷರ ಕೂಲಿ ತಾರತಮ್ಯದ ವಿಷಯದಲ್ಲಿ ಭಾರತದ ಸ್ಥಾನ ಅತಿ ಕೆಳಮಟ್ಟದಲ್ಲಿದ್ದು ಅದು 30% ಕ್ಕೂ ಹೆಚ್ಚಿದೆ. ಅಲ್ಲದೆ 60% ರಷ್ಟು ಮಹಿಳೆಯರು ಅತಿ ಕಡಿಮೆ ಕೂಲಿ ಪಡೆಯುತ್ತಿದ್ದು 15% ರಷ್ಟು ಜನ ಉತ್ತಮ ಕೂಲಿ ಪಡೆಯುತ್ತಿದ್ದಾರೆ.

### ಸರ್ಕಾರಗಳ ಮಧ್ಯಸ್ಥಿಕೆ

ಮಹಿಳಾ ಉದ್ಯೋಗದ ಸ್ಥಿತಿ, ಅದರ ಸುಧಾರಣೆಗಾಗಿ ಸರ್ಕಾರಗಳು ರೂಪಿಸಿದ ಮಾರ್ಗೋಪಾಯಗಳು, ಯೋಜನೆಗಳ ಕುರಿತ ದೊಡ್ಡ ಇತಿಹಾಸವೆ ಇದೆ. ಇವುಗಳ ಮಧ್ಯೆ ಇದೇ ಅವಧಿಯಲ್ಲಿ ಮುಖ್ಯವಾಗಿ ಆದ ಬೆಳವಣಿಗೆಯೆಂದರೆ ಉದಾರೀಕರಣದ ಪರಿಣಾಮದಿಂದ ಸ್ವಯಂ ಉದ್ಯೋಗಿಗಳು ಮತ್ತು ಉದ್ದಿಮೆದಾರರ ನಡುವಿನ ಸಂಬಂಧ ಉತ್ತಮಗೊಂಡಿರುವುದು (ವಿಶೇಷವಾಗಿ ಅಸಂಪ್ರದಾಯಿಕ ವಲಯದಲ್ಲಿ) ಕಿರು ಸಾಲ ಸಂಘಟನೆಗಳು ಸರ್ಕಾರೇತರ ಸಂಸ್ಥೆಗಳು ಸ್ವಸಹಾಯ ಗುಂಪುಗಳು ಸಮಾಜದ ಎಲ್ಲ ಸ್ತರದ ಮಹಿಳೆಯರಿಗೆ ಎಲ್ಲ ಯೋಜನೆಗಳ ಲಾಭ ತಲುಪಬೇಕು ಎಂಬ ಕಾರ್ಯ ಸೂಚಿಯೊಂದಿಗೆ ಕಾರ್ಯ ನಿರ್ವಹಿಸುತ್ತಿವೆ. ಆದರೂ ನಿಗದಿತ ಗುರಿಯನ್ನು (ವಿಶೇಷವಾಗಿ ಕೃಷಿ ಕ್ಷೇತ್ರದಲ್ಲಿ) ತಲುಪಲಾಗಿಲ್ಲ. ವರ್ಷಕ್ಕೆ ಕನಿಷ್ಠ ನಿಗದಿತ ದಿನಗಳವರೆಗೆ ಉದ್ಯೋಗ ನೀಡುವ ಗುರಿಯೊಂದಿಗೆ ಪ್ರಾರಂಭವಾದ ಮನರೆಗಾ ಯೋಜನೆ ಆರಂಭದಲ್ಲಿ ಸ್ವಲ್ಪ ಫಲ ನೀಡಿತಾದರೂ, ಈ ಯೋಜನೆಯಲ್ಲಿ ಮಹಿಳೆಯರ ಉದ್ಯೋಗ ಗೊಂದಲಮಯವಾಗಿಯೇ ಉಳಿದಿದೆ. ಕೂಲಿಯಾಧರಿತ ಉದ್ಯೋಗದಲ್ಲಿ ಮಹಿಳೆಯರಿಗೆ ನೀಡುವ ಉದ್ಯೋಗ ಮತ್ತು ಅದರ ಜವಾಬ್ದಾರಿ ಅಂಶ ಹೊಂದಾಣಿಕೆಯಾಗುತ್ತಿಲ್ಲ. ಈ ವಲಯದಲ್ಲಿ ಯುವತಿಯರಿಗೆ ಅವಕಾಶ ನೀಡುತ್ತಿಲ್ಲ ಇದಕ್ಕೆ ಮುಖ್ಯವಾಗಿ ಅವರ ಹೆರಿಗೆ ರಜೆ ಮತ್ತು ಮಕ್ಕಳ ಪಾಲನೆಯಂತಹ ಅಂಶಗಳು ಅಡ್ಡಿಯಾಗಿದೆ. ಉದ್ಯೋಗದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕಡಿಮೆ ಇರಲು ಇನ್ನೊಂದು ಪ್ರಮುಖ ಕಾರಣವೆಂದರೆ ಅವರ ಅರ್ಹತೆಗೆ ಸೂಕ್ತವಾದ ಉದ್ಯೋಗ ದೊರೆಯದೆ ಇರುವದು. ಇಲ್ಲಿ ಮಹಿಳೆಯರ ಶಿಕ್ಷಣ ಮತ್ತು ಅವರಿಗೆ ದೊರೆಯುವ ಉದ್ಯೋಗ ಗಮನಿಸಿದರೆ ಮಾಧ್ಯಮಿಕ ಶಿಕ್ಷಣ ಪಡೆದ ಮಹಿಳೆಯರಿಗೆ ಅದಕ್ಕಿಂತ ಕೆಳಮಟ್ಟದ ಕೆಲಸ ದೊರೆಯುವದು. ಸದ್ಯ ಎರಡನೆ ಮತ್ತು ಮೂರನೆ ವಲಯದಲ್ಲಿ ಹೆಚ್ಚಿನ ಗಮನ ಹರಿಸಿ ಮಹಿಳೆಯರ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿ ನೀಡುವಂತಾಗಬೇಕು, ಕಡಿಮೆ ಆದಾಯದ ಮತ್ತು ಅನುಕೂಲಕರ ವಾತಾವರಣವಿಲ್ಲದ ಕೆಲಸಗಳಿಗೆ ತಕ್ಕಮಟ್ಟಿಗೆ ಆರ್ಥಿಕ ಬಲ ಇರುವ ಮಹಿಳೆಯರು ಬರಲು ಹಿಂಜರಿಯಬಹುದು. ತಿದ್ದುಪಡಿ ಮಾಡಿದ 2014ರ ಕಾಯಿದೆಯಲ್ಲಿ ತರಬೇತಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ನಿಗದಿತ ಅವಧಿ ಅಥವಾ ಹೆಚ್ಚಿಸಿದ ಅವಧಿಗೆ ಕೆಲಸ ವಹಿಸುವುದನ್ನು ಮಾಲಿಕರ ವಿವೇಚನೆಗೆ ಬಿಡಲಾಗಿದ್ದು ಇದರಿಂದ ಮಹಿಳಾ ಪಾಲ್ಗೊಳ್ಳುವಿಕೆ ಪ್ರಮಾಣ ತಗ್ಗಬಹುದು. ಸಾಮಾಜಿಕ ಮತ್ತು ಸಾಂಸ್ಕೃತಿಕ ನಿರ್ಬಂಧಗಳು (ಪ್ರದೇಶವಾರು ಮತ್ತು ಸಮುದಾಯಗಳಲ್ಲಿ ವಿಭಿನ್ನತೆ ಇದೆ) ಈಗಲೂ ಮಹಿಳಾ ಉದ್ಯೋಗಕ್ಕೆ ಅಡೆತಡೆಯಾಗಿವೆ. ಪಟ್ಟಣಿಗರು ಮತ್ತು ಗ್ರಾಮಸ್ಥರು ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಲು ಆಸಕ್ತಿ ಹೊಂದಿದ್ದಾರೆ. ಆದರೂ ಅವರು ಪಡೆಯುವ ಶಿಕ್ಷಣ ಅದರ ಉದ್ಯೋಗಕ್ಕೆ ದಾರಿಯಾಗುವ ರೀತಿಯಲ್ಲಿರುವದಿಲ್ಲ. ಈ ನಿರ್ಬಂಧಗಳನ್ನು ಮೀರಿ ಕೆಲಸಕ್ಕೆ ಸೇರ ಬಯಸುವ ಮಹಿಳೆಯರು ಅವರ ಕುಟುಂಬದ ಬಡತನ ನೀಗಿಸಲು ಉದ್ಯೋಗ ಸೇರುತ್ತಾರೆ. ಒಟ್ಟಾರೆಯಾಗಿ ಲಭ್ಯವಿರುವ ವಿವರ ಪರಿಶೀಲಿಸಿದಾಗ ಮಹಿಳೆಯರು ಹೆಚ್ಚಾಗಿ ಅಸಂಪ್ರದಾಯಿಕ, ಅರೆ ಕೌಶಲ್ಯದ ಕೆಲಸಗಳಲ್ಲಿ (ಮನೆ ಕೆಲಸ) ಇದ್ದು ಇಲ್ಲಿ ಕಡಿಮೆ ಆದಾಯ ಮತ್ತು ಕಡಿಮೆ ಸೌಲಭ್ಯಗಳಿದ್ದು ಉದ್ಯೋಗದ ಭದ್ರತೆಯೂ ಇರುವುದಿಲ್ಲ. ಮಹಿಳಾ ಉದ್ಯೋಗಿಗಳ ಸುರಕ್ಷತೆ ಅಂಶವೂ ಅವರ ಉದ್ಯೋಗದಲ್ಲಿ ಪಾಲ್ಗೊಳ್ಳುವಿಕೆಯ ವಿಷಯಕ್ಕೆ ಸ್ವಲ್ಪ ಅಡೆತಡೆಯಾಗಿದೆ. ರಾತ್ರಿ ಪಾಳಿಯಲ್ಲಿ ಮಹಿಳೆಯರನ್ನು ನಿಯೋಜಿಸುವ ಕುರಿತ ವಿಷಯ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ. ಇದರಲ್ಲಿ ಫ್ಯಾಕ್ಟರಿ ಕಾಯಿದೆ 1948ರ ತಿದ್ದುಪಡಿ ಸೇರಿದೆ. ಹಲವಾರು ರಾಜ್ಯ ಸರ್ಕಾರಗಳು ಈ ಕಾಯಿದೆಯನ್ನು ಹಿಂಪಡೆದಿವೆ. ಈ



ಕಾಯಿದೆಗೆ ತಿದ್ದುಪಡಿ ಮಾಡಿ ಮಹಿಳಾ ಉದ್ಯೋಗಿಗಳಿಗೆ ಅವರ ಕೆಲಸ ಮಾಡುವ ಸ್ಥಳದಲ್ಲಿ ಸುರಕ್ಷತೆ ಮತ್ತು ಅವರನ್ನು ಸುರಕ್ಷಿತವಾಗಿ ಮನೆಗೆ ತಲುಪಿಸುವ ಸಾರಿಗೆ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ. ಮಹಿಳೆಯರು ಕಾರ್ಯನಿರ್ವಹಿಸುವ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯದ ಘಟನೆಗಳು ಹೆಚ್ಚಾಗುತ್ತಿದ್ದು ನಗರ ಮತ್ತು ಪಟ್ಟಣಗಳು ಮಹಿಳೆಯರಿಗೆ ಸುರಕ್ಷಿತವಾಗಿಲ್ಲ. ಇದು ಕೂಡ ಮಹಿಳಾ ಉದ್ಯೋಗಕ್ಕೆ ಅಡೆತಡೆಯಾಗಿದೆ. ಹಲವಾರು ಅನಿಶ್ಚಿತತೆಯ ನಡುವೆಯೂ, ಮಹಿಳಾ ಉದ್ಯೋಗಿಗಳು ಹಲವಾರು ಚಳವಳಿ ಮಾಡುತ್ತಿದ್ದು, ಮಹಿಳಾ ಸಶಕ್ತೀಕರಣದತ್ತ ಲಕ್ಷಣ ಕಂಡು ಬರುತ್ತಿದೆ. ಅಸಂಘಟಿತ ವಲಯದಲ್ಲಿ ಮಹಿಳಾ ಉದ್ಯೋಗಿಗಳ ಪಾಲು ಹೆಚ್ಚಾಗಿದೆ. ಎರಡು ವಲಯದ ಅಂದರೆ ಸರ್ಕಾರಿ ಯೋಜನೆ (ಆಶಾ, ಅಂಗನವಾಡಿ ಕಾರ್ಯಕರ್ತರು ಮತ್ತು ಮನೆ ಕೆಲಸ ಮಾಡುವವರು ಇಲ್ಲಿ ಹೆಚ್ಚು ಮಹಿಳೆಯರೆ ಇದ್ದಾರೆ) ಒಂದಾಗುವ ಅವಶ್ಯಕತೆ ಇದೆ. ಅಂಗನವಾಡಿ ಕಾರ್ಯಕರ್ತರು ಬಹಳ ಹಿಂದೆಯೆ ಸಂಘಟಿತರಾಗಿದ್ದಾರೆ. ಆದರೆ ಮನೆಕೆಲಸ ಮಾಡುವ ಕೆಲಸದ ಮೌಲ್ಯಮಾಪನದ ಆಧಾರದ ಮೇಲೆ ಅವರನ್ನು ಸಂಘಟಿತರನ್ನಾಗಿ ಮಾಡಬೇಕಾಗಿದೆ.

### ಮುಕ್ತಾಯದ ಮುನ್ನ

ವಿವಿಧ ಚರ್ಚೆಗಳ ಅಭಿಪ್ರಾಯದಂತೆ ಸರ್ಕಾರ ಮತ್ತು ಕಾರ್ಮಿಕರು ಸೇರಿ ಆದ್ಯತೆ ಮೇಲೆ ಚರ್ಚೆ ಮಾಡಿ ಒಂದು ಒಮ್ಮತದ ಕ್ರೋಢೀಕೃತ ಪರಿಹಾರ ಹುಡುಕಬೇಕು ಹೊರತು ಮಹಿಳೆಯರ ಉದ್ಯೋಗಕ್ಕೆ ಸಂಬಂಧಿಸಿದ ಅರ್ಧ ಮರ್ಧ ಪರಿಹಾರ ನೀಡಬಾರದು. ಅಲ್ಲದೆ ಈಗಾಗಲೇ ನಡೆಯುತ್ತಿರುವ ಕಾರ್ಮಿಕ ಕಾಯಿದೆಗೆ ಸೂಕ್ತ ತಿದ್ದುಪಡಿ ಜತೆಗೆ ಲಿಂಗ ತಾರತಮ್ಯವಾಗದಂತೆ ಎಚ್ಚರವಹಿಸಬೇಕು. ❑

# ಬಾಲ ಕಾರ್ಮಿಕತೆ ನಿವಾರಣೆ

* ಹೆಲೆನ್ ಆರ್. ಸೆಕರ್



ಕೆಲವು ಉದ್ಯೋಗಗಳಲ್ಲಿ ಕಚ್ಚಾ ವಸ್ತುಗಳ ಸಂಗ್ರಹದಿಂದ ಹಿಡಿದು ತಯಾರಿಸಿದ ಪದಾರ್ಥಗಳನ್ನು ಒಟ್ಟುಗೂಡಿಸುವಂತಹ ಉತ್ಪಾದನೆಯ ಎಲ್ಲ ಹಂತಗಳಲ್ಲಿ ಬಾಲಶ್ರಮವನ್ನು ಬಳಸಲಾಗುತ್ತಿದೆ. ಯಾವುದೇ ಆರ್ಥಿಕ ವಲಯವಿರಲಿ, ಅನೈರ್ಮಲ್ಯ ಸ್ಥಿತಿಗಳಲ್ಲಿ ಮಕ್ಕಳು ಕೆಲಸಮಾಡುತ್ತಿದ್ದಾರೆ ಮತ್ತು ಮಾರಕ ರಾಸಾಯನಿಕಗಳು, ಕೀಟ ಕಡಿತ, ಅಪಘಾತ, ಬೀಳುವುದು ಇತ್ಯಾದಿ ಅಪಾಯಗಳಿಗೆ ಒಡ್ಡಲ್ಪಡುತ್ತಿದ್ದಾರೆ.

ಬಾಲಶ್ರಮ ಕಾನೂನು ಎಳೆ ವಯಸ್ಸಿನ ಮಕ್ಕಳ ಕಷ್ಟಕರವಾದ ಬಾಲಶ್ರಮಕ್ಕೆ ಸಂಬಂಧಿಸಿದ ಪರಿಹಾರ ಕಾರ್ಯವಿಧಾನಗಳ ಕೇಂದ್ರಬಿಂದುವಾಗಿದೆ. ಕಾನೂನನ್ನು ಯಾವಾಗಲೂ ಸಾಮಾಜಿಕ ರೂಢಿ, ಜನರ ಧೋರಣೆ ಮತ್ತು ವರ್ತನೆಗಳು ಮತ್ತು ಅವುಗಳಿಂದಾಗುವ ಪರಿಣಾಮಗಳು, ಪ್ರಕಟಣೆಗಳನ್ನು ಪರಿಷ್ಕರಿಸುವ ಸಾಧನವೆಂಬಂತೆ ಮಾತ್ರವಲ್ಲದೆ, ಸಂಕುಚಿತ ಸಾಮಾಜಿಕ ಅನಿಷ್ಟಗಳನ್ನು ತೊಡೆದುಹಾಕುವ ಸಾಧನವೆಂಬಂತೆ ಕೂಡ ಪರಿಗಣಿಸಲಾಗಿದೆ. ಹೀಗಾಗಿ, ಸಾಮಾಜಿಕ–ಆರ್ಥಿಕ ಹಂದರಲ್ಲಿ ಗಾಢವಾಗಿ ಹಾಸುಹೊಕ್ಕಾಗಿರುವ ಬಾಲಶ್ರಮದಂತಹ ಬಹಳ ಸಂಕೀರ್ಣ ವಿಷಯವನ್ನು ನಿರ್ವಹಿಸುವಲ್ಲಿ ಕಾನೂನಿನ ಮಧ್ಯಪ್ರವೇಶವು ಅತ್ಯಗತ್ಯವಾಗಿದೆ. ಭಾರತದಲ್ಲಿ, ಶಾಸನಾತ್ಮಕ ಕ್ರಿಯಾ ಯೋಜನೆಯು ರಾಷ್ಟ್ರೀಯ ಬಾಲಶ್ರಮ ನೀತಿಯ ಮೂರು ಅಂಶಗಳಲ್ಲಿ ಒಂದು. ಈ ಯೋಜನೆಯು ಸಾಮಾನ್ಯವಾಗಿ, ಉದ್ಯೋಗಗಳಲ್ಲಿ ಬಾಲಶ್ರಮವನ್ನು ಕಾಲಕ್ರಮೇಣ ನಿರ್ಮೂಲ ಮಾಡುವ ಮತ್ತು ಅದರಲ್ಲೂ ವಿಶೇಷವಾಗಿ ಅಪಾಯಕಾರಿ ಉದ್ಯೋಗಗಳಲ್ಲಿ ಬಾಲಶ್ರಮವನ್ನು ತೊಡೆದುಹಾಕುವ ಗುರಿಯನ್ನು ಹೊಂದಿದೆ. ಒಂದು ಕಾನೂನು ಬಹಳ ಪರಿಣಾಮಕಾರಿ ಸಾಧನವಾಗಬೇಕೆಂದರೆ ಅದರ ಪರಿಣಾಮಕಾರಿ ಅನುಷ್ಠಾನಕ್ಕೆ ಅಡ್ಡಿ ಉಂಟು ಮಾಡುವ ನ್ಯೂನತೆಗಳು ಮತ್ತು ನಿಬಂಧನೆಗಳಿಂದ ಅದು ಮುಕ್ತವಾಗಿರಬೇಕು.

ಪ್ರಾಥಮಿಕವಾಗಿ, ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ, 2009ರ ಸೂಚನೆಯ ಪ್ರಕಾರವಾಗಿ, ಶಾಲೆಗಳಲ್ಲಿ ಎಲ್ಲ ಮಕ್ಕಳ ನೊಂದಣಿಯನ್ನು ಖಚಿತಗೊಳಿಸುವ ಸಲುವಾಗಿ ಎಲ್ಲ ಉದ್ಯೋಗಗಳಲ್ಲಿ ಮತ್ತು ಪ್ರಕ್ರಿಯೆಗಳಲ್ಲಿ ಮಕ್ಕಳ ಬಳಕೆಯನ್ನು ನಿಷೇಧಿಸಲು ಮತ್ತು ಅಪಾಯಕಾರಿ ಉದ್ಯೋಗಗಳು ಮತ್ತು ಪ್ರಕ್ರಿಯೆಗಳಲ್ಲಿ ಹದಿವಯಸ್ಕರ ಉದ್ಯೋಗವನ್ನು ನಿಷೇಧಿಸಲು ಮತ್ತು ಐಎಲ್‌ಓ ಸಮಾವೇಶ 138 ಮತ್ತು 182ರ ಪ್ರಕಾರ ಹದಿವಯಸ್ಕರ ಸೇವಾ ಪರಿಸ್ಥಿತಿಗಳನ್ನು ನಿಯಂತ್ರಿಸಲು 2016ರಲ್ಲಿ ಬಾಲಶ್ರಮ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ಕ್ಕೆ ತಿದ್ದುಪಡಿತರಲಾಯಿತು.

ಐಎಲ್‌ಓ ಸಮಾವೇಶದ ಸಂ. 138 ಪ್ರಕಾರ, ಯಾವುದೇ ಉದ್ಯೋಗಕ್ಕೆ ಕನಿಷ್ಠ ವಯಸ್ಸು ಕಡ್ಡಾಯ ಶಾಲೆಯನ್ನು ಮುಗಿಸಿದ ವಯಸ್ಸಿಗಿಂತ ಕಡಿಮೆ ಇರಬಾರದು ಮತ್ತು ಯಾವುದೇ ಸಂದರ್ಭದಲ್ಲಿ ಅದು 15ಕ್ಕಿಂತ ಕಡಿಮೆ ಇರಬಾರದು. ಐಎಲ್‌ಓ ಸಮಾವೇಶ ಸಂ 182ನ ವಿಧಿ 1ರ ಹೇಳಿಕೆಯು ಬಾಲಶ್ರಮಗಳನ್ನು ತುರ್ತು ವಿಷಯವೆಂದು ಪರಿಗಣಿಸಿ ಅದನ್ನು ನಿಷೇಧಿಸಲು ತಕ್ಷಣವೇ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳತಕ್ಕದ್ದೆಂದು ಸ್ಪಷ್ಟಗೊಳಿಸುತ್ತದೆ. ಈ ಲೇಖನವು ಭಾರತದ ಸನ್ನಿವೇಶಕ್ಕೆ ಸಂಬಂಧಿಸಿದಂತೆ ಬಾಲಶ್ರಮ ಕಾನೂನಿನ ಇತ್ತೀಚಿನ ಸುಧಾರಣೆಗಳ ಬಗ್ಗೆ ಚರ್ಚಿಸುತ್ತದೆ. ಬಾಲಶ್ರಮ ಪದದಲ್ಲಿ ಎರಡು ಶಬ್ದಗಳಿವೆ. 'ಬಾಲ' ಎಂಬುದು ಮುಗ್ಧತೆ ಮತ್ತು ನಾಜೂಕು ಪರಿಸ್ಥಿತಿಯನ್ನು ಸೂಚಿಸಿದರೆ 'ಶ್ರಮ' ಎನ್ನುವುದು ದುಡಿಮೆ ಮತ್ತು ಕಷ್ಟಕರ ಕೆಲಸವನ್ನು ಸೂಚಿಸುತ್ತದೆ. ನಮಗೆ ತಿಳಿದಿರುವ ಇತಿಹಾಸದುದ್ದಕ್ಕೂ ಮಕ್ಕಳು ಕೆಲಸ ಮಾಡುತ್ತಿದ್ದಾರೆ. ಕೆಲಸ ಮಾಡುವುದರಿಂದ ಮಕ್ಕಳಲ್ಲಿ ಆತ್ಮವಿಶ್ವಾಸ ಉಂಟಾಗುತ್ತದೆ

* ಸಮನ್ವಯಕರು, ಬಾಲ ಕಾರ್ಮಿಕ ಕುರಿತಾದ ರಾಷ್ಟ್ರೀಯ ಸಂಪನ್ಮೂಲ ಕೇಂದ್ರ, ನವದೆಹಲಿ. E-mail : helensekar@gmail.com

ಮತ್ತು ಆತ್ಮಗೌರವ ಭಾವನೆಯನ್ನು ಗಳಿಸಲು ಹಾಗೂ ಸಾಮಾಜೀಕರಣದ ಪ್ರಕ್ರಿಯೆಗೆ ಕೂಡ ಇದು ಸಹಾಯಕಾರಿ ಎಂದು ಹೇಳಲಾಗಿದೆ. ಸಣ್ಣವಯಸ್ಸಿನಲ್ಲಿ ಕೌಶಲ್ಯಗಳನ್ನು ಕಲಿಯವುದರಿಂದ ಸಂಪ್ರದಾಯಿಕ ಕೌಶಲ್ಯಗಳನ್ನು ಸಂರಕ್ಷಿಸಲಾಗುತ್ತದೆ ಮತ್ತು ಅವುಗಳನ್ನು ಒಂದು ಪೀಳಿಗೆಯಿಂದ ಇನ್ನೊಂದಕ್ಕೆ ಹಸ್ತಾಂತರಿಸಲು ನೆರವಾಗುತ್ತದೆ ಎಂಬ ಅಭಿಪ್ರಾಯವಿದೆ. ಆದರೆ ಅವರ ಮಾನಸಿಕ ಮತ್ತು ಆರೋಗ್ಯಕ್ಕೆ ಹಾನಿಯಾಗುವಂತೆ ಕೆಲಸಗಳಲ್ಲಿ ದೀರ್ಘ ಸಮಯದ ಕಾಲ ಮಕ್ಕಳನ್ನು ಒತ್ತಾಯಿಸುವುದು ಮತ್ತು ಅವರ ಬಾಲ್ಯವನ್ನು ಕಸಿದುಕೊಂಡು ಶೈಕ್ಷಣಿಕ ಮತ್ತು ಇತರೆ ಹಕ್ಕುಗಳು ಹಾಗೂ ಅವಕಾಶಗಳಿಂದ ದೂರವಿಟ್ಟಾಗ ಕೆಲಸದ ಈ ಸಕಾರಾತ್ಮಕ ಅಂಶಗಳು ಮಹತ್ತರವಾಗಿ ಬದಲಾಗಿಯೇ ಬಿಡುತ್ತವೆ.

ಉದ್ಯೋಗದಲ್ಲಿರುವ ಮಕ್ಕಳಿಗೆ ಅತಿ ಕಡಿಮೆ ಸಂಬಳ ನೀಡಲಾಗುತ್ತದೆ. ಎಷ್ಟೋ ಕಡೆಗಳಲ್ಲಿ ಅವರನ್ನು ಅವರ ಪೋಷಕರು ಅಥವಾ ಕುಟುಂಬ ಸದಸ್ಯರು ಪಾವತಿಸಲಾಗದ ಸಾಲದ ಬದಲಿಗೆ ಕೆಲಸಕ್ಕೆ ಇಟ್ಟುಕೊಂಡಾಗ ಸಂಬಳವನ್ನೂ ನೀಡುವುದಿಲ್ಲ. ಇಂದು ನಾವು ಬಾಲಶ್ರಮವು ಬೇರೆ ಬೇರೆ ರೀತಿಯ ಸ್ವರೂಪಗಳಲ್ಲಿರುವುದನ್ನು ಕಾಣುತ್ತೇವೆ. ಸಂಬಳದ/ಸಂಬಳವಿಲ್ಲದ ಬಾಲಶ್ರಮ, ಜೀತದ ಬಾಲಶ್ರಮ, ಕುಟುಂಬದ ಭಾಗವಾಗಿ ಕೆಲಸ ಮಾಡುತ್ತಿರುವ ಮಕ್ಕಳು, ಸ್ವಯಂ ಉದ್ಯೋಗಿ ಮಕ್ಕಳು, ಮನೆ ಕೆಲಸ ಅಥವಾ ಕೈಗಾರಿಕಾ ಕಾರ್ಯಗಳಲ್ಲಿ ಕೆಲಸ ಮಾಡುವ ಮಕ್ಕಳು, ವಲಸೆ/ ವಲಸೇತರ ಕಾರ್ಮಿಕ ಮಕ್ಕಳು ಇತ್ಯಾದಿ ವಿಭಿನ್ನ ರೀತಿಯ ಬಾಲಶ್ರಮಗಳಿವೆ. ಮಕ್ಕಳನ್ನು ಕೃಷಿ, ಜಾನುವಾರು ಸಾಕಾಣಿಕೆ, ಅರಣ್ಯ, ತಯಾರಿಕೆ, ಆಹಾರ ಸಂಸ್ಕರಣೆ, ಮತ್ತು ಇತರೆ ಸೇವಾ ವಲಯಗಳಂತಹ ವಿಭಿನ್ನ ಅನೌಪಚಾರಿಕ ಆರ್ಥಿಕತೆ ವಲಯಗಳಲ್ಲಿ ಉದ್ಯೋಗಗಳಲ್ಲಿ ಮಕ್ಕಳನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಬೇರೆ ಬೇರೆ ಸಮಯಗಳಲ್ಲಿ ಸಂಗ್ರಹಿಸಿದ ಮಾಹಿತಿ ಮೂಲಗಳು ಸೂಚಿಸಿವೆ. ಕೆಲವು ಉದ್ಯೋಗಗಳಲ್ಲಿ ಕಚ್ಚಾ ವಸ್ತುಗಳ ಸಂಗ್ರಹದಿಂದ ಹಿಡಿದು ತಯಾರಿಸಿದ ಪದಾರ್ಥಗಳನ್ನು ಒಟ್ಟುಗೂಡಿಸುವಂತಹ ಉತ್ಪಾದನೆಯ ಎಲ್ಲ ಹಂತಗಳಲ್ಲಿ ಬಾಲಶ್ರಮವನ್ನು ಬಳಸಲಾಗುತ್ತಿದೆ.



ಯಾವುದೇ ಆರ್ಥಿಕ ವಲಯವಿರಲಿ, ಅನೈರ್ಮಲ್ಯ ಸ್ಥಿತಿಗಳಲ್ಲಿ ಮಕ್ಕಳು ಕೆಲಸಮಾಡುತ್ತಿದ್ದಾರೆ ಮತ್ತು ಮಾರಕ ರಾಸಾಯನಿಕಗಳು, ಕೀಟ ಕಡಿತ, ಅಪಘಾತ, ಬೀಳುವುದು ಇತ್ಯಾದಿ ಅಪಾಯಗಳಿಗೆ ಒಡ್ಡಲ್ಪಡುತ್ತಿದ್ದಾರೆ.

ಹಲವಾರು ತಯಾರಿಕಾ ಘಟಕಗಳಲ್ಲಿ ಕೆಲಸಮಾಡುವ ಮಕ್ಕಳು ಲೋಹಗಳ ಶಿಲ್ಕುಗಳು ಮತ್ತು ವಿವಿಧ ರೀತಿಯ ಧೂಳುಗಳಿಗೆ ಒಡ್ಡಲ್ಪಡುತ್ತಿದ್ದಾರೆ. ಸಿಲಿಕಾಸಿಸ್ (ಗಾಜು ತಯಾರಿಕೆ), ಆಸ್ಬೆಸ್ಟಾಸ್ (ಸಿಮೆಂಟ್ ಮತ್ತು ಸ್ಲೇಟ್), ಬ್ರಾಂಕಿಯಲ್ ಆಸ್ತಮಾ (ರೇಶ್ಮೆ, ಉಡುಪು, ವಸ್ತ್ರ, ಕಾರ್ಪೆಟ್), ಕ್ಷಯ (ಬೀಡಿ ತಯಾರಿಕೆ), ಧನುರ್ವಾಯು (ಕಸ ಆಯುವವರು), ಕಣ್ಣು ರೋಗ (ಜ಼ರ್ದೋಸಿ, ಹತಾರಿ, ಜ಼ರಿ, ಕಾರ್ಚಬ್)ಗಳಂತ ಕಾಯಿಲೆಗಳಿಗೆ ತುತ್ತಾಗುತ್ತಾರೆ. ಇಂತಹ ಕೆಲವು ರೋಗಗಳು ವಾಸಿಯಾಗುವುದೇ ಇಲ್ಲ. ಅಪಾಯಕಾರಿ ಕೆಲಸಕ್ಕೆ ಒಂದು ಉದಾಹರಣೆಯೆಂದರೆ ಹಿತ್ತಾಳೆ ತಯಾರಿಕೆ ಸಂಸ್ಕರಣ ಉದ್ಯೋಗದಲ್ಲಿ ಎರಕದ ಅಚ್ಚಿನ ಕಾರ್ಯದಲ್ಲಿ ಮಕ್ಕಳನ್ನು ಕೆಲಸಕ್ಕೆ ಹಚ್ಚಲಾಗುತ್ತಿದೆ. ಕರಗಿದ ಹಿತ್ತಾಳೆಯನ್ನು ಅಚ್ಚುಗಳಲ್ಲಿ ಸುರಿಯುವಾಗ ಕುಲುಮೆಯ ತಾಪಮಾನ 1100 ಸೆಂ. ಆಗಿರುತ್ತದೆ. ಇದಲ್ಲದೆ ನಿರಂತರವಾಗಿ ತಿರುಗುವ ಉಪಕರಣದ ವಿರುದ್ಧ ದಿಕ್ಕಿನಲ್ಲಿ ಆಕಾರ ನೀಡಬೇಕಾದ ಹಿತ್ತಾಳೆ ತುಂಡನ್ನು ಬಹಳ ಕಾಲ ಹಿಡಿಯುವುದರಿಂದ ಎಳೆಯ ಕೈಗಳಿಗೆ ತೀವ್ರ ನೋವು ಉಂಟಾಗುತ್ತದೆ. ಪಾಲೀಷು ಮಾಡುವಾಗ ಹೊರಹೊಮ್ಮುವ ಅನಿಲಗಳ, ಧೂಳು ಸೇವನೆಯಿಂದಾಗಿ ಶ್ವಾಸಕೋಶ ರೋಗಗಳು ಉಂಟಾಗುತ್ತವೆ. ಇಷ್ಟೇ ಅಲ್ಲದೆ ಶಾಶ್ವತವಾಗಿ ಅಂಕಲೋಸಿಸ್, ಸ್ಪಾಂಡಿಲೈಟಿಸ್, ಮತ್ತು ಬೆನ್ನುಹುರಿ ವಕ್ರತೆಗಳು ಆ ಎಳೆಯರಲ್ಲಿ ಉಂಟಾಗುತ್ತವೆ.

ಬೀಗ ತಯಾರಿಕೆ ಇತ್ಯಾದಿ ಸಂಸ್ಕರಣಾ ಘಟಕ ಕಾರ್ಖಾನೆಗಳಲ್ಲಿ ಪಾಲೀಷು ಮಾಡುವುದು, ಎಲೆಕ್ಟ್ರೋಪ್ಲೇಟಿಂಗ್ ಮತ್ತು ಸ್ಪ್ರೆ ಪೇಂಟಿಂಗ್‌ಗಳಂತಹ ಉದ್ಯೋಗಗಳಲ್ಲಿ ಕೆಲಸ ಮಾಡುವ ಮಕ್ಕಳು ಔದ್ಯೋಗಿಕ ಅಪಾಯಗಳಿಗೆ ಒಡ್ಡಲ್ಪಡುತ್ತಾರೆ.

ಮಕ್ಕಳ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ, 2009 (ಆರ್‌ಟಿಇ ಕಾಯ್ದೆ)ನ್ನು ಜಾರಿಗೊಳಿಸಿ ಭಾರತ ಸರ್ಕಾರವು ಶಿಕ್ಷಣ ಹಕ್ಕನ್ನು ಮಕ್ಕಳ ಮೂಲಭೂತಹಕ್ಕಾಗಿ ಮಾಡಿದೆ. ಇದರ ಪ್ರಕಾರ 6–14 ವಯೋಗುಂಪಿಗೆ ಬರುವ ಪ್ರತಿಯೊಂದು ಮಗುವಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕು. ಮಕ್ಕಳ ನೊಂದಣಿ ಮತ್ತು ಶಾಲಾ ಹಾಜರಾತಿ ಹೆಚ್ಚುತ್ತಾ ಹೋಗುವುದರಲ್ಲಿ ಮಾತ್ರವಲ್ಲದೆ 2001ರಲ್ಲಿ 12.7 ಮಿಲಿಯನ್ ಮಕ್ಕಳು ಬಾಲಶ್ರಮದಲ್ಲಿದ್ದು 2011ರಲ್ಲಿ ಇದು 10.1 ಆಗಿರುವುದು ಬಾಲಶ್ರಮ ನೀತಿ ಉದ್ದೇಶಗಳನ್ನು ಸಾಧಿಸುತ್ತಿರುವುದನ್ನು ಎತ್ತಿ ತೋರಿಸುತ್ತದೆ. ಸರಿಸುಮಾರು ಅದೇ ಅವಧಿಯಲ್ಲಿ ಎನ್‌ಎಸ್‌ಎಸ್‌ಓ ಸಮೀಕ್ಷೆ ವರದಿಯು 2004–5ರಲ್ಲಿ 9.07 ಮಿಲಿಯನ್ ಮಕ್ಕಳು ಕೆಲಸಮಾಡುತ್ತಿದ್ದು 2009–10ರಲ್ಲಿ ಅದು 4.98 ಮಿಲಿಯನ್ ಆಗಿದೆ ಎಂದು ತೋರಿಸಿದೆ. 14 ವರ್ಷಕ್ಕಿಂತ ಕೆಳಗಿರುವ ಮಕ್ಕಳನ್ನು 18 ಉದ್ಯೋಗಗಳು ಮತ್ತು 65 ಪ್ರಕ್ರಿಯೆಗಳಲ್ಲಿ ಕೆಲಸದಲ್ಲಿ ಇಟ್ಟುಕೊಳ್ಳುವುದನ್ನು ಬಾಲಶ್ರಮ(ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ನಿಷೇಧಿಸಿದೆ. 2016ರ ತಿದ್ದುಪಡಿಯ ನಂತರ ಯಾವುದೇ ಉದ್ಯೋಗದಲ್ಲಿ 14 ವರ್ಷದ ಕೆಳಗಿನ ಮಕ್ಕಳನ್ನು ಉದ್ಯೋಗ ಅಥವಾ ಕೆಲಸಕ್ಕೆ ಇಟ್ಟುಕೊಳ್ಳುವುದನ್ನು ಬಾಲ ಮತ್ತು ಹದಿವಯಸ್ಕರ ಶ್ರಮ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ಸಂಪೂರ್ಣವಾಗಿ ನಿಷೇಧಿಸುತ್ತದೆ.

ಈ ಕಾಯ್ದೆಯು ಹದಿವಯಸ್ಕರೆಂದರೆ ಹದಿನಾಲ್ಕು ವಯಸ್ಸನ್ನು ಮುಗಿಸಿದ ಆದರೆ

ಹದಿನೆಂಟು ವರ್ಷ ಮುಗಿಸದ ವ್ಯಕ್ತಿಗಳು ಎಂದು ವ್ಯಾಖ್ಯಾನಿಸುತ್ತದೆ. ಕಾರ್ಖಾನೆ ಕಾಯ್ದೆ, 1948ರಲ್ಲಿ ನಿಗದಿ ಪಡಿಸಿರುವ ಗಣಿಗಳು, ಸ್ಫೋಟಕಗಳು, ಅಪಾಯಕಾರಿ ಉದ್ಯೋಗಗಳು ಅಥವಾ ಪ್ರಕ್ರಿಯೆಗಳಲ್ಲಿ 18 ವರ್ಷದ ಕೆಳಗಿನ ಎಲ್ಲ ಮಕ್ಕಳು ಕೆಲಸ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ತಿದ್ದುಪಡಿ ಕಾಯ್ದೆಯನ್ನು ಜಾರಿಗೊಳಿಸಿದ ಕೂಡಲೇ ಕಾಯ್ದೆಯ ಅಪಾಯಕಾರಿ ಉದ್ಯೋಗಗಳು ಮತ್ತು ಪ್ರಕ್ರಿಯೆಗಳ ಕುರಿತಾದ ಈಗಿರುವ ನಿಯಮಗಳನ್ನು ಪರಿಷ್ಕರಿಸಲು ಒಂದು ತಾಂತ್ರಿಕ ಸಲಹಾ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ಈಗಾಗಲೇ ಎರಡು ಭಾಗಗಳಲ್ಲಿ ನಿಯಮಗಳನ್ನು ಶಿಫಾರಸ್ಸು ಮಾಡಿದೆ. ಭಾಗ ಅ ನಲ್ಲಿ ಹದಿವಯಸ್ಕರನ್ನು ಕೆಲಸಕ್ಕೆ ನಿಷೇಧಿಸತಕ್ಕ ಅಪಾಯಕಾರಿ ಉದ್ಯೋಗಗಳು ಮತ್ತು ಪ್ರಕ್ರಿಯೆಗಳನ್ನು ನೀಡಲಾಗಿದೆ. ಮಕ್ಕಳನ್ನು ನೆರವಿಗೆ ತೆಗೆದುಕೊಳ್ಳುವುದನ್ನು ನಿಷೇಧಿಸಿತಕ್ಕ ಅಪಾಯಕಾರಿ ಉದ್ಯೋಗಗಳು ಮತ್ತು ಪ್ರಕ್ರಿಯೆಗಳನ್ನು ಭಾಗ ಆ ನಲ್ಲಿ ನೀಡಲಾಗಿದೆ. ವರದಿಯು ನೆಲದೊಳಗೆ ಮತ್ತು ನೀರಿನೊಳಗೆ ಮಾಡುವ ಕೆಲಸಗಳನ್ನು ವಿಶೇಷವಾಗಿ ಸೂಚಿಸುತ್ತಾ ಒಂಭತ್ತು ವರ್ಗಗಳ ಉದ್ಯೋಗಗಳು ಮತ್ತು ಅಪಾಯಕಾರಿ ಪ್ರಕ್ರಿಯೆಗಳನ್ನು ವಿಷದ ಪಡಿಸಿದೆ. ಹಾಗೆಯೇ ಅಪಾಯಕಾರಿ ಪ್ರಕ್ರಿಯೆಗಳನ್ನು ಕೈಗೊಳ್ಳುವ ಕಾರ್ಖಾನೆಗಳ ಪಟ್ಟಿ ಮಾಡಿದೆ.

ಅಂತಹ ಕಾರ್ಖಾನೆಗಳ ಕೆಲವು ಉದಾಹರಣೆಗಳೆಂದರೆ, ಕಬ್ಬಿಣ ಮತ್ತು ಕಬ್ಬಿಣೇತರ ಲೋಹ ಕಾರ್ಖಾನೆಗಳು, ವಿಭಿನ್ನ ರೀತಿಯ ರಾಸಾಯನಿಕ ಕಾರ್ಖಾನೆಗಳು, ಕುಲುಮೆ ಉದ್ದಿಮೆಗಳು, ವಿದ್ಯುತ್ ಉತ್ಪಾದನಾ ಕಾರ್ಖಾನೆಗಳು, ಸಿಮೆಂಟ್, ರಬ್ಬರ್, ಪೆಟ್ರೋಲಿಯಂ, ಮೂರು ರಸಗೊಬ್ಬರ ಕಾರ್ಖಾನೆಗಳು, ಔಷಧಿ ಕಾರ್ಖಾನೆಗಳು, ಕಾಗದ ತಿರುಳು, ಪೆಟ್ರೋಕೆಮಿಕಲ್, ಪೇಂಟುಗಳು ಮತ್ತು ಬಣ್ಣಗಳ ಕಾರ್ಖಾನೆಗಳು, ಎಲೆಕ್ಟ್ರೋಪ್ಲೇಟಿಂಗ್, ಚರ್ಮ ಸಂಸ್ಕರಣೆ, ಮದ್ಯ ತಯಾರಿಕೆ, ಗಾಜು ಮತ್ತು ಸೆರಾಮಿಕ್, ಕಸಾಯಿಖಾನೆ, ನಿರ್ಮಾಣ ಕಾರ್ಖಾನೆಗಳು, ಇತ್ಯಾದಿಗಳು. ಶಾಲಾ ಸಮಯದ ನಂತರ ಮತ್ತು ರಜೆ ಸಮಯದಲ್ಲಿ ತಮ್ಮ ಕುಟುಂಬಗಳು ಅಥವಾ ಕುಟುಂಬ ಉದ್ದಿಮೆಗಳಿಗೆ ಸಹಾಯ ಮಾಡುವ ಮಕ್ಕಳಿಗೆ ರಿಯಾಯಿತಿ ನೀಡಲಾಗಿದೆ. ಯಾವುದೇ ಕಾರಣಕ್ಕೆ ಮಗುವಿನ ಶಿಕ್ಷಣಕ್ಕೆ ಧಕ್ಕೆ ಬರಬಾರದೆಂದು ಕಾನೂನು ಸೂಚನೆ ನೀಡಿದೆ. ಜಾಹಿರಾತು, ಚಲನಚಿತ್ರಗಳು, ಟಿವಿ ಧಾರವಾಹಿಗಳು ಅಥವಾ ಇಂತಹ ದೃಶ್ಯ-ಶ್ರಾವ್ಯ ಮಾಧ್ಯಮಗಳು ಅಥವಾ ಯಾವುದೇ ಇತರೆ ಮನೋರಂಜನಾ ಕಾರ್ಖಾನೆಗಳಲ್ಲಿ ಅಥವಾ ಸರ್ಕಸನ್ನು ಹೊರತು ಪಡಿಸಿದ ಕ್ರೀಡಾ ಚಟುವಟಿಕೆಗಳಲ್ಲಿ ಪಟುಗಳಾಗಿ ಅಥವಾ ಕಲಾವಿದರಾಗಿ ಕೆಲಸ ಮಾಡುವ ಮಕ್ಕಳನ್ನು ನಿಬಂಧನೆಗಳು ಮತ್ತು ಸುರಕ್ಷಣಾ ಕ್ರಮಗಳಿಗೆ ಒಳಪಟ್ಟು ಈ ಕಾಯ್ದೆಯಿಂದ ಹೊರತುಪಡಿಸಲಾಗಿದೆ. ಕಲಾವಿದರು ಅಂದರೆ ನಟ/ನಟಿ, ಹಾಡುಗಾರ/ಗಾರ್ತಿ, ಕ್ರೀಡಾಪಟುವಾಗಿ ಕಾರ್ಯನಿರ್ವಹಿಸುವ ಅಥವಾ ಅಭ್ಯಾಸಮಾಡುವ ಮಗು ಎಂದರ್ಥ. ಕಾನೂನಿನ ಉಲ್ಲಂಘನೆಗೆ ಬಾಲಶ್ರಮ ಮತ್ತು ಹದಿವಯಸ್ಕ ಶ್ರಮ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ಉಗ್ರವಾದ ಶಿಕ್ಷೆಯನ್ನು ಒದಗಿಸುತ್ತದೆ. ವಿಭಾಗ 3 ಅಥವಾ 3 ಎ ಅಡಿಯಲ್ಲಿ ಮಾಲಿಕನು ಎಸಗಿದ ಅಪರಾಧವು ವಿಚಾರಾರ್ಹವಾಗಿರುತ್ತದೆ ಮತ್ತು ಇದಕ್ಕೆ 6 ತಿಂಗಳಿಗಿಂತ ಕಡಿಮೆಯಿರದಂತಹ ಆದರೆ ಎರಡು ವರ್ಷಗಳ ಕಾಲ ವಿಸ್ತರಿಸಬಹುದಾದ ಒಂದು ಅವಧಿಯ ಜೈಲುವಾಸ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿರದ ಆದರೆ ಐವತ್ತು ಸಾವಿರ ರೂಪಾಯಿಗಳವರೆಗೆ ಹೆಚ್ಚಿಸಬಹುದಾದ ದಂಡ ಅಥವಾ ಎರಡು ಒಟ್ಟಿಗೆ ನೀಡಬಹುದಾದ ಶಿಕ್ಷೆಗೆ ಒಳಪಡಿಸಬಹುದಾದ್ದು. ಕಾನೂನನ್ನು ಪದೇ ಪದೇ ಉಲ್ಲಂಘಿಸಿದವರಿಗೆ ಒಂದು ವರ್ಷಕ್ಕಿಂತ ಕಡಿಮೆಯಿರದ ಆದರೆ ಮೂರುವರ್ಷಗಳ ಕಾಲ ವಿಸ್ತರಿಸಬಹುದಾದ ಜೈಲುವಾಸ ಶಿಕ್ಷೆ ನೀಡತಕ್ಕದ್ದೆಂದು ಹೇಳಲಾಗಿದೆ. ಬಾಲಶ್ರಮ ಕಾಯ್ದೆಯ ವಿಭಾಗ 3 ಅಥವಾ 3 ಎ ಅನ್ನು ಉಲ್ಲಂಘಿಸಿ ಮಗುವನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಲು ಅನುಮತಿ ನೀಡಿದರೆ ಪೋಷಕರಿಗೆ ಮತ್ತು ತಂದೆತಾಯಿಯರಿಗೆ ಶಿಕ್ಷೆಯನ್ನು ಕಾನೂನು ಒದಗಿಸುತ್ತದೆ. ಮೊದಲ ಅಪರಾಧಕ್ಕೆ ಶಿಕ್ಷೆಯಿಲ್ಲ. ಆದರೆ ಮತ್ತೆ ಅಪರಾಧ ಮಾಡಿದರೆ 10 ಸಾವಿರ ರೂಪಾಯಿಗಳವರೆಗೆ ದಂಡ ನೀಡುವ ಶಿಕ್ಷೆಯನ್ನು ಒದಗಿಸುತ್ತದೆ. ಬಾಲ ಕಾರ್ಮಿಕ ನಿಷೇಧ ಕಾನೂನಿನ ಪ್ರಕಾರ ಕೆಲಸದ ಸ್ಥಳಗಳಿಂದ ರಕ್ಷಿಸಲ್ಪಟ್ಟ ಮಗು



ಮತ್ತು ಹದಿವಯಸ್ಕರಿಗೆ ಪುನರ್ವಸತಿ ಕಲ್ಪಿಸಬೇಕಾಗುತ್ತದೆ. ಬಾಲಶ್ರಮ ಕಾನೂನು ಬಾಲಶ್ರಮ ಮತ್ತು ಹದಿವಯಸ್ಕ ಶ್ರಮ ಪುನಸ್ಥಾಪನಾ ನಿಧಿಯ ರಚನೆಗೆ ಅವಕಾಶ ಒದಗಿಸುತ್ತದೆ ಮತ್ತು ಕಾರ್ಯವಿಧಾನವನ್ನು ನೀಡುತ್ತದೆ. ಕಾಯ್ದೆಯು ಇಂತಹ ಅಧಿಕಾರಗಳನ್ನು ಅಥವಾ ಪರಿಣಾಮಕಾರಿ ಅನುಷ್ಠಾನದ ಕರ್ತವ್ಯವನ್ನು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ವಹಿಸುವಂತೆ ಸರ್ಕಾರಕ್ಕೆ ನಿರ್ದೇಶಿಸುತ್ತದೆ ಮತ್ತು ಕಾಲಕಾಲಿಕ ತಪಾಸಣೆಗಳನ್ನು ಮತ್ತು ಸರ್ಕಾರದಿಂದ ಸೂಕ್ತ ನಿಯಂತ್ರಣವನ್ನು ಖಚಿತಪಡಿಸುವುದನ್ನು ನಿರ್ದಿಷ್ಟವಾಗಿ ಸೂಚಿಸುತ್ತದೆ. ಹದಿನಾಲ್ಕು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಎಲ್ಲ ಮಕ್ಕಳನ್ನು ನೊಂದಾಯಿಸುವುದು ಮತ್ತು ರಕ್ಷಿಸುವುದರ ಮೂಲಕ ಮಧ್ಯಪ್ರವೇಶ ಕಾರ್ಯವನ್ನು ನಡೆಸಿ ಈಗ ತಿದ್ದುಪಡಿಯಾಗಿರುವ ಬಾಲಶ್ರಮ ಕಾಯ್ದೆಯ ಉದ್ದೇಶವನ್ನು ಸಾಧಿಸಬಹುದಾಗಿದೆ. ಇದರ ಜೊತೆ ಜೊತೆಗೆ ಬಾಲಶ್ರಮವನ್ನು ಗುರುತಿಸತಕ್ಕದ್ದು, ಅವರನ್ನು ರಕ್ಷಿಸತಕ್ಕದ್ದು ಮತ್ತು ಅವರನ್ನು ಶೈಕ್ಷಣಿಕ ಪುನಸ್ಥಾಪನೆಗಾಗಿ ಬಿಡುಗಡೆಮಾಡತಕ್ಕದ್ದು ಮತ್ತು ವಲಸೆಗಾರರು ಮತ್ತು ದುರ್ಬಲ ಸಮುದಾಯಗಳಿಗೆ ಹೆಚ್ಚಿನ ಒತ್ತು ನೀಡುತ್ತಾ, ಅವರಿಗೆ ಉದ್ಯೋಗ ಕೌಶಲ್ಯಗಳನ್ನು ಒದಗಿಸಿ ಮತ್ತು ಆದಾಯ ಉಂಟುಮಾಡುವ ಮಾರ್ಗಗಳನ್ನು ಒದಗಿಸುತ್ತಾ, ಅವರ ಕುಟುಂಬಗಳ ಆರ್ಥಿಕ ಪುನಸ್ಥಾಪನೆಯನ್ನು ಮಾಡತಕ್ಕದ್ದು. ರಾಜ್ಯ ಮತ್ತು ರಾಜ್ಯೇತರ ಪಾಲುದಾರರಲ್ಲಿ ಅರಿವು ಮೂಡಿಸುವಿಕೆ, ತರಬೇತಿ, ಸಾಮರ್ಥ್ಯ ರಚನೆ ಮತ್ತು ಸಂವೇದನಶೀಲತೆಗಳನ್ನು ಉಂಟುಮಾಡಿ ಅವರ ಸಾಮಾಜಿಕ ಸಶಕ್ತೀಕರಣದ ಮೂಲಕ ಕಾನೂನಿನ ಪರಿಣಾಮಕಾರಿ ಅನುಷ್ಠಾನ ಮಾಡಬಹುದಾಗಿದೆ. ಇದು ಭಾರತದಲ್ಲಿ ಬಾಲಾಶ್ರಮವನ್ನು ಕೊನೆಗಾಣಿಸುವ ದಾರಿಗೆ ಎಡೆಮಾಡಿಕೊಡುತ್ತದೆ. ❑

# ಹೆರಿಗೆ ಸೌಲಭ್ಯ ಹೆಚ್ಚಳ : ಐದು ದಶಕಗಳ ಹಳೆಯ ಕಾನೂನಿಗೆ ತಿದ್ದುಪಡಿ

* ಸಿ. ಜಿ. ಮಂಜುಳಾ



**ಸುದೀರ್ಘ ಹೆರಿಗೆ ರಜೆ ನೀಡುವುದು ಸಾಮಾಜಿಕವಾಗಿ ಅಗತ್ಯವಾದುದು. ತಾಯ್ತನ ಬರೀ ಹೆಣ್ಣಿಗಷ್ಟೇ ಸಂಬಂಧಿಸಿದ್ದಲ್ಲ. ಸಮಾಜವನ್ನು ಮುಂದುವರಿಸುವ ಈ ಪ್ರಕ್ರಿಯೆಯನ್ನು ಗೌರವಿಸಿ ಅಗತ್ಯ ಸೌಲಭ್ಯಗಳನ್ನು ನೀಡಬೇಕಾದ ಹೊಣೆಗಾರಿಕೆಯನ್ನು ಈ ತಿದ್ದುಪಡಿ ಕಾನೂನು ಎತ್ತಿಹಿಡಿದಿದೆ ಎಂಬುದು ಸ್ವಾಗತಾರ್ಹವಾದ ಅಂಶ.**

ಹೆರಿಗೆ ಸೌಲಭ್ಯ (ತಿದ್ದುಪಡಿ) ಮಸೂದೆ 2016ಕ್ಕೆ, 2017ರ ಮಾರ್ಚ್ 9ರಂದು ಲೋಕಸಭೆ ಅಂಗೀಕಾರ ನೀಡಿತು. ಈ ಮಸೂದೆ, ಕಳೆದ ವರ್ಷ 2016ರ ಆಗಸ್ಟ್ 11ರಂದೇ ರಾಜ್ಯಸಭೆಯಲ್ಲೂ ಅಂಗೀಕಾರವಾಗಿತ್ತು. ಈಗ ಈ ತಿದ್ದುಪಡಿ ವಿಧೇಯಕ್ಕೆ 2017ರ ಮಾರ್ಚ್ 27ರಂದು ರಾಷ್ಟ್ರಪತಿಯವರ ಅಂಕಿತವೂ ಬಿದ್ದಿದೆ. ಜೊತೆಗೆ 2017ರ ಮಾರ್ಚ್ 28ರಂದು ಈ ಬಗ್ಗೆ ಗೆಜೆಟ್ ನಲ್ಲಿ ಭಾರತ ಸರ್ಕಾರ ಅಧಿಸೂಚನೆಯನ್ನೂ ಹೊರಡಿಸಿದೆ. ಹೀಗಾಗಿ ಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿರುವ ಸುಮಾರು 18 ಲಕ್ಷ ಮಹಿಳೆಯರಿಗೆ ಈ ತಿದ್ದುಪಡಿಯಿಂದ ಅನುಕೂಲವಾಗಲಿದೆ.

ಈ ತಿದ್ದುಪಡಿ ಕಾಯಿದೆಯ ಬಹು ಮುಖ್ಯ ಅಂಶ ಎಂದರೆ ಇನ್ನು ಮುಂದೆ ವೇತನ ಸಹಿತ ಹೆರಿಗೆ ರಜೆ 12ರಿಂದ 26 ವಾರಗಳಿಗೆ ಏರಿಕೆ ಆಗಲಿದೆ. 10ಕ್ಕಿಂತ ಹೆಚ್ಚು ನೌಕರರಿರುವ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಿಗೂ ಈ ಕಾಯಿದೆ ಅನ್ವಯವಾಗಲಿದೆ. ಆದರೆ ಮೊದಲ ಎರಡು ಮಕ್ಕಳಿಗಷ್ಟೇ ಈ ಸೌಲಭ್ಯ ನೀಡಲಾಗುತ್ತದೆ. ಎರಡು ಮಕ್ಕಳ ನಂತರದ ಮಕ್ಕಳಿಗೆ ಯಥಾಪ್ರಕಾರ 12 ವಾರಗಳ ವೇತನ ಸಹಿತ ರಜೆ ಮುಂದುವರಿಯಲಿದೆ.

ಹಾಗೆಯೇ, ಮೂರು ತಿಂಗಳಿಗಿಂತ ಕಡಿಮೆ ವಯಸ್ಸಿನ ಮಗುವನ್ನು ದತ್ತು ಪಡೆದುಕೊಳ್ಳುವ ತಾಯಂದಿರಿಗೂ 12 ವಾರಗಳ ಹೆರಿಗೆ ರಜೆ ಸೌಲಭ್ಯ ಲಭ್ಯವಿರುತ್ತದೆ. ಜೊತೆಗೆ ಬಾಡಿಗೆ ತಾಯಿಯನ್ನು ನಿಯೋಜಿಸಿ ತನ್ನದೇ ಮಗು ಪಡೆದುಕೊಳ್ಳುವ ಜೈವಿಕ ತಾಯಿಗೂ 12 ವಾರಗಳ ರಜೆ ಸಿಗಲಿದೆ. ಬಾಡಿಗೆ ತಾಯಿಯ ಗರ್ಭಕೋಶದಲ್ಲಿರಿಸುವಂತಹ ಭ್ರೂಣದ ಸೃಷ್ಟಿಗೆ ತನ್ನದೇ ಅಂಡಾಣು ಬಳಕೆ ಮಾಡುವವರನ್ನು ಜೈವಿಕ ತಾಯಿ' ಎಂದು ಈ ಕಾನೂನು ವಿವರಿಸುತ್ತದೆ. ಇಲ್ಲಿ, ಸಮಾಜದಲ್ಲಾಗುತ್ತಿರುವ ಬದಲಾವಣೆಗಳನ್ನು ಗಮನಕ್ಕೆ ತಂದುಕೊಂಡು ಅದಕ್ಕೆ ಕಾನೂನಿನ ಮೂಲಕ ಸ್ಪಂದಿಸಿರುವುದು ಮುಖ್ಯ.

50 ಅಥವಾ ಅದಕ್ಕಿಂತ ಹೆಚ್ಚಿನ ಸಿಬ್ಬಂದಿ ಇರುವ ಸಂಸ್ಥೆಗಳು ಶಿಶು ಪಾಲನಾ ಕೇಂದ್ರಗಳನ್ನು ತೆರೆಯುವುದನ್ನು ಕಡ್ಡಾಯಗೊಳಿಸುವ ವಿಚಾರವೂ ಈ ಕಾನೂನಿನಲ್ಲಿದೆ. ಜೊತೆಗೆ ಶಿಶುಪಾಲನಾ ಕೇಂದ್ರದಲ್ಲಿರುವ ಮಗುವನ್ನು ನೋಡಿ ಹಾಲುಣಿಸಿ ಬರಲು ಕಚೇರಿ ವೇಳೆಯಲ್ಲಿ ನಾಲ್ಕು ಬಾರಿ ಶಿಶು ಪಾಲನಾ ಕೇಂದ್ರಕ್ಕೆ ಹೋಗಿ ಬರಲು ತಾಯಿಗೆ ಅವಕಾಶವಿರುತ್ತದೆ. ಹಾಗೆಯೇ ಮನೆಯಿಂದ ಕೆಲಸ ಮಾಡುವಂತಹ ಅವಕಾಶಗಳು ಲಭ್ಯವಿದ್ದಲ್ಲಿ ಆ ಆಯ್ಕೆಯನ್ನು ಮಹಿಳೆಗೆ ನೀಡಬೇಕು ಎಂದೂ ಈ ಕಾನೂನು ಹೇಳುತ್ತದೆ.

ಸುದೀರ್ಘ ಹೆರಿಗೆ ರಜೆ ನೀಡುವುದು ಸಾಮಾಜಿಕವಾಗಿ ಅಗತ್ಯವಾದುದು. ತಾಯ್ತನ ಬರೀ ಹೆಣ್ಣಿಗಷ್ಟೇ ಸಂಬಂಧಿಸಿದ್ದಲ್ಲ. ಸಮಾಜವನ್ನು ಮುಂದುವರಿಸುವ ಈ ಪ್ರಕ್ರಿಯೆಯನ್ನು ಗೌರವಿಸಿ ಅಗತ್ಯ ಸೌಲಭ್ಯಗಳನ್ನು ನೀಡಬೇಕಾದ ಹೊಣೆಗಾರಿಕೆಯನ್ನು ಈ ಕಾಯ್ದೆ ಎತ್ತಿಹಿಡಿದಿದೆ ಎಂಬುದು ಸ್ವಾಗತಾರ್ಹವಾದ ಅಂಶ. ವಿಶ್ವ ಆರೋಗ್ಯ ಸಂಸ್ಥೆ ಸೇರಿದಂತೆ ಹಲವು ತಜ್ಞರ ಶಿಫಾರಸುಗಳ ಪ್ರಕಾರ,

* ಹಿರಿಯ ಪತ್ರಕರ್ತೆ.

ಶಿಶು ಜನನದ ನಂತರ 24 ವಾರಗಳವರೆಗೆ ಶಿಶುವಿಗೆ ತಾಯಿಯ ಹಾಲನ್ನೇ ನೀಡುವುದು ಮುಖ್ಯ. ಈ ಕಾರಣದಿಂದಲೂ ಹೆರಿಗೆ ರಜೆ ಸೌಲಭ್ಯ ವಿಸ್ತರಣೆ ಅಗತ್ಯ. ಈ ನಿಟ್ಟಿನಲ್ಲಿ 55 ವರ್ಷ ಹಳೆಯದಾದ ಕಾನೂನಿಗೆ ಬದಲಾವಣೆ ತಂದಿರುವುದು ಪ್ರಸ್ತುತವಾದದ್ದು. ಸರಿಯಾದ ದಿಕ್ಕಿನತ್ತ ಇರಿಸಿದ ಒಂದು ಸಣ್ಣ ಹೆಜ್ಜೆಯೂ ಇಲ್ಲಿ ಮುಖ್ಯವಾಗುತ್ತದೆ. ಇಂತಹ ಸಂದರ್ಭದಲ್ಲಿ ಈ ಕಾನೂನು, ದೊಡ್ಡ ಬದಲಾವಣೆಗೆ ಮುನ್ನುಡಿ ಬರೆಯುವಂತಹದ್ದು.

ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕಡಿಮೆಯಾಗುತ್ತಲೇ ಇರುವ ಪ್ರಸಕ್ತ ಸಂದರ್ಭದಲ್ಲಿ ಮಹಿಳೆಯರ ಸಬಲೀಕರಣದ ಪರವಾದ ಈ ಕಾನೂನು ಮತ್ತಷ್ಟು ಮಹತ್ವದ್ದಾಗುತ್ತದೆ. ಈಗಿರುವ ಅಂಕಿಅಂಶಗಳ ಪ್ರಕಾರ, ಉದ್ಯೋಗ ಕ್ಷೇತ್ರದಲ್ಲಿ ಗ್ರಾಮೀಣ ವಲಯದಲ್ಲಿ ಶೇ 24.8 ಹಾಗೂ ನಗರ ಪ್ರದೇಶಗಳಲ್ಲಿ ಶೇ 14.7ರಷ್ಟು ಮಾತ್ರ ಮಹಿಳೆಯರ ಪಾಲ್ಗೊಳ್ಳುವಿಕೆ ಇದೆ. ಆರ್ಥಿಕತೆಯಲ್ಲಿ ಬೆಳವಣಿಗೆ ಆಗುತ್ತಿದ್ದರೂ, ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಇಳಿಮುಖವಾಗುತ್ತಿದೆ. ಇದಕ್ಕೆ ಪಾರಂಪರಿಕ ಲಿಂಗತ್ವ ಪೂರ್ವಗ್ರಹಗಳು ಕಾರಣವಾಗುತ್ತಿವೆ ಎಂಬುದು ಮತ್ತಷ್ಟು ಕಳವಳಕಾರಿಯಾದ ಸಂಗತಿ. ಹೆಚ್ಚಿನ ಹೆರಿಗೆ ರಜೆ ಸೌಲಭ್ಯ ಇಲ್ಲದ ಕಾರಣ ಕೆಲಸ ಬಿಡುತ್ತಿದ್ದ ಮಹಿಳೆಯರು ಉದ್ಯೋಗದಲ್ಲಿ ಉಳಿದುಕೊಳ್ಳುವುದು ಇದರಿಂದ ಸಾಧ್ಯವಾಗಬಹುದು ಎಂಬಂತಹ ಆಶಾಭಾವನೆ ಇದೆ.

ಅದರಲ್ಲೂ 15ರಿಂದ 49 ವಯಸ್ಸಿನೊಳಗಿರುವ ಶೇ 5ಕ್ಕೂ ಕಡಿಮೆ ಮಹಿಳೆಯರು ಮಾತ್ರ ಸಂಘಟಿತ ವಲಯದಲ್ಲಿದ್ದಾರೆ . ಹೀಗಾಗಿ ವೇತನ ಸಹಿತ ಹೆರಿಗೆ ಸೌಲಭ್ಯ ಎಂಬುದು ದಕ್ಕುವುದು ತೀರಾ ಕಡಿಮೆ ಸಂಖ್ಯೆಯ ಮಹಿಳೆಯರಿಗೆ ಮಾತ್ರ ಎಂಬುದನ್ನೂ ಇಲ್ಲಿ ಗಮನಿಸಬೇಕು.

ಆದರೆ ಶೇ 90ರಷ್ಟು ಮಹಿಳೆಯರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಅವರನ್ನು ಈ ಕಾನೂನು ಒಳಗೊಳ್ಳುವುದಿಲ್ಲ. ಕೃಷಿ ಕಾರ್ಮಿಕರು, ಮನೆಗೆಲಸದವರು, ಕಟ್ಟಡ ಕಾರ್ಮಿಕರಂತಹವರು ಅಸಂಘಟಿತ ವಲಯಕ್ಕೆ ಸೇರುತ್ತಾರೆ. ಈಗಾಗಲೇ ಇವರೆಲ್ಲಾ ಅತ್ಯಂತ ಶೋಷಣಾತ್ಮಕ ಪರಿಸರಗಳಲ್ಲಿ



ಗೊಣಗದೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಾರ್ಮಿಕ ಕಾನೂನುಗಳೂ ಇವರನ್ನು ಗುರುತಿಸುವುದಿಲ್ಲ. ಹೀಗಾಗಿ ಈ ತಾರತಮ್ಯ ಎದ್ದು ಕಾಣಿಸುವಂತಹದ್ದು.

ಕಾಯಂ ಆಗಿರದ ಕಟ್ಟಡ ಕಾರ್ಮಿಕ ಮಹಿಳೆಯರೂ ಹೆರಿಗೆ ಸೌಲಭ್ಯ ಪಡೆಯಲು ಅರ್ಹರು ಎಂದು 2000ದಲ್ಲಿ ಸುಪ್ರೀಂ ಕೋರ್ಟ್ ಗುರುತಿಸಿತ್ತು. ಆದರೆ ಈ ತೀರ್ಪನ್ನು ಹೊಸ ತಿದ್ದುಪಡಿ ಕಾಯ್ದೆ ಒಳಗೊಂಡಿಲ್ಲ. ಅಸಂಘಟಿತ ವಲಯದಲ್ಲಿ ಕೆಲಸ ಮಾಡುವವರನ್ನೂ 1961ರ ಹೆರಿಗೆ ಸೌಲಭ್ಯ ಕಾಯಿದೆ ಒಳಗೊಳ್ಳಬೇಕು ಎಂದು 2015ರಲ್ಲಿ ಭಾರತ ಕಾನೂನು ಆಯೋಗ ಸಹ ಶಿಫಾರಸು ಮಾಡಿತ್ತು ಎಂಬುದನ್ನೂ ಸ್ಮರಿಸಬಹುದು. ಸದ್ಯಕ್ಕೆ ಇಂತಹ ಮಹಿಳೆಯರು ಇಂದಿರಾ ಗಾಂಧಿ ಮಾತೃತ್ವ ಸಹಯೋಗ ಯೋಜನೆ ಅಡಿ ಸೌಲಭ್ಯ ಪಡೆದುಕೊಳ್ಳಲು ಅವಕಾಶವಿದೆ. ಗರ್ಭಿಣಿ ಮಹಿಳೆ ಹೆರಿಗೆಗಾಗಿ ಆಸ್ಪತ್ರೆಗೆ ದಾಖಲಾದಲ್ಲಿ ಈ ಯೋಜನೆ ಅಡಿ ಆಕೆಗೆ ರೂ. 6000 ನಗದು ವರ್ಗಾವಣೆ ಮಾಡಲಾಗುತ್ತದೆ. ಆದರೆ ಈ ಯೋಜನೆ ಎರಡು ಮಕ್ಕಳಿಗೆ ಮಾತ್ರ ಸೀಮಿತವಾಗಿರುತ್ತದೆ. ಅಸಂಘಟಿತ ವಲಯದ ಮಹಿಳೆಯರಿಗೆ ಅಧಿಸೂಚಿತ ಸಿಗಬೇಕಾದ ಕನಿಷ್ಠ ವೇತನವೂ ಸಿಗುವುದಿಲ್ಲ.

ಹಣಕಾಸಿನ ಕಷ್ಟದಿಂದ ಹೆರಿಗೆಯಾದ ನಂತರ ಎಷ್ಟು ಬೇಗ ಸಾಧ್ಯವೊ ಅಷ್ಟು ಬೇಗ ಹೊರಗಿನ ದುಡಿಮೆಗೆ ವಾಪಸಾಗುತ್ತಾರೆ. ಇದರಿಂದ ಅವರ ಹಾಗೂ ಶಿಶುವಿನ ಆರೋಗ್ಯ ಅಪಾಯಕ್ಕೆ ಸಿಲುಕುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಹಿಳೆಯರ ಈ ದೊಡ್ಡ ಸಮುದಾಯದ ಕಾಳಜಿಗಳನ್ನು ನಿರ್ವಹಿಸಬೇಕು. ನೂರಾರು ಕೋಟಿ ವ್ಯವಹಾರವಾಗಿ ಬೆಳೆದು ನಿಂತಿರುವ ಬಾಡಿಗೆ ತಾಯಂದಿರನ್ನು ಈ ಕಾನೂನು ಹೊರಗಿಟ್ಟಿದೆ. ಇದೇ ಸಂದರ್ಭದಲ್ಲಿ ಬಾಡಿಗೆ ತಾಯಂದಿರ ಮಸೂದೆ, ಸಂಸತ್ತಿನ ಅನುಮೋದನೆಗೆ ಕಾದಿದೆ. ಈ ಹೊಸ ಮಸೂದೆ ವಾಣಿಜ್ಯ ಉದ್ದೇಶದ ಬಾಡಿಗೆ ತಾಯ್ತನವನ್ನು ನಿಯಂತ್ರಿಸುವುದರಿಂದ, ಬಾಡಿಗೆ ತಾಯ್ತನವನ್ನು ನಿಯೋಜಿಸುವುದೂ ಮುಂದೆ ಕಷ್ಟವಾಗಬಹುದು.

ಗರ್ಭಿಣಿ ಸ್ತ್ರೀ ಮತ್ತು ಮಗುವಿನ ಆರೋಗ್ಯಕ್ಕೆ ರಕ್ಷಣೆ ಒದಗಿಸುವ ಉದ್ದೇಶದಿಂದ 1961ರಲ್ಲಿ ಹೆರಿಗೆ ಸೌಲಭ್ಯ ಕಾಯಿದೆ( ಎಂಬಿಎ) ಯನ್ನು ಜಾರಿಗೊಳಿಸಲಾಯಿತು. ಮಹಿಳೆಯ ಉದ್ಯೋಗದಲ್ಲಿ ಒದಗಬಹುದಾದ ಅಡ್ಡಿ ನಿವಾರಣೆ ಇದರ ಉದ್ದೇಶವಾಗಿತ್ತು. ಆಯಾ ಸ್ತ್ರೀ – ಮಗುವಿನ ಹಿತರಕ್ಷಣೆಯಲ್ಲದೆ ರಾಷ್ಟ್ರೀಯ ಹಿತದ ಸೂತ್ರವೂ ಇದರಲ್ಲಿತ್ತು. ಶಿಶು ಮರಣ ಪ್ರಮಾಣ ಹೆಚ್ಚಿರುವ ರಾಷ್ಟ್ರದಲ್ಲಿ ತಾಯಿ –ಮಗು ಆರೋಗ್ಯ ರಕ್ಷಣೆ ಪ್ರಮುಖವಾದ ವಿಚಾರ ಎಂಬುದರಲ್ಲಿ ಎರಡು ಮಾತಿಲ್ಲ. ಜೊತೆಗೆ ಜನಸಂಖ್ಯಾ ಬೆಳವಣಿಗೆ ಪ್ರಮಾಣವನ್ನು ಶೀಘ್ರವಾಗಿ ತಗ್ಗಿಸಲು ಇರುವ ಮುಖ್ಯ ಅಡ್ಡಿಗಳಲ್ಲಿ ಶಿಶು ಮರಣ ಹೆಚ್ಚಳವೂ ಕಾರಣ ಎಂಬುದನ್ನೂ ಆಗ ಮುಖ್ಯವಾಗಿ ಪರಿಗಣನೆಗೆ ತಂದುಕೊಳ್ಳಲಾಗಿತ್ತು.

ಈಗಲೂ, ಇದು ಪೂರ್ಣ ಆರೋಗ್ಯವಂತ ಮಕ್ಕಳನ್ನು ಪಡೆಯಲು ಸಾವಿರಾರು ಮಹಿಳೆಯರಿಗೆ ನೆರವಾಗಲಿರುವ ಐತಿಹಾಸಿಕ ಕಾನೂನು' ಎಂದೇ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶ್ರೀಮತಿ ಮೇನಕಾ ಗಾಂಧಿ ವ್ಯಾಖ್ಯಾನಿಸಿದ್ದಾರೆ.

ಈ ವಿಚಾರದಲ್ಲಿ ತಮಿಳು ನಾಡು ಸರ್ಕಾರ ಕಳೆದ ವರ್ಷವೇ ಒಂದು ಹೆಜ್ಜೆ ಮುಂದೆ ಇಟ್ಟಿದೆ. ತಮಿಳುನಾಡಿನ ಸರ್ಕಾರಿ ಮಹಿಳಾ ನೌಕರರು 9 ತಿಂಗಳ (36 ವಾರಗಳು) ಹೆರಿಗೆ ರಜೆ ಪಡೆದುಕೊಳ್ಳಲು ಈಗಾಗಲೇ ಅವಕಾಶ ಕಲ್ಪಿಸಲಾಗಿದೆ. ಹೆರಿಗೆ ರಜೆ ಸೌಲಭ್ಯ 6ರಿಂದ 9 ತಿಂಗಳಿಗೆ ಹೆಚ್ಚಾಗುತ್ತದೆ ಎಂದು ವಿಧಾನಸಭೆಯಲ್ಲಿ 2016ರ ಸೆಪ್ಟೆಂಬರ್ 1ರಂದು ಆಗಿನ ಮುಖ್ಯಮಂತ್ರಿ ಜಯಲಲಿತಾ ಪ್ರಕಟಿಸಿದ್ದರು. ಈ ಮೂಲಕ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ತಾವು ನೀಡಿದ್ದ ಆಶ್ವಾಸನೆಯನ್ನು ಅವರು ಈಡೇರಿಸಿದ್ದರು. ತಮಿಳುನಾಡಿನಲ್ಲಿ 1980ರಲ್ಲಿ ಹೆರಿಗೆ ರಜೆಯನ್ನು 90 ದಿನಗಳಿಗೆ ವಿಸ್ತರಿಸಲಾಗಿತ್ತು. ನಂತರ 2011ರಲ್ಲಿ ಮುಖ್ಯಮಂತ್ರಿಯಾಗಿ ಜಯಲಲಿತಾ ಅಧಿಕಾರಕ್ಕೆ ಬಂದಾಗ ಹೆರಿಗೆ ರಜೆಯನ್ನು 180 ದಿನಗಳಿಗೆ ದ್ವಿಗುಣಗೊಳಿಸಲಾಗಿತ್ತು.

**(47ನೇ ಪುಟಕ್ಕೆ)**

# ಕರ್ನಾಟಕ ಬಜೆಟ್ 2017-18



ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಮಾರ್ಚ್ 15 ರಂದು ಮಂಡಿಸಿದ 2017-18 ನೇ ಸಾಲಿನ ಕರ್ನಾಟಕ ಮುಂಗಡ ಪತ್ರದ ಆಯ್ದ ಅವತರಣಿಕೆ.

**ಸನ್ಮಾನ್ಯ ಸಭಾಧ್ಯಕ್ಷರೇ,**

2017-18 ನೇ ಸಾಲಿನ ಆಯವ್ಯಯವನ್ನು ನಿಮ್ಮ ಮೂಲಕ ರಾಜ್ಯದ ಜನತೆಯ ಮುಂದೆ ಮಂಡಿಸುತ್ತಿದ್ದೇನೆ.

### ರಾಜ್ಯದ ಅರ್ಥವ್ಯವಸ್ಥೆ

ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನವು 2015-16 ರಲ್ಲಿದ್ದ ಶೇ 7.3 ಕ್ಕೆ ಪ್ರತಿಯಾಗಿ 2016-17 ರಲ್ಲಿ ಶೇ 6.9ರಷ್ಟು ಬೆಳವಣಿಗೆಯಾಗಿದೆ. ಕೃಷಿ ವಲಯವು ಶೇ.1.5ಷ್ಟು ಬೆಳವಣಿಗೆ ಹೊಂದುವ ನಿರೀಕ್ಷೆಯಿದೆ. ಕೈಗಾರಿಕಾ ಹಾಗೂ ಸೇವಾ ವಲಯಗಳಲ್ಲಿ ಬೆಳವಣಿಗೆ ಕುಂಠಿತಗೊಂಡಿರುವುದು 2016-17ರರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನ ಬೆಳವಣಿಗೆಯ ದರವು ಕಡಿಮೆಯಾಗುವುದಕ್ಕೆ ಕಾರಣ. ಕಳೆದ ಸಾಲಿನ ಶೇ.4.9ಕ್ಕೆ ಹೋಲಿಸಿದಲ್ಲಿ, ಈ ಸಾಲಿನಲ್ಲಿ ಕೈಗಾರಿಕಾ ವಲಯವು ಶೇ.2.2ರ ಬೆಳವಣಿಗೆಯನ್ನು ಹಾಗೂ ಕಳೆದ ಸಾಲಿನ ಶೇ. 10.4ರ ಎದುರಾಗಿ ಸೇವಾ ವಲಯವು ಶೇ.8.5ರಷ್ಟು ಬೆಳವಣಿಗೆ ದರ ದಾಖಲಿಸುವ ನಿರೀಕ್ಷೆ ಇದೆ.

### ರಾಜ್ಯದ ಹಣಕಾಸು ಪರಿಸ್ಥಿತಿ

ರಾಜ್ಯದ ಯೋಜನಾ ಗಾತ್ರವು 2016-17 ರಲ್ಲಿ 85,375 ಕೋಟಿ ರೂ.ಗಳಿಗೆ ನಿಗದಿಯಾಗಿತ್ತು. 75,665 ಕೋಟಿ ರೂ. ಗಳ ರಾಜ್ಯದ ಸಂಪನ್ಮೂಲ ಮತ್ತು 9,710 ಕೋಟಿ ರೂ.ಗಳ ರಾಜ್ಯ ಸಾರ್ವಜನಿಕ ಉದ್ಯಮಗಳ ಸಂಪನ್ಮೂಲಗಳ ಬೆಂಬಲವನ್ನು ಇದು ಒಳಗೊಂಡಿರುತ್ತದೆ. ಇದಕ್ಕೆ ಎದುರಾಗಿ 2016-17 ರ ಪರಿಷ್ಕೃತ ಅಂದಾಜುಗಳ ಪ್ರಕಾರ ಯೋಜನಾ ಗಾತ್ರವು 85,933 ಕೋಟಿ ರೂ.ಗಳೆಂದು ಅಂದಾಜಿಸಲಾಗಿದೆ. ಸಿ.ರಂಗರಾಜನ್ ಸಮಿತಿ ಮತ್ತು ಆಡಳಿತ ಸುಧಾರಣೆ ಆಯೋಗದ 14ನೇ ವರದಿಯು ಯೋಜನೆ ಮತ್ತು ಯೋಜನೇತರದ ನಡುವಿನ ಭಿನ್ನತೆಯನ್ನು ಹೋಗಲಾಡಿಸಬೇಕೆಂದು ಶಿಫಾರಸ್ಸು ಮಾಡಿದೆ. ಇದರಂತೆ, ಕೇಂದ್ರ ಸರ್ಕಾರವು 2017-18ನೇ ಸಾಲಿನ ಆಯವ್ಯಯದಿಂದ ಯೋಜನೆ ಮತ್ತು ಯೋಜನೇತರ ನಡುವಿನ ಭಿನ್ನತೆಯನ್ನು ತೆಗೆದುಹಾಕಿದೆ. ರಾಷ್ಟ್ರೀಯ ಉಪಕ್ರಮದಂತೆ 2017-18 ನೇ ಸಾಲಿನಿಂದ ಈ ಭೇದವನ್ನು ತೆಗೆಯಬೇಕೆಂದು ರಾಜ್ಯ ಸರ್ಕಾರವೂ ನಿರ್ಧರಿಸಿದೆ. ಈವರೆವಿಗೂ, ಯೋಜನಾ ಗಾತ್ರವನ್ನು ಎಸ್‌ಸಿಎಸ್‌ಪಿ/ಟಿಎಸ್‌ಪಿ ನಿಗದಿಪಡಿಸಲು ಮೂಲವೆಂದು ಪರಿಗಣಿಸಲಾಗುತ್ತಿತ್ತು. 2017-18ರಿಂದ ಯೋಜನೆ ಮತ್ತು ಯೋಜನೇತರದಲ್ಲಿನ ವಿಂಗಡಣೆಯು ಇಲ್ಲದೇ ಹೋಗುವುದರಿಂದ ಈ ಮೂಲವನ್ನು ಬದಲಾಯಿಸಬೇಕಾಗುತ್ತದೆ. ಸಂಚಿತ ನಿಧಿಯಿಂದ ವಿನಾಯಿತಿ ವೆಚ್ಚಗಳನ್ನು ಕಳೆದು ಸಿಗುವ ಹಂಚಿಕೆಗೊಳಿಸಬಹುದಾದ ಆಯವ್ಯಯವನ್ನು ಮೂಲವೆಂದು ಪರಿಗಣಿಸಲಾಗುವುದು. ವಿನಾಯಿತಿ ವೆಚ್ಚಗಳೆಂದರೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ನಿಗದಿಪಡಿಸಲು ಬಾರದ ವೆಚ್ಚಗಳಾದ ವೇತನ, ವೇತನಾನುದಾನ (ಜಿಐಎ), ಪಿಂಚಣಿ, ಆಡಳಿತಾತ್ಮಕ ವೆಚ್ಚ, ರಾಜ್ಯ ಸರ್ಕಾರದ ಸಾಲ ಮತ್ತು ಆಯವ್ಯಯೇತರ ಸಾಲಗಳ ಕಾರಣದಿಂದ ಉಂಟಾಗುವ ಅಸಲು ಮರುಪಾವತಿ ಮತ್ತು ಬಡ್ಡಿ ಪಾವತಿ ಮತ್ತು ಪ್ರಕಟಿಸಲಾಗುವ ಇತರೆ ಆಡಳಿತಾತ್ಮಕ ಸ್ವರೂಪದ ವೆಚ್ಚಗಳು. ಈ ಹಂಚಿಕೆಗೊಳಿಸಬಹುದಾದ ಆಯವ್ಯಯದ 24.1% ಅನ್ನು ಎಸ್‌ಸಿಎಸ್‌ಪಿ/ಟಿಎಸ್‌ಪಿ ಗಾಗಿ ನಿಗದಿಪಡಿಸಲಾಗುವುದು.

### ಕೃಷಿ

"ಕೃಷಿ ಭಾಗ್ಯ" ಯೋಜನೆಯು ರಾಜ್ಯದ ಸಂದಿಗ್ಧ ಪರಿಸ್ಥಿತಿಯಲ್ಲಿ ಬೆಳೆಗಳಿಗೆ ಸಂರಕ್ಷಣಾತ್ಮಕ ನೀರಾವರಿ ಒದಗಿಸುವ

* ಮೂಲ : ಕರ್ನಾಟಕ ಹಣಕಾಸು ಇಲಾಖೆ ವೆಬ್‌ಸೈಟ್.

**ಒಟ್ಟಾರೆ ಹಂಚಿಕೆ (ಒಟ್ಟು ಅಭಿಯಾಚನೆ + ಐ.ಇ.ಬಿ.ಆರ್) 2017–18 (ರೂ. ಕೋಟಿಗಳಲ್ಲಿ) (ಒಟ್ಟಾರೆ ಹಂಚಿಕೆಯ ಶೇಕಡವಾರು)**




ಮೂಲಕ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಮತ್ತು ಹೆಚ್ಚು ಆದಾಯ ಪಡೆಯುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಈ ಯೋಜನೆಯ ಯಶಸ್ಸನ್ನು ಗಮನಿಸಿ 2017–18ನೇ ಸಾಲಿನಲ್ಲಿ ಈ ಯೋಜನೆಯನ್ನು ಕರಾವಳಿ ಮತ್ತು ಮಲೆನಾಡು ಪ್ರದೇಶಗಳ (ಅಚ್ಚುಕಟ್ಟು ಪ್ರದೇಶಗಳನ್ನು ಹೊರತುಪಡಿಸಿ) ಎಲ್ಲ ತಾಲ್ಲೂಕುಗಳಿಗೆ ವಿಸ್ತರಿಸಲಾಗುವುದು. ಇದಕ್ಕಾಗಿ 600 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು. ಕಳೆದ ಐದು ವರ್ಷಗಳಿಂದ ರಾಜ್ಯವು ನಿರಂತರವಾಗಿ ಬರ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಈ ಸಂದರ್ಭದಲ್ಲಿ "ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ" ಯು ಬರ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಲು ರೈತರಿಗೆ ವರದಾನವಾಗಿದೆ. ಈ ಸಾಲಿನಲ್ಲಿ ಕೇಂದ್ರದ ನೆರವಿನ ಜೊತೆಗೆ ರಾಜ್ಯ ಸರ್ಕಾರದ ಸಂಪನ್ಮೂಲಗಳಿಂದ 845 ಕೋಟಿ ರೂ.ಗಳನ್ನು ಒದಗಿಸಲಾಗಿದ್ದು ಒಟ್ಟಾರೆ 31.5 ಲಕ್ಷ ಹೆಕ್ಟೇರ್ ಪ್ರದೇಶ ಸೇರ್ಪಡೆಗೊಳಿಸಲಾಗುವುದು. ನೀರಿನ ವಿವೇಕಯುತ ಮತ್ತು ದಕ್ಷ ಬಳಕೆಗೆ ಒತ್ತು ನೀಡುವ ದೃಷ್ಟಿಯಿಂದ ಒಟ್ಟಾರೆ 1.8 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 2 ಹೆಕ್ಟೇರ್ ಪ್ರದೇಶದವರೆಗೆ ಶೇ.90 ರಷ್ಟು ಮತ್ತು 5 ಹೆಕ್ಟೇರ್ ಪ್ರದೇಶದವರೆಗೂ ಶೇ.50 ರಷ್ಟು ಸಹಾಯಧನದಲ್ಲಿ ಹನಿ ಮತ್ತು ತುಂತುರು ನೀರಾವರಿ ಘಟಕಗಳನ್ನು ವಿತರಿಸಲಾಗುವುದು. ಇದಕ್ಕಾಗಿ 375 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

"ಕೃಷಿ ಯಂತ್ರಧಾರೆ ಕಾರ್ಯಕ್ರಮ" ದಿಂದ ಹೆಚ್ಚಿನ ಸಂಖ್ಯೆಯ ರೈತರಿಗೆ ಪ್ರಯೋಜನ ಆಗಿರುವುದರಿಂದ ಈ ಕಾರ್ಯಕ್ರಮವನ್ನು ಉಳಿದ ಹೋಬಳಿಗಳಿಗೂ ವಿಸ್ತರಿಸಲಾಗುವುದು. ಹೋಬಳಿಗಳಲ್ಲಿ 250 ಹೆಚ್ಚು ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ 122 ಕೋಟಿ ರೂ.ಗಳನ್ನು ಮೀಸಲಿರಿಸಿದೆ.

ಉದ್ಯೋಗ ಅವಕಾಶಗಳನ್ನು ಒದಗಿಸುವುದರ ಮೂಲಕ, ಗ್ರಾಮೀಣ ಯುವಕರನ್ನು ಕೃಷಿಯ ಕಡೆಗೆ ಆಕರ್ಷಿಸಲು ಮತ್ತು ಸ್ಥಳೀಯವಾಗಿ ಸಣ್ಣ ಕೃಷಿ ಉಪಕರಣಗಳ ತಯಾರಿಕೆ ಸೌಲಭ್ಯದೊಂದಿಗೆ ಕೃಷಿಯಂತ್ರಗಳ ಬಳಕೆಯನ್ನು ಪ್ರೋತ್ಸಾಹಿಸಲು, ಪ್ರತಿ ತಾಲ್ಲೂಕು ಕೇಂದ್ರದಲ್ಲಿ ಒಂದರಂತೆ 174 "ಗ್ರಾಮೀಣ ಕೃಷಿ ಯಂತ್ರೋಪಕರಣ/ ಸೇವಾ ಕೇಂದ್ರಗಳನ್ನು" ಸ್ಥಾಪಿಸಲು ಉದ್ದೇಶಿಸಿದೆ. ಈ ಕೇಂದ್ರಗಳ ಸ್ಥಾಪನೆಗೆ 10 ಕೋಟಿ ರೂ.ಗಳ ಅನುದಾನ ಒದಗಿಸಿ ಪ್ರತಿ ಕೇಂದ್ರದ ಸ್ಥಾಪನೆಗೆ ಬ್ಯಾಂಕ್ ಲಿಂಕೇಜ್‌ನೊಂದಿಗೆ 5 ಲಕ್ಷ ರೂ.ಗಳ



ಸಹಾಯಧನ ಅಥವಾ ಗರಿಷ್ಠ ಶೇ.50 ರಷ್ಟು ಮೊತ್ತವನ್ನು ಒದಗಿಸಲಾಗುವುದು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಗರಿಷ್ಠ ಶೇ.75 ರಷ್ಟು ನೀಡಲಾಗುವುದು.

2017–18ನೇ ಸಾಲಿನಲ್ಲಿ ಕೃಷಿ ಇಲಾಖೆಗೆ ಒಟ್ಟಾರೆಯಾಗಿ 5,080 ಕೋಟಿ ರೂ. ಒದಗಿಸಲಾಗಿದೆ.

### ತೋಟಗಾರಿಕೆ

ತೋಟಗಾರಿಕೆ ಇಲಾಖೆಯಡಿಯಲ್ಲಿ ಮೊಟ್ಟ ಮೊದಲ ಬಾರಿಗೆ "ಕೃಷಿ ಭಾಗ್ಯ" ಯೋಜನೆಯನ್ನು ಅನುಷ್ಠಾನಗೊಳಿಸಲು 200 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

233 ಕೋಟಿ ರೂ. ವೆಚ್ಚದಲ್ಲಿ ಶೇ. 90 ರಷ್ಟು ಸಹಾಯ ಧನದೊಂದಿಗೆ 35,000 ರೈತರಿಗೆ ಹನಿ ನೀರಾವರಿ ವ್ಯವಸ್ಥೆ ಕಲ್ಪಿಸಲಾಗುವುದು. 2017–18ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಗೆ ಒಟ್ಟಾರೆಯಾಗಿ 1,091 ಕೋಟಿ ರೂ. ಒದಗಿಸಲಾಗಿದೆ.

### ಪಶುಸಂಗೋಪನೆ

ರಾಜ್ಯದ ಎಲ್ಲಾ ಹಳ್ಳಿಗಳಿಗೆ ಪರಿಣಿತ ಹಾಗೂ ಸುಧಾರಿತ ಪಶು ವೈದ್ಯಕೀಯ ಸೇವೆಗಳನ್ನು ವಿಸ್ತರಿಸುವ ಗುರಿಯೊಂದಿಗೆ, ಹಂತ ಹಂತವಾಗಿ 1,512 ಪ್ರಾಥಮಿಕ ಪಶು ವೈದ್ಯಕೀಯ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದ್ದು, ಈ ಸಾಲಿನಲ್ಲಿ ಇಂತಹ 302 ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗುವುದು. ಇದರಿಂದಾಗಿ ಮುಂಬರುವ ವರ್ಷಗಳಲ್ಲಿ ಪದವೀಧರ ಪಶುವೈದ್ಯರೇ ಇರುವ ಪಶುವೈದ್ಯ ಸಂಸ್ಥೆಗಳನ್ನು ಹೊಂದುವ ರಾಜ್ಯವಾಗುವ ನಿಟ್ಟಿನಲ್ಲಿ ರಾಷ್ಟ್ರದಲ್ಲೇ ಪ್ರಥಮ ಹೆಜ್ಜೆ ಇರಿಸಿದೆ ಎಂದು ಹೇಳಲು ನನಗೆ ಹೆಮ್ಮೆ ಅನಿಸುತ್ತಿದೆ. 2017–18ನೇ ಸಾಲಿನಲ್ಲಿ ಪಶುಸಂಗೋಪನೆ ಇಲಾಖೆಗೆ ಒಟ್ಟಾರೆಯಾಗಿ 2,245 ಕೋಟಿ ರೂ. ಒದಗಿಸಲಾಗಿದೆ.

### ರೇಷ್ಮೆ

ಬೀಜ ಉತ್ಪಾದನೆ ಮತ್ತು ಚಾಕಿ ಸಾಕಣೆಯಲ್ಲಿ ಗುಣಮಟ್ಟ ನಿಯಂತ್ರಣವನ್ನು ಖಾತರಿಪಡಿಸಿಕೊಳ್ಳುವ ಸಲುವಾಗಿ ಹಾಗೂ ರೇಷ್ಮೆ ಉದ್ಯಮದ ಸಮಗ್ರ ಸಶಕ್ತ

ಅಭಿವೃದ್ಧಿಗಾಗಿ ರೇಷ್ಮೆ ಹುಳು ಮೊಟ್ಟೆ / ಚಾಕಿ ಗುಣಮಟ್ಟ ನಿಯಂತ್ರಣ ಪ್ರಾಧಿಕಾರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

2017-18ನೇ ಸಾಲಿನಲ್ಲಿ ರೇಷ್ಮೆ ಇಲಾಖೆಗೆ ಒಟ್ಟಾರೆಯಾಗಿ 429 ಕೋಟಿ ರೂ. ಒದಗಿಸಲಾಗಿದೆ.

**ಮೀನುಗಾರಿಕೆ**

ಮಲ್ಪೆ ಮತ್ತು ಮಂಗಳೂರು ಮೀನುಗಾರಿಕೆ ಬಂದರುಗಳ ದೋಣಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದರಿಂದ ಅವುಗಳ ದಟ್ಟಣೆಯನ್ನು ನಿರ್ವಹಿಸಲು ಅಂದಾಜು 5 ಕೋಟಿ ರೂ.ಗಳ ವೆಚ್ಚದಲ್ಲಿ ದೋಣಿಗಳ ಸುರಕ್ಷಿತ ಇಳಿದಾಣಕ್ಕಾಗಿ 75 ಮೀ. ಉದ್ದದವರೆಗೆ ಜಟ್ಟಿ ವಿಸ್ತರಣೆಯನ್ನು ಕೈಗೊಳ್ಳಲಾಗುವುದು.

2017-18ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಗೆ ಒಟ್ಟಾರೆಯಾಗಿ 337 ಕೋಟಿ ರೂ. ಒದಗಿಸಲಾಗಿದೆ.

**ಸಹಕಾರ ಹೊಸ ಯೋಜನೆಗಳು**

ಶೂನ್ಯ ಬಡ್ಡಿ ದರದಲ್ಲಿ 3 ಲಕ್ಷ ರೂ.ಗಳವರೆಗಿನ ಅಲ್ಪಾವಧಿ ಕೃಷಿಸಾಲ ಮತ್ತು ಶೇ.3ರ ಬಡ್ಡಿದರದಲ್ಲಿ 10 ಲಕ್ಷ ರೂ.ಗಳವರೆಗಿನಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ನೀಡಿಕೆ ಯೋಜನೆಯನ್ನು ಮುಂದುವರಿಸಲಾಗುವುದು.

ಈ ಸಾಲಿನಲ್ಲಿ 25ಲಕ್ಷ ರೈತರಿಗೆ 13,500 ಕೋಟಿ ರೂ.ಗಳ ಕೃಷಿ ಸಾಲಗಳನ್ನುವಿತರಿಸುವ ಗುರಿಯನ್ನು ಹೊಂದಲಾಗಿದೆ. ಆರ್ಥಿಕವಾಗಿ ಕಾರ್ಯಸಾಧುವೆನಿಸುವ ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದ ಮಹಿಳಾ ಸ್ವಸಹಾಯ ಗುಂಪುಗಳಿಗೆ ಸಹಕಾರ ಸಂಘಗಳ ಮೂಲಕ ಶೇ.4ರ ಬಡ್ಡಿ ದರ ವಿತರಿಸಲಾಗುತ್ತಿರುವ ಸಾಲವನ್ನು ಈ ಸಾಲಿನಿಂದ ಶೂನ್ಯ ಬಡ್ಡಿದರದಲ್ಲಿ ವಿತರಿಸಲಾಗುವುದು.

2017-18ನೇ ಸಾಲಿನಲ್ಲಿ ಸಹಕಾರ ಇಲಾಖೆಗೆ ಒಟ್ಟಾರೆಯಾಗಿ 1,663 ಕೋಟಿ ರೂ. ಒದಗಿಸಲಾಗಿದೆ.

**ರಾಜ್ಯ ಸ್ವಂತ ತೆರಿಗೆಗಳ ವಿವರಗಳು 2017-18 ಆಯವ್ಯಯ ಅಂದಾಜುಗಳು**

ರೂ. ಕೋಟಿಗಳಲ್ಲಿ




**ಜಲಸಂಪನ್ಮೂಲ**

2017-18ನೇ ಸಾಲಿನಲ್ಲಿ 6,000 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಏತ, ಕೆರೆ ತುಂಬಿಸುವ ಕಾಲುವೆ ನವೀಕರಣ ಮೊದಲಾದ ಅನುಮೋದಿತ ಯೋಜನೆಗಳನ್ನು ಕೈಗೊಳ್ಳಲಾಗುವುದು. 2017-18ನೇ ಸಾಲಿನಲ್ಲಿ 68,264 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ 35,000 ಹೆಕ್ಟೇರ್ ಪ್ರದೇಶಕ್ಕೆ ಹೊಲಗಾಲುವೆ ನಿರ್ಮಾಣ, 28,000 ಹೆಕ್ಟೇರ್ ಪ್ರದೇಶಕ್ಕೆ ಬಸಿಗಾಲುವೆ ನಿರ್ಮಾಣ ಮತ್ತು 12,500 ಹೆಕ್ಟೇರ್ ಪ್ರದೇಶದ ಸವಳು-ಜವಳು ಭೂಮಿ ಅಭಿವೃದ್ಧಿ ಗುರಿ ಹೊಂದಲಾಗಿದೆ. 2017-18ನೇ ಸಾಲಿನಲ್ಲಿ 21 ಕಾಮಗಾರಿಗಳನ್ನು ಅಂದಾಜು ಮೊತ್ತ 3000 ಕೋಟಿ ರೂ.ಗಳಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ತೀವ್ರ ಬರಗಾಲವನ್ನು ಎದುರಿಸುತ್ತಿರುವ ಪ್ರದೇಶಗಳಲ್ಲಿ ಮೋಡ ಬಿತ್ತನೆ ಕಾರ್ಯವನ್ನು ಕೈಗೊಳ್ಳಲಾಗುವುದು. ಈ ಉದ್ದೇಶಕ್ಕಾಗಿ 30 ಕೋಟಿ ರೂ.ಗಳನ್ನು ಒದಗಿಸಲಾಗುವುದು.



2017-18ನೇ ಸಾಲಿನಲ್ಲಿ ಜಲಸಂಪನ್ಮೂಲ ಇಲಾಖೆಗೆ ಒಟ್ಟಾರೆಯಾಗಿ 15,929 ಕೋಟಿ ರೂ. ಒದಗಿಸಲಾಗಿದೆ.

**ಸಣ್ಣ ನೀರಾವರಿ**

ರಾಜ್ಯದಲ್ಲಿ ಸತತವಾಗಿ ಮರುಕಳಿಸುತ್ತಿರುವ ಬರಗಾಲ ಪರಿಸ್ಥಿತಿಯನ್ನು ಪರಿಹರಿಸಲು ಕೆರೆ ಸಂಜೀವಿನಿ ಯೋಜನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಕೈಗೊಳ್ಳುವ ಉದ್ದೇಶದೊಂದಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಇರುವ ಕೆರೆಗಳನ್ನು ಸಹ ಸಣ್ಣ ನೀರಾವರಿ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿ ತಂದು ಕೆರೆ ಅಭಿವೃದ್ಧಿ ಪ್ರಾಧಿಕಾರದ ಮೂಲಕ "ಕೆರೆ ಸಂಜೀವಿನಿ" ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಪ್ರಾಧಿಕಾರ ಕೈಗೊಳ್ಳುವ ಕಾಮಗಾರಿಗಳಿಗೆ 100 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಕರಾವಳಿ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವ ನದಿಗಳ ಹರಿವನ್ನು ಸಂರಕ್ಷಿಸಲು ಮತ್ತು ಸಂಗ್ರಹಿಸಲು "ಪಶ್ಚಿಮ ವಾಹಿನಿ" ಯೋಜನೆಯಡಿ ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸಲಾಗುವುದು. ಇದಕ್ಕಾಗಿ ಈ ಸಾಲಿನಲ್ಲಿ 100 ಕೋಟಿ ರೂ.ಗಳನ್ನು ಒದಗಿಸಲಾಗುವುದು.

2017-18ನೇ ಸಾಲಿನಲ್ಲಿ ನೀರಾವರಿ ಇಲಾಖೆಗೆ ಒಟ್ಟಾರೆಯಾಗಿ 2,099 ಕೋಟಿ ರೂ. ಒದಗಿಸಲಾಗಿದೆ.




### ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ

ವೃಕ್ಷ ಬೆಳೆಸುವ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡಲಾಗುವುದು. * ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ, 4,720 ಕಿ.ಮೀ. ರಸ್ತೆಯಲ್ಲಿ ಮತ್ತು ವಿವಿಧ ಯೋಜನೆಗಳ ಅಡಿಯಲ್ಲಿ, ಈ ರಸ್ತೆ ಅಂದಾಜು ವೆಚ್ಚದ ಶೇ.1 ರಷ್ಟು ಅನುದಾನದಲ್ಲಿ ರಸ್ತೆ ಬದಿ ನೆಡುತೋಪುಗಳನ್ನು ಬೆಳೆಸಲಾಗುವುದು.

ಎಲ್ಲಾ ನರ್ಸರಿಗಳನ್ನು ವೈಜ್ಞಾನಿಕವಾಗಿ ಅಭಿವೃದ್ಧಿ ಪಡಿಸಲು "ನರ್ಸರಿ ಅಭಿವೃದ್ಧಿ ಏಜೆನ್ಸಿ" ಯನ್ನು ರಚಿಸಲು ಉದ್ದೇಶಿಸಲಾಗಿದೆ.

ನೀರಿನ ಕೊರತೆಯ ಕಾರಣದಿಂದ ಜನವಸತಿ ಪ್ರದೇಶಗಳಿಗೆ ವನ್ಯಮೃಗಗಳು ಹೋಗುವ ವಲಸೆಯನ್ನು ತಡೆಗಟ್ಟಲು, 10 ಕೋಟಿ ರೂ.ಗಳ ವೆಚ್ಚದಲ್ಲಿ ಸ್ವಯಂಚಾಲಿತ ಸೋಲಾರ್ ವಿದ್ಯುತ್ ಪಂಪ್‌ಗಳಸಹಾಯದೊಂದಿಗೆ ದಟ್ಟ ಅರಣ್ಯದಲ್ಲಿ ಇರುವ 100 ಜಲಕಾಯಗಳನ್ನು ತುಂಬಲು ಉದ್ದೇಶಿಸಿದೆ.

2017–18ನೇ ಸಾಲಿನಲ್ಲಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ಒಟ್ಟಾರೆಯಾಗಿ 1,732 ಕೋಟಿ ರೂ. ಒದಗಿಸಲಾಗಿದೆ.

### ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಗುಣಮಟ್ಟವನ್ನು ಉತ್ತಮಪಡಿಸಲು ಈ ಮುಂದಿನ ಉಪಕ್ರಮಗಳನ್ನು ಕೈಗೊಳ್ಳಲಾಗುವುದು.

* ಅಭ್ಯಾಸ ಮತ್ತು ಚಟುವಟಿಕೆ ಪುಸ್ತಕಗಳ ಬಳಕೆ; * 1 ರಿಂದ 8ನೇ ತರಗತಿಗಳವರೆಗೆ ವಸ್ತುನಿಷ್ಠ ಕಲಿಕಾ ಮೌಲ್ಯಮಾಪನ * ವಿಶ್ವಾಸ ಕಿರಣ – ಬೇಸಿಗೆ ಮತ್ತು ಇತರ ರಜಾ ಅವಧಿಗಳಲ್ಲಿ ಪೂರಕ ಬೋಧನೆ * 1 ರಿಂದ 10ನೇ ತರಗತಿಗಳವರೆಗೆ ಪರಿಷ್ಕೃತ ಪಠ್ಯಪುಸ್ತಕಗಳು ಮತ್ತು 9 ರಿಂದ 12 ತರಗತಿಗಳವರೆಗೆ ಆಯ್ದ ವಿಷಯಗಳಿಗೆ ಎನ್‌ಸಿಇಆರ್‌ಟಿ ಪಠ್ಯ ಪುಸ್ತಕಗಳ ಅಳವಡಿಕೆ. * 1ನೇ ತರಗತಿಯಿಂದ ಆಂಗ್ಲ ಭಾಷೆಯ ಪರಿಣಾಮಕಾರಿ ಬೋಧನೆ: * ಗ್ರಾಮ ಪಂಚಾಯಿತಿ ಕೇಂದ್ರಸ್ಥಾನದಲ್ಲಿ 12ನೇ ತರಗತಿವರೆಗೆ 176 ಸಂಯೋಜಿತ ಶಾಲೆಗಳು.



* ಹೆಚ್ಚುವರಿ 1000 ಪ್ರೌಢಶಾಲೆಗಳು ಮತ್ತು ಪಿ.ಯು. ಕಾಲೇಜುಗಳಲ್ಲಿ ಐಟಿ@ಸ್ಕೂಲ್. * ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳ ಸಮಗ್ರ ಸುಧಾರಣೆ.

ವಿದ್ಯಾರ್ಥಿಗಳ ಪ್ರೇರಣೆಗಾಗಿ ಈ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

* ಶೂ ಮತ್ತು ಸಾಕ್ಸ್ ವಿತರಣೆ * ಜುಲೈ ತಿಂಗಳಿನಿಂದ ಜಾರಿಗೆ ಬರುವಂತೆ ವಾರದಲ್ಲಿ 5 ದಿನ ಹಾಲು ವಿತರಣೆ * ಮಧ್ಯಾಹ್ನ ಬಿಸಿಯೂಟ ಕಾರ್ಯಕ್ರಮದಡಿ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ 4 ಲಕ್ಷ ಮಕ್ಕಳಿಗೆ ಸಾರವರ್ಧಕ ಅಕ್ಕಿ ಉಪಯೋಗ 4 ಜಿಲ್ಲೆಗಳಿಗೆ ವಿಸ್ತರಣ * 8 ರಿಂದ 10ನೇ ತರಗತಿಯ ಹೆಣ್ಣು ಮಕ್ಕಳಿಗೆ ಚೂಡಿದಾರ್ ಸಮವಸ್ತ್ರ. ಪ್ರಾಥಮಿಕ ಶಾಲೆಗಳಿಗೆ 10,000 ತರಬೇತಿ ಪಡೆದ ಪದವೀಧರ ಶಿಕ್ಷಕರು, 1,626 ಪ್ರೌಢ ಶಾಲಾ ಶಿಕ್ಷಕರು ಮತ್ತು 1,191 ಪಿ.ಯು. ಉಪನ್ಯಾಸಕರನ್ನು ಎರಡು ಹಂತಗಳಲ್ಲಿ ನೇಮಕಾತಿ ಮಾಡಲಾಗುವುದು.

ಶಾಲಾ ನಿರ್ವಹಣೆ ಮತ್ತು ಶಿಕ್ಷಣ ವಲಯದ ಆಡಳಿತ ಸುಧಾರಣೆಗಾಗಿ, 'ಶಿಕ್ಷಣ ಕಿರಣ'ದಡಿ ಶಿಕ್ಷಕರ ಬಯೋಮೆಟ್ರಿಕ್ ಹಾಜರಾತಿಯೂ ಸೇರಿದಂತೆ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳಲಾಗುವುದು.

2017–18ನೇ ಸಾಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಒಟ್ಟಾರೆಯಾಗಿ 18,266 ಕೋಟಿ ರೂ. ಒದಗಿಸಲಾಗಿದೆ.

### ಉನ್ನತ ಶಿಕ್ಷಣ

ಹೈದರಾಬಾದ್ – ಕರ್ನಾಟಕದ ಪ್ರದೇಶದಲ್ಲಿ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನ ನೀಡುವ ಉದ್ದೇಶದಿಂದ ರಾಯಚೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗುವುದು. ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಎಲ್ಲಾ ಕಾಲೇಜುಗಳನ್ನು ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ತರಲಾಗುವುದು.

ಗ್ರಾಮೀಣ, ಹಿಂದುಳಿದ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣ ಪಡೆಯುವುದಕ್ಕೆ ಉತ್ತೇಜನ ನೀಡಲು ರಾಜ್ಯಾದ್ಯಂತ ಗ್ರಾಮೀಣ ಪ್ರದೇಶದಲ್ಲಿ ತಲಾ 4 ಕೋಟಿ ರೂ.ಗಳ ವೆಚ್ಚದಲ್ಲಿ 25

ಹೊಸ ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲಾಗುವುದು. ವಿದ್ಯಾರ್ಥಿನಿಯರ ಒಟ್ಟು ದಾಖಲಾತಿ ಪ್ರಮಾಣವನ್ನು ಹೆಚ್ಚಿಸಲು ತಲಾ 2 ಕೋಟಿ ರೂ.ಗಳ ವೆಚ್ಚದಲ್ಲಿ ಹಂತ ಹಂತವಾಗಿ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ 23 ಮಹಿಳಾ ಹಾಸ್ಟೆಲ್‌ಗಳನ್ನು ನಿರ್ಮಾಣ ಮಾಡಲಾಗುವುದು. ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಹಾಸ್ಟೆಲ್‌ಗಳೊಂದಿಗೆ 10 ಮಾದರಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜುಗಳನ್ನು ಸ್ಥಾಪಿಸಲಾಗುವುದು. ದೇಶದಲ್ಲಿಯೇ ಪ್ರಪ್ರಥಮವಾಗಿ ಸಾಮಾಜಿಕ ನ್ಯಾಯ ದೊರಕಿಸುವ ಹಿನ್ನೆಲೆಯಲ್ಲಿ ಮೀಸಲಾತಿ ಜಾರಿಗೆ ತಂದಂತಹ ಕ್ರಾಂತಿಕಾರಿ ಸಾಹುಮಹಾರಾಜ್‌ರವರ ಹೆಸರಿನಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡದಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸಲಾಗುವುದು.

2017–18ನೇ ಸಾಲಿನಲ್ಲಿ ಉನ್ನತ ಶಿಕ್ಷಣ ಇಲಾಖೆಗೆ ಒಟ್ಟಾರೆಯಾಗಿ 4,401 ಕೋಟಿ ರೂ. ಒದಗಿಸಲಾಗಿದೆ.




## ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ಶಿಶು ಮರಣ ಹಾಗೂ ತಾಯಂದಿರ ಮರಣ ಪ್ರಮಾಣವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಪ್ರತಿ ಆಶಾ ಕಾರ್ಯಕರ್ತರು ಈಗಾಗಲೇ ಪಡೆಯುತ್ತಿರುವ ಪ್ರೋತ್ಸಾಹಧನದ ಜೊತೆ 1000 ರೂ.ಗಳ ಗೌರವಧನವನ್ನು ನೀಡಲಾಗುವುದು.

ರಾಜ್ಯ ಸರ್ಕಾರದ ವಿವಿಧ ಆರೋಗ್ಯ ವಿಮಾ ಕಾರ್ಯಕ್ರಮಗಳಲ್ಲಿ ಹೊಂದಾಣಿಕೆ ತರಲು ಹಾಗೂ ಎಲ್ಲಾ ಕುಟುಂಬಗಳನ್ನು ಸಾರ್ವತ್ರಿಕ ಆರೋಗ್ಯ ವ್ಯಾಪ್ತಿಯ ಅಡಿಯಲ್ಲಿ ತರಲು ಉದ್ದೇಶಿಸಲಾಗಿದೆ.

ಪ್ರಸ್ತುತ ಜಾರಿಯಲ್ಲಿರುವ ಯಶಸ್ವಿನಿ ಆರೋಗ್ಯ ಸುರಕ್ಷಾ ಯೋಜನೆಯು ಜಾರಿಯಲ್ಲಿರುವ ನಿಯಮಾವಳಿಗಳಂತೆಯೇ ಮುಂದುವರಿಯುತ್ತದೆ. ಆದರೆ, ಈ ಯೋಜನೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಡಳಿತ ನಿಯಂತ್ರಣಕ್ಕೆ ತರಲಾಗುವುದು.

ಕ್ಯಾನ್ಸರ್, ಹೃದಯ ರೋಗಗಳು ಹಾಗೂ ಇತರೆ ಜೀವನಕ್ರಮವನ್ನು ಆಧರಿಸಿದ ರೋಗಗಳಿಗೆ ಚಿಕಿತ್ಸೆಯನ್ನು ನೀಡುವ ದೃಷ್ಟಿಯಿಂದ, ರಾಜ್ಯದ ದಾವಣಗೆರೆ, ರಾಮನಗರ, ತುಮಕೂರು, ವಿಜಯಪುರ ಮತ್ತು ಕೋಲಾರದಲ್ಲಿ ತಲಾ 25 ಕೋಟಿ ರೂ.ಗಳ ವೆಚ್ಚದಲ್ಲಿ 5 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸಲಾಗುವುದು.

ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯನ್ನು 10 ಕೋಟಿ ರೂ.ಗಳವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಗುವುದು. ಮಂಗಳೂರು ಮತ್ತು ಸುತ್ತಮುತ್ತಲಿನ ಮಕ್ಕಳಿಗೆ ಹೆಚ್ಚುವರಿ ಆರೋಗ್ಯ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ 3 ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯ ಮಾದರಿಯಲ್ಲಿ ಪ್ರಾದೇಶಿಕ ಹಾಗೂ ಉನ್ನತ ಮಕ್ಕಳ ಆರೋಗ್ಯ ಸಂಸ್ಥೆಯನ್ನು ಸ್ಥಾಪಿಸಲಾಗುವುದು. ಸಂಜಯ್ ಗಾಂಧಿ ಅಪಘಾತ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ 14.32 ಕೋಟಿ ರೂಗಳ ವೆಚ್ಚದಲ್ಲಿ ಬೆನ್ನು ಹುರಿ, ಗಾಯ ಹಾಗೂ ಆಘಾತ ಚಿಕಿತ್ಸೆ ಒದಗಿಸಲು 10 ಹಾಸಿಗೆ ಸಾಮರ್ಥ್ಯದ ವೆಂಟಿಲೇಟರ್ ಸೌಲಭ್ಯವಿರುವ ಐಸಿಯು ಮತ್ತು 20 ಹಾಸಿಗೆಯ ಪಾಲಿಟ್ರಾಮಾ ಕೇಂದ್ರವನ್ನು ಸ್ಥಾಪಿಸಲಾಗುವುದು.



ಪ್ರಾಥಮಿಕ ಆರೋಗ್ಯ ಕೇಂದ್ರದಿಂದ 10 ಕಿ.ಮೀ.ಗಳಿಗಿಂತಲೂ ಹೆಚ್ಚು ದೂರವಿರುವ ಗ್ರಾಮಗಳಲ್ಲಿ ತಲಾ 10 ಲಕ್ಷ ರೂ.ಗಳಂತೆ ಒಟ್ಟಾರೆ 15 ಕೋಟಿ ರೂ.ಗಳ ವೆಚ್ಚದಲ್ಲಿ ಒಬ್ಬ ವೈದ್ಯರು, ಒಬ್ಬ ಶುಶ್ರೂಷಕರು ಹಾಗೂ ಒಬ್ಬ ಫಾರ್ಮಾಸಿಸ್ಟ್‌ಗಳನ್ನು ಒಳಗೊಂಡ 150 ಆರೋಗ್ಯ ವಿಸ್ತರಣಾ ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಗುವುದು.

ರಾಜ್ಯದಲ್ಲಿನ GVK EMRI ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 711 ಅಂಬ್ಯುಲೆನ್ಸ್‌ಗಳನ್ನು ರಾಜ್ಯ ಆರೋಗ್ಯ ಇಲಾಖೆಯ 827 ಅಂಬ್ಯುಲೆನ್ಸ್‌ಗಳೊಡನೆ ಒಟ್ಟುಗೂಡಿಸಿ, ಪ್ರತಿ 10 ರಿಂದ 15 ಕಿ.ಮೀ. ಸುತ್ತಳತೆಯಲ್ಲಿರುವ 35 ಸಾವಿರ ಜನಸಂಖ್ಯೆಗೆ ಒಂದರಂತೆ ಆಂಬುಲೆನ್ಸ್ ಸೇವೆಯನ್ನು ಒದಗಿಸಲಾಗುವುದು. ಬೆಳಗಾವಿ ನಗರ ಲಸಿಕಾ ಸಂಸ್ಥೆಯ ಆವರಣದಲ್ಲಿ 5 ಕೋಟಿ ರೂ. ಗಳ

ವೆಚ್ಚದಲ್ಲಿ ಆಯುಷ್ ಔಷಧ ತಯಾರಿಕಾ ಕೇಂದ್ರವನ್ನು ಸ್ಥಾಪಿಸಲಾಗುವುದು.

4.5 ಕೋಟಿ ರೂ. ಗಳ ವೆಚ್ಚದಲ್ಲಿ 150 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಶವಾಗಾರಗಳನ್ನು ತಲಾ 3 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗುವುದು. ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗಳಲ್ಲಿ 50 ಹಾಸಿಗೆಗಳ ಸಂಯೋಜಿತ ಆಯುಷ್ ಆಸ್ಪತ್ರೆಗಳನ್ನು ಒಟ್ಟಾರೆ 6 ಕೋಟಿ ರೂ. ಗಳ ವೆಚ್ಚದಲ್ಲಿ ಸ್ಥಾಪಿಸಲಾಗುವುದು. ಸಾಮಾನ್ಯ ಜನತೆಗೆ ಒಳ್ಳೆಯ ಗುಣಮಟ್ಟದ ಜೆನರಿಕ್ ಔಷಧಿಗಳನ್ನು ಕಡಿಮೆ ಬೆಲೆಯಲ್ಲಿ ಒದಗಿಸುವ ನಿಟ್ಟಿನಲ್ಲಿ ರಾಜ್ಯದಲ್ಲಿ "ಜನೌಷಧಿ ಔಷಧ ಮಳಿಗೆಗಳು" ಯೋಜನೆಯ ಅಡಿಯಲ್ಲಿ 200 ಜೆನರಿಕ್ ಔಷಧ ಮಳಿಗೆಗಳನ್ನು ಪ್ರಾರಂಭಿಸಲಾಗುವುದು. ಔಷಧೀಯ ಸಸ್ಯಗಳ ಗಿಡಮೂಲಿಕೆ ಔಷಧ ಕೋಶ ಉಪಯೋಗಕ್ಕಾಗಿ ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಪ್ರಾಯೋಗಿಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಸ್ಥಳೀಯ ಮಟ್ಟದಲ್ಲಿ ಪರಿಣಾಮಕಾರಿ ಆರೋಗ್ಯ ಪಾಲನೆ ಪರಿಹಾರಗಳ ಉದ್ದೇಶಕ್ಕಾಗಿ 2 ಕೋಟಿ ರೂ.ಗಳನ್ನು ಒದಗಿಸಲಾಗಿದೆ.ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿ ಈ ಮುಂದಿನ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಪ್ರಸ್ತುತ 20 ಜಿಲ್ಲೆ ಆಸ್ಪತ್ರೆಗಳು, 3 ಪ್ರಮುಖ ಆಸ್ಪತ್ರೆಗಳು ಹಾಗೂ 34 ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಸಾಲಿನಲ್ಲಿ ಉಳಿದ 114 ತಾಲ್ಲೂಕುಗಳಲ್ಲಿ ಡಯಾಲಿಸಿಸ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಅಪಘಾತ, ಉಸಿರಾಟದ ತೊಂದರೆ ಮತ್ತು ಗಂಭೀರ ಅನಾರೋಗ್ಯದಂತಹ ಸಂದರ್ಭಗಳಲ್ಲಿ ಚಿಕಿತ್ಸೆ ಒದಗಿಸಲು ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ 3 ಹಾಸಿಗೆಗಳ ಸಾಮರ್ಥ್ಯದ ವೆಂಟಿಲೇಟರ್ ಸೌಲಭ್ಯವಿರುವ ತೀವ್ರ ನಿಗಾ ಘಟಕಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ. ಡೆಂಗ್ಯು, ಮಲೇರಿಯಾ ಮತ್ತು ಇತರ ರೋಗಿಗಳ ಅಗತ್ಯತೆ ಪೂರೈಸಲು ಬಾಗಲಕೋಟೆ, ವಿಜಯಪುರ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ಹಾವೇರಿ, ಕೊಡಗು, ಕೋಲಾರ, ತುಮಕೂರು ಮತ್ತು ಉತ್ತರ ಕನ್ನಡದ 10 ಜಿಲ್ಲಾ ಆಸ್ಪತ್ರೆಗಳಲ್ಲಿ 6 ಕೋಟಿ ರೂ. ಗಳ ವೆಚ್ಚದಲ್ಲಿ ರಕ್ತ ವಿದಳನ ಘಟಕಗಳನ್ನು ಸ್ಥಾಪಿಸಲಾಗುವುದು.

ಸಂಯೋಜಿತ, ಸಮಗ್ರ ಆರೋಗ್ಯ ಸೇವೆ ಒದಗಿಸಲು ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ಆಯುಷ್ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು.ರಾಷ್ಟ್ರೀಯ ಉಚಿತ ರೋಗಪತ್ತೆ ಯೋಜನೆಯಡಿ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ರೋಗಪತ್ತೆ ಸೌಲಭ್ಯ ಒದಗಿಸಲಾಗುವುದು. 14 ಜಿಲ್ಲಾ ಆಸ್ಪತ್ರೆಗಳಲ್ಲಿ ಸಿ.ಟಿ. ಸ್ಕ್ಯಾನ್ ಸೌಲಭ್ಯ ಹಾಗೂ 6 ಜಿಲ್ಲಾ ಆಸ್ಪತ್ರೆಗಳಲ್ಲಿ ಎಂಆರ್‌ಐ ಸ್ಕ್ಯಾನ್ ಸೌಲಭ್ಯ ಒದಗಿಸಲಾಗುವುದು. 2017–18ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಒಟ್ಟಾರೆಯಾಗಿ 5,118 ಕೋಟಿ ರೂ. ಒದಗಿಸಲಾಗಿದೆ.

### ವೈದ್ಯಕೀಯ ಶಿಕ್ಷಣ

2014–15ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ, ಪ್ರಸಕ್ತ ಸಾಲಿನಲ್ಲಿ ಕಲಬುರಗಿ, ಮೈಸೂರು ಮತ್ತು ಬೆಳಗಾವಿ–ಮೂರು ಕಂದಾಯ ವಿಭಾಗಗಳಲ್ಲಿ ಶೇ.40 ರಷ್ಟು ಭಾರತ ಸರ್ಕಾರದ ನೆರವಿನೊಂದಿಗೆ 310 ಕೋಟಿ ರೂ.ಗಳ ವೆಚ್ಚದಲ್ಲಿ 250 ಹಾಸಿಗೆಗಳ ಸಾಮರ್ಥ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಬೆಂಗಳೂರಿನ ಇಂದಿರಾನಗರದಲ್ಲಿ ಸ್ವಂತ ಸಂಪನ್ಮೂಲಗಳನ್ನು ಬಳಸಿ 35 ಕೋಟಿ ರೂ. ಗಳ ಅಂದಾಜು ವೆಚ್ಚದಲ್ಲಿ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಎಂಡೊಕ್ರೈನಾಲಜಿಯ ಹೊಸ ಆಸ್ಪತ್ರೆಯನ್ನು ನಿರ್ಮಿಸಲಾಗುವುದು.

ಹುಬ್ಬಳ್ಳಿಯ ಕಿಮ್ಸ್ ಆವರಣದಲ್ಲಿ 5 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಜಯದೇವ ಹೃದ್ರೋಗ ವಿಜ್ಞಾನಗಳ ಮತ್ತು ಸಂಶೋಧನಾ ಕೇಂದ್ರದ ಒಂದು ಘಟಕವನ್ನು ಆರಂಭಿಸಲಾಗುವುದು. ಮಿಂಟೊ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು 10 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು. ಬಡ ಮತ್ತು ಅವಶ್ಯವಿರುವ ರೋಗಿಗಳಿಗೆ ಉತ್ತಮ ಚಿಕಿತ್ಸೆ ಸೌಲಭ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ, ಬೆಂಗಳೂರಿನ ಕ್ಷಯರೋಗ ಆಸ್ಪತ್ರೆ ಆವರಣದಲ್ಲಿ 10 ಕೋಟಿ ರೂ. ಗಳ ಅಂದಾಜು ವೆಚ್ಚದಲ್ಲಿ ಚರ್ಮರೋಗ ಸಂಸ್ಥೆಯನ್ನು ಆರಂಭಿಸಲಾಗುವುದು.

ಬಳ್ಳಾರಿಯ ವಿಮ್ಸ್ ಬೋಧನಾ ಆಸ್ಪತ್ರೆಯನ್ನು 25 ಕೋಟಿ ರೂ.ಗಳ ವೆಚ್ಚದಲ್ಲಿ



ನವೀಕರಿಸಲಾಗುವುದು. ಕಲಬುರಗಿ ಮತ್ತು ಮೈಸೂರಿನಲ್ಲಿ ತಲಾ 10 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ನೆಫ್ರೊ–ಯುರಾಲಜಿ ಘಟಕವನ್ನು ಆರಂಭಿಸಲಾಗುವುದು. ಚಿತ್ರದುರ್ಗ, ಬಾಗಲಕೋಟೆ, ಹಾವೇರಿ, ಯಾದಗಿರಿ, ಚಿಕ್ಕಬಳ್ಳಾಪುರ ಮತ್ತು ಚಿಕ್ಕಮಗಳೂರಿನಲ್ಲಿ 6 ವೈದ್ಯಕೀಯ ಕಾಲೇಜುಗಳ ನಿರ್ಮಾಣ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಕರ್ನಾಟಕ ಜ್ಞಾನ ಆಯೋಗವು ವೈಶಿಷ್ಟ್ಯ ಪೂರ್ಣ ನರ್ಸಿಂಗ್ ತರಬೇತಿ ಸಿಮ್ಯೂಲೇಟರ್‌ಗಳನ್ನು ಅಭಿವೃದ್ಧಿಪಡಿಸಿದೆ. ಇದುಸಂದಿಗ್ಧ, ತೀವ್ರತರವಾದ ಮತ್ತು ಹೃದಯಕ್ಕೆ ಸಂಬಂಧಿಸಿದ ಜಾಗರೂಕತೆಗಾಗಿ ತರಬೇತಿ ನರ್ಸ್‌ಗಳಿಗೆ ಸಹಾಯವಾಗುವುದು. ರಾಜ್ಯಾದ್ಯಂತ ಅಂತಹ ಸಿಮ್ಯೂಲೇಟರ್‌ಗಳನ್ನು ನಿಯೋಜಿಸಲು ಉದ್ದೇಶಿಸಿದೆ.ಇದಕ್ಕಾಗಿ 5 ಕೋಟಿ ರೂ.ಗಳನ್ನು ಮೀಸಲಿರಿಸಿದೆ.

2017–18ನೇ ಸಾಲಿನಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಗೆ ಒಟ್ಟಾರೆಯಾಗಿ 2,004 ಕೋಟಿ ರೂ. ಒದಗಿಸಲಾಗಿದೆ.

### ಮಹಿಳಾ ಮತ್ತು ಮಕ್ಕಳ ಕಲ್ಯಾಣ

ಎಲ್ಲಾ ಅಂಗನವಾಡಿಯ ಮಕ್ಕಳಿಗೆ ಜೂನ್ ತಿಂಗಳಿನಿಂದ ವಾರದಲ್ಲಿ ಎರಡು ದಿನ ಮೊಟ್ಟೆ ನೀಡಲಾಗುವುದು. ಇದಕ್ಕಾಗಿ 47 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು. ಕ್ಷೀರ ಭಾಗ್ಯ ಯೋಜನೆಯಡಿ ಪ್ರಸ್ತುತ 3 ದಿನಗಳು ವಿತರಿಸುತ್ತಿರುವ ಹಾಲನ್ನು ಜುಲೈ ತಿಂಗಳಿನಿಂದ 5 ದಿನಗಳಿಗೆ ಹೆಚ್ಚಿಸಿ ವಿತರಿಸಲಾಗುವುದು. ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಡಿ ಈ ಮುಂದಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು. * 6,022 ಗ್ರಾಮ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು 2,000 ರೂ.ಗಳಿಂದ 3,000 ರೂ.ಗಳಿಗೆ ಹಾಗೂ 176

ಬಹುವಿಧ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು 5,000 ರೂ.ಗಳಿಂದ 6,000 ರೂ.ಗಳಿಗೆ ಹೆಚ್ಚಿಸಲಾಗುವುದು.

613 ನಗರ ಪುನರ್ವಸತಿ ಕಾರ್ಯಕರ್ತರನ್ನು ಮಾಸಿಕ 3,000 ರೂ.ಗಳ ಗೌರವಧನದೊಂದಿಗೆ ನೇಮಕ ಮಾಡಲಾಗುವುದು. * "ಸಾಧನೆ" ಯೋಜನೆಯಡಿ ನೀಡಲಾಗುವ ಆರ್ಥಿಕ ನೆರವನ್ನು 30,000 ರೂ.ಗಳಿಂದ 50,000 ರೂ.ಗಳಿಗೆ ಹೆಚ್ಚಿಸಲಾಗುವುದು. * ಆಟಿಸಂ, ಸೆರಬ್ರಲ್ ಪಾಲ್ಸಿ, ಬುದ್ಧಿಮಾಂದ್ಯತೆ ಮತ್ತು ಬಹುವಿಧದ ವೈಕಲ್ಯ ಹೊಂದಿರುವ ಮಕ್ಕಳಿಗಾಗಿ 4 ವಿಭಾಗಗಳಲ್ಲಿ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲಾಗುವುದು. * ಶಿಶು ಕೇಂದ್ರಿತ ಯೋಜನೆಯಡಿ ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ಶ್ರವಣ ದೋಷವುಳ್ಳ ಮತ್ತು ಅಂಧರ ಹಾಗೂ ಬುದ್ಧಿಮಾಂಧ್ಯ ವಿಶೇಷ ಶಾಲೆಗಳ ಪ್ರತಿ ಮಗುವಿಗೆ ನೀಡುವ ಮಾಸಿಕ ಅನುದಾನವನ್ನು 1200 ರೂ.ಗಳಷ್ಟು ಹೆಚ್ಚಿಸಲಾಗುವುದು. * ಪ್ರಸಕ್ತ ಸಾಲಿನಲ್ಲಿ ವಿಕಲಚೇತನರಿಗೆ ನೀಡುತ್ತಿರುವ ಸುಧಾರಿತ ದ್ವಿಚಕ್ರ ವಾಹನಗಳ ಸಂಖ್ಯೆಯನ್ನು 2000 ರಿಂದ 4000ಕ್ಕೆ ಹೆಚ್ಚಿಸಲಾಗುವುದು.

ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮವು ಪ್ರಸ್ತುತ ಜಾರಿಯಲ್ಲಿರುವ ಕಾರ್ಯಕ್ರಮಗಳ ಜೊತೆಗೆ ಈ ಮುಂದಿನ ಹೊಸ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು 148.74 ಕೋಟಿ ರೂ. ಗಳನ್ನು ಒದಗಿಸಿದೆ.

* "ಸವಿರುಚಿ" ಸಂಚಾರಿ ಕ್ಯಾಂಟೀನ್‌ಗಳನ್ನು ಎಲ್ಲಾ 30 ಜಿಲ್ಲೆಗಳಲ್ಲಿ "ಜಿಲ್ಲಾ ಸ್ತ್ರೀ ಶಕ್ತಿ ಒಕ್ಕೂಟಗಳ" ಮೂಲಕ ಪ್ರಾರಂಭಿಸಲಾಗುವುದು. * ಮಹಿಳೆಯರು ಸ್ವತ: / ಜಂಟಿಯಾಗಿ ನಡೆಸುತ್ತಿರುವ 10,000ನ್ಯಾಯಬೆಲೆ ಅಂಗಡಿಗಳಿಗೆ 5,000/- ರೂ.ಗಳ ಘಟಕವೆಚ್ಚದಲ್ಲಿ ಅಗತ್ಯ ಸಲಕರಣೆಗಳನ್ನು ಖರೀದಿಸಿ ಒದಗಿಸುವ"ಪರಿಕರ ಸಹಾಯಧನ" ಯೋಜನೆಯನ್ನುಜಾರಿಗೊಳಿಸಲಾಗುವುದು.

2017-18ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಇಲಾಖೆಗೆ ಒಟ್ಟಾರೆಯಾಗಿ 4,926 ಕೋಟಿ ರೂ. ಒದಗಿಸಲಾಗಿದೆ.



**ಸಮಾಜ ಕಲ್ಯಾಣ**

ಜಿಲ್ಲೆಗೆ ಒಂದರಂತೆ ತಲಾ ಒಂದು ಕೋಟಿ ರೂ. ವೆಚ್ಚದಲ್ಲಿ 30 ಮೊರಾರ್ಜಿ ವಸತಿ ಶಾಲೆಗಳನ್ನು ವಿಜ್ಞಾನ ಮತ್ತು ಗಣಿತ ವಿಷಯಗಳೊಂದಿಗೆ ಪಿ.ಯು.ಸಿ.ಗೆ ಮೇಲ್ದರ್ಜೆಗೇರಿಸಲಾಗುವುದು. 163. 2012-13ನೇ ಸಾಲಿನಲ್ಲಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಭೋಜನಾ ವೆಚ್ಚಕ್ಕಾಗಿ ಅನುಕ್ರಮವಾಗಿ ಮಾಹೆಯಾನ 750 ರೂ. ಮತ್ತು 850 ರೂ. ನೀಡಲಾಗುತ್ತಿತ್ತು. ಪ್ರಸಕ್ತ ಸಾಲಿನಲ್ಲಿ 100 ರೂ.ಗಳಷ್ಟು ಹೆಚ್ಚಿಸಿ ಈ ಮೊತ್ತವನ್ನು 1,400 ರೂ. ಮತ್ತು 1,500 ರೂ. ಗಳಿಗೆ ನಿಗದಿಪಡಿಸಲಾಗಿದೆ. 164. 1 ಲಕ್ಷ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ಯುವಕರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ನೀಡಲಾಗುವುದು. ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳ ಬಳಕೆಗಾಗಿ ಬುಕ್ ಬ್ಯಾಂಕ್‌ಗಳನ್ನು ಸ್ಥಾಪಿಸಲಾಗುವುದು.

1 ರಿಂದ 8ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ಡೇ ಸ್ಕಾಲರ್ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿ ವೇತನವನ್ನು 250 ರೂ.ಗಳಷ್ಟು ಹೆಚ್ಚಿಸಲಾಗುವುದು. ಈ ಕಾರ್ಯಕ್ರಮದಿಂದ 15 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ 6 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ.

ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಈಗಿರುವ 14 ಜಿಲ್ಲಾ ಕಛೇರಿಗಳ ಜೊತೆಗೆ 5 ಜಿಲ್ಲೆಗಳಲ್ಲಿ ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣ ಕಚೇರಿಗಳನ್ನು ಆರಂಭಿಸಲಾಗುವುದು.

ವೃತ್ತಿ ಕೌಶಲ್ಯ ಪಡೆದ 1400 ಪರಿಶಿಷ್ಟ ಜಾತಿ ಮತ್ತು 600 ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ಯುವಕರಿಗೆ 5 ಲಕ್ಷ ರೂ.ಗಳವರೆಗಿನ ಘಟಕ ವೆಚ್ಚವನ್ನು ಹೊಂದಿರುವ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು 2.5 ಲಕ್ಷ ರೂ. ಅಥವಾ ಶೇ.50 ರಷ್ಟು ಯೋಜನಾ ವೆಚ್ಚ ಇವುಗಳಲ್ಲಿಯಾವುದು ಕಡಿಮೆಯೋ ಅಷ್ಟು ಸಹಾಯಧನ ನೀಡಲಾಗುವುದು.

ವಾಹನ ಚಾಲನಾ ಪರವಾನಗಿ ಹೊಂದಿರುವ 3500 ಪರಿಶಿಷ್ಟಜಾತಿ ಮತ್ತು 1500 ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿಗಳನ್ನು ಖರೀದಿಸಲು 3 ಲಕ್ಷ ರೂ. ಗಳವರೆಗೆ ಅಥವಾ ವಾಹನದ ಶೇ.50ರಷ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸಹಾಯಧನ ನೀಡಲಾಗುವುದು. ಉಳಿದ ಮೊತ್ತವನ್ನು ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ಪಡೆಯಬಹುದು.

ಜ್ಯೋತಿ ಸಂಜೀವಿನಿ ಆರೋಗ್ಯ ಸಂರಕ್ಷಣಾ ಯೋಜನೆ ಮಾದರಿಯಲ್ಲಿಯೇ ಸಫಾಯಿ ಕರ್ಮಚಾರಿಗಳಿಗೆ ಆರೋಗ್ಯ ಸೌಲಭ್ಯಗಳನ್ನು ಒದಗಿಸಲಾಗುವುದು. ಕಾನೂನು ಪದವೀಧರರ ಮಾಸಿಕ ತರಬೇತಿ ಭತ್ಯೆಯನ್ನು 2000 ರೂ.ಗಳಿಂದ 5000 ರೂ.ಗಳಿಗೆ ಹೆಚ್ಚಿಸಲಾಗುವುದು.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಸತಿ ನಿಲಯಗಳಲ್ಲಿ ಕಂಪ್ಯೂಟರ್ ಶಿಕ್ಷಣ, ಇಂಗ್ಲೀಷ್, ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ವಿಶೇಷ ತರಬೇತಿಯ ವ್ಯವಸ್ಥೆ ಮಾಡಲಾಗುವುದು.

ಜೆಇಇ / ಎನ್‌ಇಇಟಿ / ಜಿಎಟಿಇ / ಜಿಆರ್‌ಇ ಮುಂತಾದ ಪರೀಕ್ಷೆಗಳ ಮುಖಾಂತರ ರಾಷ್ಟ್ರ ಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವುದಕ್ಕಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪರೀಕ್ಷಾಪೂರ್ವ ತರಬೇತಿ ನೀಡಲಾಗುವುದು.

ಸಂವಿಧಾನದ 5ನೇ ಅನುಸೂಚಿಯ ಉಪಬಂಧಗಳನ್ವಯ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ, ರಾಜ್ಯ ಸರ್ಕಾರಕ್ಕೆ ಮಾರ್ಗದರ್ಶನ ಹಾಗೂ ಸಲಹೆ ನೀಡಲು ಕರ್ನಾಟಕ ಆದಿವಾಸಿಗಳ ಸಲಹಾ ಪರಿಷತ್ತನ್ನು ಸ್ಥಾಪಿಸಲು ಅನುಮೋದನೆ ಕೋರಿ ಭಾರತ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗುವುದು.

ಪರಿಶಿಷ್ಟ ಪಂಗಡಗಳ ಸಮಗ್ರ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಧಿನಿಯಮದಡಿಯಲ್ಲಿ ರಚಿಸಿರುವ ಕೋಶವನ್ನು ಸಶಕ್ತಗೊಳಿಸಲಾಗುವುದು.

ಜೇನುಕುರುಬ, ಕೊರಗ, ಸೋಲಿಗ, ಕಾಡುಕುರುಬ, ಎರವ, ಗೌಡಲು, ಹಸಲುರು, ಇರುಳಿಗ, ಸಿದ್ಧಿ, ಮಲೆಕುಡಿಯ, ಹಕ್ಕಿ-ಪಿಕ್ಕಿ, ತೋಡ, ಮೇದ ಇತ್ಯಾದಿ ಆದಿವಾಸಿ ಸಮುದಾಯಗಳ ಅಭಿವೃದ್ಧಿಗೆ ಮತ್ತು ಸ್ವಯಂ ಉದ್ಯೋಗ ಕಲ್ಪಿಸಲು ಪ್ರೋತ್ಸಾಹ ನೀಡಲಾಗುವುದು. ಈ ಉದ್ದೇಶಕ್ಕಾಗಿ 200 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು.

ಮೇಲ್ಕಂಡ ಆದಿವಾಸಿ ಸಮುದಾಯಗಳು ಅರಣ್ಯದಲ್ಲಿ ಮತ್ತು ಅರಣ್ಯದಂಚಿನಲ್ಲಿ ವಾಸಿಸುತ್ತಿರುವ ಅರಣ್ಯ ಸಂರಕ್ಷಣೆ ಬಗ್ಗೆ ಅನುಭವ ಇರುವುದರಿಂದ ಸರ್ಕಾರಿ ಉದ್ಯೋಗಗಳಲ್ಲಿ ಇವರ ಪ್ರಾತಿನಿಧ್ಯ ಕಡಿಮೆ ಇರುವುದರಿಂದ ಅರಣ್ಯ ಇಲಾಖೆಯ ಗಾರ್ಡ್, ವಾಚರ್ ಇತ್ಯಾದಿ ಹುದ್ದೆಗಳಿಗೆ ವಿಶೇಷ ನಿಯಮಗಳನ್ನು ರೂಪಿಸಿ ನೇಮಕ ಮಾಡಲು ಕ್ರಮವಹಿಸಲಾಗುವುದು.

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳಿಂದ ಒಂದು ಲಕ್ಷ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆರ್ಥಿಕಾಭಿವೃದ್ಧಿಗಾಗಿ 40,000 ರೂ. ಘಟಕ ವೆಚ್ಚದಲ್ಲಿ ನೇರ ಸಾಲ ಯೋಜನೆಯಡಿ 15,000 ರೂ. ಸಹಾಯಧನ, ಶೇ.4ರ ಬಡ್ಡಿದರದಲ್ಲಿ 25,000 ರೂ. ಸಾಲವನ್ನು ಎಮ್ಮೆ-ಹಸು ಅಥವಾ ಕುರಿ-ಮೇಕೆ ಇವುಗಳನ್ನು ವಿತರಿಸಲು 300 ಕೋಟಿ ರೂ. ಒದಗಿಸಲಾಗುವುದು.ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ 2 ಲಕ್ಷ ಬಿ.ಪಿ.ಎಲ್. ಕುಟುಂಬಗಳಿಗೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸಹಯೋಗದೊಂದಿಗೆ "ಅಡುಗೆ ಅನಿಲ" ಸಂಪರ್ಕ ಕಲ್ಪಿಸಲು 100 ಕೋಟಿ ರೂ. ಒದಗಿಸಲಾಗುವುದು.

2017-18ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಒಟ್ಟಾರೆಯಾಗಿ 6,363 ಕೋಟಿ ರೂ. ಒದಗಿಸಲಾಗಿದೆ.



**ಹಿಂದುಳಿದ ವರ್ಗಗಳ ಕಲ್ಯಾಣ**

300 ಮೆಟ್ರಿಕ್ ನಂತರದ ಹಾಸ್ಟೆಲ್‌ಗಳ ಕಾಮಗಾರಿಯನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದಲ್ಲದೆ, ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಒತ್ತು ನೀಡಲಾಗುವುದು. ಇದಕ್ಕಾಗಿ 279 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಇ-ಆಡಳಿತ ಇಲಾಖೆಯ ನೆರವಿನೊಂದಿಗೆ 202 ವೃತ್ತೀಯ, ಸ್ನಾತಕೋತ್ತರ ಮತ್ತು ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಹಾಸ್ಟೆಲ್‌ಗಳಲ್ಲಿ ಡಿಜಿಟಲ್ ಗ್ರಂಥಾಲಯವನ್ನು ಸ್ಥಾಪಿಸಲಾಗುವುದು.

ಮೊದಲ ಪ್ರಯತ್ನದಲ್ಲೇ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗುವ ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪದವಿ ಹಾಗೂ ಸ್ನಾತಕೋತ್ತರ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ನೀಡುವ ಪ್ರೋತ್ಸಾಹಧನವನ್ನು ಅನುಕ್ರಮವಾಗಿ 200 ರೂ.ಗಳಿಂದ 1000 ಕ್ಕೆ, 300 ರೂ.ಗಳಿಂದ 1500 ಕ್ಕೆ, 400 ರೂ.ಗಳಿಂದ 2000ಕ್ಕೆ ಹಾಗೂ 500 ರೂ.ಗಳಿಂದ 3000 ರೂ.ಗಳಿಗೆ ಹೆಚ್ಚಿಸಲಾಗುವುದು.

ಹಾಸ್ಟೆಲ್ ವಿದ್ಯಾರ್ಥಿಗಳ ಪುಸ್ತಕಗಳು ಮತ್ತು ಲೇಖನ ಸಾಮಗ್ರಿಗಳು, ಕ್ಷೌರ ಹಾಗೂ ಸಮವಸ್ತ್ರ ವೆಚ್ಚಗಳನ್ನು ಅನುಕ್ರಮವಾಗಿ 200 ರೂ.ಗಳಿಂದ 400ಕ್ಕೆ, 150 ರೂ.ಗಳಿಂದ 300 ಕ್ಕೆ ಹಾಗೂ 499 ರೂ.ಗಳಿಂದ 1000 ರೂ.ಗಳಿಗೆ ಹೆಚ್ಚಿಸಲಾಗುವುದು. 198. ಸರ್ಕಾರಿ ಹಾಸ್ಟೆಲ್‌ಗಳ/ವಸತಿ ಹಾಗೂ ಆಶ್ರಮ ಶಾಲೆಗಳ ಆಹಾರ ಭತ್ಯೆಯನ್ನು ಪ್ರತಿ ವಿದ್ಯಾರ್ಥಿಗೆ ಮಾಸಿಕ 100 ರೂ.ಗಳಷ್ಟು ಹೆಚ್ಚಿಸಲಾಗಿದೆ. 199. ಸೇನೆಗಳಿಗೆ ಆಯ್ಕೆಯಾಗುವ ಅವಕಾಶಗಳನ್ನು ಹೆಚ್ಚಿಸಲು 3000 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುವುದು. * ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದಿಂದ ಈ ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

* ಹಿಂದುಳಿದ ವರ್ಗಗಳ ವಿಧವೆಯರು ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು 40,000/- ರೂ.ಗಳ (10,000/- ರೂ. ಸಹಾಯಧನ ಮತ್ತು ಶೇ. 4ರ ಬಡ್ಡಿ ದರದಲ್ಲಿ 30,000/- ರೂ. ಸಾಲ) ಆರ್ಥಿಕ ನೆರವನ್ನು ನೀಡಲಾಗುವುದು. * ಮಡಿವಾಳ, ಸವಿತಾ ಸಮಾಜ, ತಿಗಳ, ಕುಂಬಾರ ಸಮುದಾಯಗಳ ಅಭಿವೃದ್ಧಿಗಾಗಿ 60 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು. * ವಾಹನ ಚಾಲನಾ ಪರವಾನಗಿಯನ್ನು ಹೊಂದಿರುವ 1000 ಹಿಂದುಳಿದ ವರ್ಗಗಳ ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿಗಳನ್ನು ಖರೀದಿಸಲು 3 ಲಕ್ಷ ರೂ.ಗಳವರೆಗೆ ಅಥವಾವಾಹನದ ಶೇ.50ರಷ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸಹಾಯಧನ ನೀಡಲಾಗುವುದು. ಉಳಿದ ಮೊತ್ತವನ್ನು ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ಪಡೆಯಬಹುದು. * ಸಾರಾಯಿ ಮಾರಾಟ ನಿಷೇಧದಿಂದ ಉದ್ಯೋಗ ಕಳೆದುಕೊಂಡಿರುವ ಸಾರಾಯಿ ವೆಂಡರು ಮೂರ್ತೆದಾರ, ಈಡಿಗ ಇತ್ಯಾದಿ ಸಮುದಾಯಗಳು ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ನೆರವು ನೀಡಲಾಗುವುದು.

ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ 25 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಅನುಷ್ಠಾನ ಹಂತದಲ್ಲಿರುವ ಕಾರ್ಯಕ್ರಮಗಳ ಜೊತೆಗೆ ಈ ಮುಂದಿನ ಹೊಸ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

* ಮಹಿಳೆಯರಿಗೆ ಮೈಕ್ರೋ ಕ್ರೆಡಿಟ್ ಸಾಲ ಯೋಜನೆ ಅಡಿ 15,000/- ರೂ.ಗಳ ಘಟಕ ವೆಚ್ಚದಲ್ಲಿ ಶೇ.4ರ ಬಡ್ಡಿ ದರದಲ್ಲಿ 10,000/- ರೂ.ಗಳ ಸಾಲವನ್ನು ಹಾಗೂ 5,000/- ರೂ.ಗಳ ಸಹಾಯಧನ ಒದಗಿಸಲಾಗುವುದು.

ಕೇಂದ್ರ ರಕ್ಷಣಾ ಮಂತ್ರಾಲಯದ ಸಹಯೋಗದೊಂದಿಗೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯನ್ನು ಸ್ಥಾಪಿಸಲಾಗುವುದು. ಕಾನೂನು ಪದವೀಧರರ ಮಾಸಿಕ ತರಬೇತಿ ಭತ್ಯೆಯನ್ನು 2000 ರೂ.ಗಳಿಂದ 4000 ರೂ.ಗಳಿಗೆ ಹೆಚ್ಚಿಸಲಾಗುವುದು.

ಐ.ಎ.ಎಸ್., ಐ.ಪಿ.ಎಸ್., ಕೆ.ಎ.ಎಸ್., ಬ್ಯಾಂಕಿಂಗ್ ಇತ್ಯಾದಿ ಸ್ಪರ್ಧಾತ್ಮಕ ಪರೀಕ್ಷೆಗಳ

ಬಗ್ಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಲ್ಲಿ ತಿಳಿವಳಿಕೆ ಹೆಚ್ಚಿಸಲು ಮತ್ತು ಮಾರ್ಗದರ್ಶನ ನೀಡಲು ತಾಲ್ಲೂಕು ಮಟ್ಟದಲ್ಲಿ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಈ ಉದ್ದೇಶಕ್ಕಾಗಿ 2 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಹಿಂದುಳಿದ ವರ್ಗಗಳು, ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳು ನಿರ್ವಹಿಸುತ್ತಿರುವ 1ರಿಂದ 5ನೇ ತರಗತಿವರೆಗಿನ ಆಶ್ರಮ ಶಾಲೆಗಳ/ವಸತಿ ಶಾಲೆಗಳ ಶೈಕ್ಷಣಿಕ ನಿರ್ವಹಣೆಯನ್ನು ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗುವುದು. ಬುಡಬುಡಕಿ, ಗೊಂದಳಿ, ಹೆಳವ, ಪಿಚಗುಂಟ, ಜೋಗಿ, ಗೊಲ್ಲ, ಶಿಕ್ಕಲಿಗಾರ, ಹಾವುಗಾರ ಇತ್ಯಾದಿ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳ ಅಭಿವೃದ್ಧಿಗೆ 100 ಕೋಟಿ ರೂ.ಗಳನ್ನು ಒದಗಿಸಲಾಗುವುದು. 100 ವಿದ್ಯಾರ್ಥಿಗಳಿಗೆ ವಿದೇಶ ವ್ಯಾಸಂಗ ವೇತನವನ್ನು ಮಂಜೂರು ಮಾಡಲಾಗುವುದು.

2017–18ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಒಟ್ಟಾರೆಯಾಗಿ 3,154 ಕೋಟಿ ರೂ. ಒದಗಿಸಲಾಗಿದೆ.

### ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಹಜ್

ಬೆಂಗಳೂರಿನಲ್ಲಿ ಅಲ್ಪಸಂಖ್ಯಾತರ ಇಲಾಖೆಯ ಎಲ್ಲಾ ಕಛೇರಿಗಳನ್ನು ಹಾಗೂ ಒಂದು ಸಭಾಂಗಣವನ್ನು ಒಳಗೊಂಡ ಮೌಲಾನಾ ಅಬುಲ್ ಕಲಾಂ ಆಜಾದ್ ಭವನ, ಉರ್ದು ಕನ್ವೆಷನ್ ಹಾಲ್ ಮತ್ತು ಸಾಂಸ್ಕೃತಿಕ ಕೇಂದ್ರವನ್ನು ನಿರ್ಮಿಸಲು 20 ಕೋಟಿ ರೂ.ಗಳನ್ನು ಒದಗಿಸಲಾಗುವುದು.

* ಗುರು ಗೋವಿಂದ ಸಿಂಗ್‌ಜೀರವರ 350ನೇ ಜನ್ಮ ದಿನಾಚರಣೆ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಾಗೂ ಸಿಖ್ ಸಮುದಾಯದ ಸಂಸ್ಕೃತಿ ಮತ್ತು ಪರಂಪರೆ ಸಂರಕ್ಷಿಸಲು ಬೀದರ್‌ನಲ್ಲಿ ಸಾಂಸ್ಕೃತಿಕ ಕೇಂದ್ರವನ್ನು ಸ್ಥಾಪಿಸಲು 5 ಕೋಟಿ ರೂ. ಅನುದಾನ ಒದಗಿಸಲಾಗುವುದು. * ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿಗಾಗಿ 175 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಜಾರಿಯಲ್ಲಿರುವ ಯೋಜನೆಗಳೊಂದಿಗೆ ಸ್ಮಶಾನಕ್ಕೆ ಗೋಡೆ ಮತ್ತು ಮೂಲಭೂತ ಸೌಕರ್ಯವನ್ನು ಒದಗಿಸಲಾಗುವುದು



ಪೇಷ್ ಇಮಾಮ್ ರವರಿಗೆ ಹಾಲಿ ಇರುವ ಗೌರವಧನವನ್ನು 3,100 ರೂ. ಗಳಿಂದ 4,000 ರೂ.ಗಳಿಗೆ ಹಾಗೂ ಮೌಜನ್ ರವರ ಗೌರವಧನವನ್ನು 2,500 ರೂ.ಗಳಿಂದ 3,000 ರೂ.ಗಳಿಗೆ ಹೆಚ್ಚಿಸಲಾಗುವುದು. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ 330 ಕೋಟಿ ರೂ. ಗಳ ಅನುದಾನ ನೀಡಲಾಗುವುದು. 75,000 ಅಲ್ಪಸಂಖ್ಯಾತ ಯುವಜನರಿಗೆ ಮುಖ್ಯಮಂತ್ರಿ ಕೌಶಲ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ತರಬೇತಿ ನೀಡಲಾಗುವುದು.

2017–18ನೇ ಸಾಲಿನಲ್ಲಿ 2,200 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ 2,750 ಕೋಟಿ ರೂ.ಗಳ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

### ವಸತಿ

ಕರ್ನಾಟಕ ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿಯ ಮೂಲಕ 50,000 ಮನೆಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು. 2017–18ನೇ ಸಾಲಿನಲ್ಲಿ ವಸತಿ ಇಲಾಖೆಗೆ ಒಟ್ಟಾರೆಯಾಗಿ 4,708 ಕೋಟಿ ರೂ. ಒದಗಿಸಲಾಗಿದೆ.

### ಕಾರ್ಮಿಕ

ಖಾಸಗಿ ವಲಯದ ಉದ್ದಿಮೆಗಳಲ್ಲಿಯ ಸಿ ಮತ್ತು ಡಿ ವೃಂದದ ನೇಮಕಾತಿಯಲ್ಲಿ ಕನ್ನಡಿಗರಿಗೆ ಶೇ.100 ರಷ್ಟು ಮತ್ತು ವಿಕಲಚೇತನರಿಗೆ ಶೇ.5ರಷ್ಟು ಆದ್ಯತೆ ನೀಡಲು ಸರ್ಕಾರವು ಕ್ರಮ ತೆಗೆದುಕೊಳ್ಳುತ್ತದೆ. “ರಾಜ್ಯ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನಾ ಪರಿಷ್ಕೃತ ಕ್ರಿಯಾ ಯೋಜನೆ’ ಯನ್ನು 2017–18 ರಲ್ಲಿ ರೂಪಿಸಲಾಗುವುದು. ಈ ಕ್ರಿಯಾ ಯೋಜನೆಯ ಮೂಲಕ ಮುಂದಿನ 5 ವರ್ಷಗಳೊಳಗಾಗಿ ಕರ್ನಾಟಕವನ್ನು “ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ವ್ಯವಸ್ಥೆ ಮುಕ್ತ’ ರಾಜ್ಯವನ್ನಾಗಿ ಘೋಷಿಸಲು ಕ್ರಮ ಕೈಗೊಳ್ಳಲಾಗುವುದು. ಖಾಸಗಿ ವಲಯದ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಕಾರ್ಮಿಕರಿಗೆ ಉದ್ಯೋಗ ದೊರಕಿಸಿಕೊಡುವ ಸದುದ್ದೇಶದಿಂದ ‘ಆಶಾದೀಪ ಯೋಜನೆ’ ಯನ್ನು ಜಾರಿಗೆ ತರಲಾಗುವುದು. ಈ ಯೋಜನೆಯ ಖಾಸಗಿ ಸಂಸ್ಥೆಗಳಲ್ಲಿ ಹೊಸದಾಗಿ ನೇಮಕಗೊಳ್ಳುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಆಡಳಿತ ವರ್ಗದವರು ಪಾವತಿಸಬೇಕಿರುವ ಇಎಸ್‌ಐ ಮತ್ತು ಭವಿಷ್ಯ ನಿಧಿ ವಂತಿಗೆಯನ್ನು ಸರ್ಕಾರವೇ ಭರಿಸಲಿದೆ. ಪರಿಶಿಷ್ಟ ಜಾತಿ ಉಪ ಯೋಜನೆ / ಗಿರಿಜನ ಉಪ ಯೋಜನೆ ಕಾರ್ಯಕ್ರಮದಡಿ ಈ ಉದ್ದೇಶಕ್ಕೆ ಪ್ರಾರಂಭಿಕವಾಗಿ 5 ಕೋಟಿ ರೂ. ಒದಗಿಸಲಾಗುವುದು.

ಹಮಾಲರು, ಬೀದಿಬದಿ ವ್ಯಾಪಾರಿಗಳು, ಮನೆಗೆಲಸದವರು ಮತ್ತು ಚಿಂದಿ ಆಯುವವರಿಗೆ 10 ಕೋಟಿ ರೂ. ವೆಚ್ಚದಲ್ಲಿ ಸ್ಮಾರ್ಟ್ ಕಾರ್ಡ್ ಒದಗಿಸುವ ಮೂಲಕ “ಅಪಘಾತ ಪರಿಹಾರ ಯೋಜನೆ” ಹಾಗೂ “ಭವಿಷ್ಯ ನಿಧಿ ಪಿಂಚಣಿ”ಯ ಅನುಕೂಲ ಕಲ್ಪಿಸಲು ಉದ್ದೇಶಿಸಿದೆ. ನೊಂದಾಯಿತ ಕಟ್ಟಡ ಕಾರ್ಮಿಕರಿಗಾಗಿ “ವಸತಿ ಯೋಜನೆಯೂ ಒಳಗೊಂಡಂತೆ ಸಮಗ್ರ ಭವಿಷ್ಯನಿಧಿ ಹಾಗೂ ಪಿಂಚಣಿ ಕಾರ್ಯಕ್ರಮ”ವನ್ನು ಜಾರಿಗೊಳಿಸಲಾಗುವುದು. ಕಾರ್ಮಿಕರ ರಾಜ್ಯ ವಿಮಾ ನಿಗಮವು ಒದಗಿಸಿದ ಸಂಪನ್ಮೂಲದ ಮಿತಿಯೊಳಗೆ ಎಲ್ಲಾ ಜಿಲ್ಲೆಗಳ ಕಾರ್ಮಿಕ ರಾಜ್ಯ ವಿಮಾ ಸೇವೆಗಳನ್ನು ಸುಧಾರಣೆ ಮಾಡಲಾಗುವುದು. ಇದರಿಂದಾಗಿ ನೋಂದಾಯಿತ 1.2 ಕೋಟಿ ವಿಮಾದಾರರ ಹಾಗೂ ಅವರ ಕುಟುಂಬದ ಸದಸ್ಯರಿಗೆ ಸಹಾಯವಾಗಲಿದ್ದು, ಮುಂದಿನ ಮೂರು ವರ್ಷದಲ್ಲಿ ಈ ಕೆಳಕಂಡ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲಾಗುವುದು.

* ರಾಜ್ಯದಲ್ಲಿ ಹೊಸದಾಗಿ 61 ಇಎಸ್‌ಐ ಚಿಕಿತ್ಸಾಲಯಗಳ ಪ್ರಾರಂಭ. * ದಾವಣಗೆರೆ, ಹುಬ್ಬಳ್ಳಿ ಹಾಗೂ ಬೆಳಗಾವಿ ESI ಆಸ್ಪತ್ರೆಗಳಲ್ಲಿನ ಹಾಸಿಗೆ ಸಾಮರ್ಥ್ಯವನ್ನು 100ಕ್ಕೆ ಹೆಚ್ಚಿಸುವುದು ಹಾಗೂ ಉನ್ನತೀಕರಿಸುವುದು. * ಇಂದಿರಾನಗರದ ಇಎಸ್‌ಐ ಆಸ್ಪತ್ರೆಯ ಉನ್ನತೀಕರಣ ಹಾಗೂ ಸೂಪರ್ ಸ್ಪೆಷಾಲಿಟಿ ವಿಭಾಗಗಳ ಪ್ರಾರಂಭ.

* ಎಲ್ಲಾ ಇಎಸ್ಐ ಆಸ್ಪತ್ರೆಗಳಲ್ಲಿ ಆಯುಷ್ ವಿಭಾಗಗಳ ಪ್ರಾರಂಭ. * ಎಲ್ಲಾ ಇಎಸ್ಐ ಆಸ್ಪತ್ರೆಗಳಲ್ಲಿ ಡಯಾಲಿಸಿಸ್, ಐಸಿಯು, ಎಮ್ಐಸಿಯು, ಪಿಐಸಿಯು ವಿಭಾಗಗಳನ್ನು ಹೊರ ಗುತ್ತಿಗೆ ಮುಖಾಂತರ ನಿರ್ವಹಣೆ.

2017-18ನೇ ಸಾಲಿನಲ್ಲಿ ಕಾರ್ಮಿಕ ಇಲಾಖೆಗೆ ಒಟ್ಟಾರೆಯಾಗಿ 469 ಕೋಟಿ ರೂ. ಒದಗಿಸಲಾಗಿದೆ.

### ಕೌಶಲ್ಯ ಅಭಿವೃದ್ಧಿ

ಕೌಶಲ್ಯಾಭಿವೃದ್ಧಿ ಮಿಷನ್‌ನ್ನು 200 ಕೋಟಿ ರೂ.ಗಳ ಅನುದಾನದೊಂದಿಗೆ ಪ್ರಾರಂಭಿಸಲಾಗುತ್ತಿದ್ದು ಅದು ಈ ಮುಂದಿನ ಅಂಶಗಳನ್ನು ಒಳಗೊಂಡಿರುತ್ತದೆ; i. ಮುಖ್ಯಮಂತ್ರಿಗಳ ಕೌಶಲ್ಯಾಭಿವೃದ್ಧಿ ಕರ್ನಾಟಕ ಕಾರ್ಯಕ್ರಮದಡಿಯಲ್ಲಿ ಬೇಡಿಕೆ ಸಮೀಕ್ಷೆಯನ್ನು ಆಧರಿಸಿ ಪ್ರಸ್ತುತ ಜಾರಿಯಲ್ಲಿರುವ ವಿವಿಧ ಯೋಜನೆಗಳ ಅಡಿಯಲ್ಲಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮದ ಮೂಲಕ 5 ಲಕ್ಷ ಯುವಜನತೆಗೆ ತರಬೇತಿ ನೀಡಲಾಗುವುದು. ಇದರಲ್ಲಿ ಶೇ.20ರಷ್ಟು ಪರಿಶಿಷ್ಟ ಜಾತಿ, ಶೇ.7ರಷ್ಟು ಪರಿಶಿಷ್ಟ ಪಂಗಡ ಹಾಗೂ ಶೇ.15ರಷ್ಟು ಅಲ್ಪಸಂಖ್ಯಾತಯುವಜನರಿಗೆ ತರಬೇತಿ ನೀಡಲಾಗುವುದು. ii. ಯುವ ಜನತೆಯನ್ನು ಸಬಲರನ್ನಾಗಿಸಲು ಮತ್ತು ಅವರಿಗೆ ಲಾಭದಾಯಕ ಉದ್ಯೋಗಾವಕಾಶವನ್ನು ಕಲ್ಪಿಸಲು ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ವೃತ್ತಿಪರ ಕೌಶಲ್ಯ ತರಬೇತಿಯನ್ನು ನೀಡಲು ಉದ್ದೇಶಿಸಲಾಗಿದ್ದು, ಈ ಯೋಜನೆಯಡಿ 2.50 ಲಕ್ಷ ಯುವಜನರಿಗೆ ಕೌಶಲ್ಯ ತರಬೇತಿ ನೀಡಲಾಗುವುದು ಮತ್ತು ಅವರ ಪೈಕಿ ಕನಿಷ್ಠ ಶೇ.70 ರಷ್ಟು ಯುವಜನತೆಗೆ ಉದ್ಯೋಗಾವಕಾಶವನ್ನು ಕಲ್ಪಿಸಲಾಗುವುದು. iii. "ಮುಖ್ಯಮಂತ್ರಿಗಳ ಕರ್ನಾಟಕ ಜೀವನೋಪಾಯ ಯೋಜನೆ"ಯನ್ನು "ಸ್ಥಳೀಯ ಮಟ್ಟದಿಂದ ಜಾಗತಿಕ ಮಟ್ಟದವರೆಗಿನ" ಉಪಕ್ರಮವಾಗಿ ಪ್ರಾರಂಭಿಸಲಾಗುವುದು. 50,000 ಸ್ಥಳೀಯ ಕುಶಲ ಕರ್ಮಿಗಳಿಗೆ ವಿಶೇಷವಾಗಿ ಮಹಿಳೆಯರಿಗೆ ಸ್ಥಳೀಯ ಕರಕುಶಲ, ಕೈಮಗ್ಗ ಮುಂತಾದ ವಲಯವನ್ನು ಉತ್ತೇಜಿಸಿ ಜೀವನೋಪಾಯ ಕಲ್ಪಿಸಲು ಕೌಶಲ್ಯ ತರಬೇತಿ, ವಿನ್ಯಾಸ ನಿರ್ಮಾಣಕ್ಕೆ ನೆರವು ಮತ್ತು ಮಾರುಕಟ್ಟೆ ಸೌಲಭ್ಯ



ಕಲ್ಪಿಸಲಾಗುವುದು. iv. ಕರ್ನಾಟಕ ಅಪ್ರೆಂಟಿಷಿಪ್ ಯೋಜನೆಯಡಿ ಅಪ್ರೆಂಟಿಷಿಪ್ ತರಬೇತಿ ಕಾರ್ಯಕ್ರಮವನ್ನು ಉತ್ತೇಜಿಸಲು ರಾಜ್ಯ ಸರ್ಕಾರವು ಹಂತ ಹಂತವಾಗಿ 50,000 ವಿದ್ಯಾರ್ಥಿಗಳಿಗೆ ಅಪ್ರೆಂಟಿಷಿಪ್ ತರಬೇತಿ ನೀಡಲು ಪ್ರತಿ ಅಪ್ರೆಂಟೀಸ್‌ಗೆ ಮಾಹೆಯಾನ ತಲಾ 1,000 ರೂ.ಗಳ ಸ್ಟೈಫೆಂಡ್‌ನ್ನು ಮರುಪಾವತಿಸಲಾಗುವುದು. v. ಉದ್ಯೋಗಾವಕಾಶಕ್ಕೆ ಒತ್ತು ನೀಡುವುದರೊಂದಿಗೆ ಗುಣಮಟ್ಟ, ಸುಸ್ಥಿರತೆ, ಪ್ರವೇಶಾವಕಾಶ ಮತ್ತು ಕೈಗಾರಿಕಾ ಸಂಪರ್ಕಗಳನ್ನು ಹೆಚ್ಚಿಸಲು ಕೌಶಲ್ಯ ತರಬೇತಿಗೆ ಸಂಬಂಧಿಸಿದಂತೆ "ಪ್ರಾವೀಣ್ಯತಾ ಕೇಂದ್ರ"ಗಳನ್ನು ಸ್ಥಾಪಿಸಲಾಗುವುದು.

ಉದ್ಯಮಗಳ ಬೇಡಿಕೆಗಳಿನುಗುಣವಾಗಿ ಕೌಶಲ್ಯ ಹೊಂದಿದ ವ್ಯಕ್ತಿಗಳನ್ನು ಒದಗಿಸುವ ನಿಟ್ಟಿನಲ್ಲಿ ಅಗತ್ಯ ಮೂಲ ಸೌಕರ್ಯ ಮತ್ತು ಮಾನವ ಸಂಪನ್ಮೂಲಗಳನ್ನು ಒದಗಿಸುವ ಮೂಲಕ 34 ಉದ್ಯೋಗ ವಿನಿಮಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ. vi. ವೃತ್ತಿಪರ ತರಬೇತಿ, ತರಬೇತುದಾರರ ತರಬೇತಿ, ಪಠ್ಯ ಕ್ರಮದ ಅಭಿವೃದ್ಧಿ ಇತ್ಯಾದಿಗಳ ಸಂಶೋಧನೆಯನ್ನು ಉತ್ತೇಜಿಸಲು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಯೋಜನೆಯಡಿ ಕೌಶಲ್ಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುವುದು. vii. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಉದ್ಯಮಿಗಳ ಹಾಗೂ ಉದ್ದಿಮೆದಾರರ ಸಂಘದ ವತಿಯಿಂದ ಸ್ಥಾಪಿಸಲಾಗುವ ಕೌಶಲ್ಯಾಭಿವೃದ್ಧಿ ಕೇಂದ್ರಗಳ ವಿಸ್ತರಣೆಗಾಗಿ 5 ಕೋಟಿ ರೂ.ಗಳ ಅನುದಾನವನ್ನು ನೀಡಲಾಗುವುದು.

ಸರ್ಕಾರಿ ಅಥವಾ ಅನುದಾನಿತ ಐಟಿಐಗಳಿಲ್ಲದ ತಾಲ್ಲೂಕುಗಳಾದ ಚಿಂತಾಮಣಿ, ಗುಬ್ಬಿ, ಕಾರ್ಕಳ, ನರಸಿಂಹರಾಜಪುರ, ಮೂಡಿಗೆರೆ, ರಾಯಬಾಗ, ಯಲ್ಲಾಪುರ, ಮುಧೋಳ, ಶಹಪುರ, ಸುರಪುರ ಮತ್ತು ಮಾನ್ವಿಯಲ್ಲಿ ಹೊಸ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು.

2017-18ನೇ ಸಾಲಿನಲ್ಲಿ ಕೌಶಲ್ಯ ಅಭಿವೃದ್ಧಿ ಇಲಾಖೆಗೆ ಒಟ್ಟಾರೆಯಾಗಿ 1,332 ಕೋಟಿ ರೂ. ಒದಗಿಸಲಾಗಿದೆ.

### ಕನ್ನಡ ಮತ್ತು ಸಂಸ್ಕೃತಿ

ಸೃಜನಶೀಲ ಸಾಹಿತ್ಯ ಪ್ರಕಾರದಲ್ಲಿ ಮಕ್ಕಳ ಪ್ರತಿಭೆಯನ್ನು ಪ್ರೋತ್ಸಾಹಿಸಲು, ಯುವ ಮತ್ತು ಉದಯೋನ್ಮುಖ ಬರಹಗಾರರಿಗೆ ನೆರವು ನೀಡಲು, ಮಕ್ಕಳು ಎದುರಿಸುತ್ತಿರುವ ಸವಾಲುಗಳು ಮತ್ತು ಸಮಸ್ಯೆಗಳ ಕುರಿತಾದ ವಸ್ತು ವಿಷಯಗಳಿಗೆ ಸಂಬಂಧಪಟ್ಟಂತೆ ರಂಗ ನಾಟಕಗಳನ್ನು ರಚಿಸಲು 3 ಕೋಟಿ ರೂ.ಗಳ ವೆಚ್ಚದಲ್ಲಿ ಒಂದು ವೇದಿಕೆಯನ್ನು ಸೃಷ್ಟಿಸಲಾಗುವುದು. ಚಾಲುಕ್ಯ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಾಗೂ ಕನ್ನಡ ಸಾಹಿತ್ಯ ಪೋಷಕಿಯಾಗಿದ್ದ ಅತ್ತಿಮಬ್ಬೆಯವರ ಸ್ಥಳವಾದ ಲಕ್ಕುಂಡಿಯನ್ನು ಅಭಿವೃದ್ಧಿಪಡಿಸಲು ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರವನ್ನು 3 ಕೋಟಿ ರೂ.ಗಳ ವೆಚ್ಚದಲ್ಲಿ ರಚಿಸಲಾಗುವುದು. ಬಯಲಾಟ ಕಲಾಪ್ರಕಾರಗಳನ್ನುಸಂರಕ್ಷಿಸಿ ಪ್ರಚುರಪಡಿಸಲು ಉತ್ತರ ಕರ್ನಾಟಕದಲ್ಲಿ ಪ್ರತ್ಯೇಕ ಬಯಲಾಟ ಅಕಾಡೆಮಿಯನ್ನು ಸ್ಥಾಪಿಸಲಾಗುವುದು. ಶ್ರೀ ಎಂ.ಎಂ. ಕಲ್ಬುರ್ಗಿಯವರ ಸಮಗ್ರ ಸಾಹಿತ್ಯ ಕೃತಿಗಳನ್ನು ವಿಜಯಪುರದ ಫ. ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಮುಖಾಂತರ ಪ್ರಕಟಿಸಲಾಗುವುದು. ಇಲಾಖೆಯು ಜವಾಹರಲಾಲ್ ನೆಹರು ವಿಶ್ವ ವಿದ್ಯಾಲಯದಲ್ಲಿ ಸ್ಥಾಪಿಸಿರುವ ಕನ್ನಡ ಅಧ್ಯಯನ ಪೀಠವನ್ನು ನಿರ್ವಹಿಸಲು ಮೂಲ ನಿಧಿಯನ್ನು ಸೃಜಿಸಲಾಗುವುದು. ಇದಕ್ಕಾಗಿ 5 ಕೋಟಿರೂ.ಗಳನ್ನು ಒದಗಿಸಲಾಗುವುದು.

ಸ್ವಾತಂತ್ರ್ಯ ಹೋರಾಟಗಾರ ಶ್ರೀ ಕೊಲ್ಲೂರು ಮಲ್ಲಪ್ಪನವರ ಸ್ಮರಣಾರ್ಥ ಯಾದಗಿರಿಯಲ್ಲಿ ಒಂದು ಸ್ಮಾರಕವನ್ನು ನಿರ್ಮಿಸಲು 2 ಕೋಟಿ ರೂ.ಗಳನ್ನು ಒದಗಿಸಲಾಗುವುದು. ರಾಜ್ಯದ ಮೊದಲ ಮುಖ್ಯಮಂತ್ರಿಯಾಗಿ ಹಾಗೂ ಕೇಂದ್ರ ಮಂತ್ರಿಯಾಗಿ ಅವಿಸ್ಮರಣೀಯ ಸೇವೆ ಸಲ್ಲಿಸಿರುವ ಶ್ರೀ ಕೆ.ಸಿ. ರೆಡ್ಡಿಯವರ ಸ್ಮರಣಾರ್ಥ ಅವರ ಸ್ಮಾರಕವನ್ನು 2 ಕೋಟಿ ರೂ.ಗಳಲ್ಲಿ ಸ್ಥಾಪಿಸಲಾಗುವುದು. ಗಡಿ

ಪ್ರದೇಶ ಅಭಿವೃದ್ಧಿ ಮಂಡಳಿಗೆ 50 ಕೋಟಿ ರೂ.ಗಳನ್ನು ನೀಡಲಾಗುವುದು.

12ನೇ ಶತಮಾನದಲ್ಲಿ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಇತ್ಯಾದಿ ಶರಣರು ಸಮಾಜಕ್ಕೆ ನೀಡಿದ ತತ್ವ, ವಿಚಾರಧಾರೆಗಳ ಬಗ್ಗೆ ಅಧ್ಯಯನ ನಡೆಸಲು ಇವರುಗಳ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸಲಾಗುವುದು. ಈ ಕ್ಷೇತ್ರದ ಅಭಿವೃದ್ಧಿಗಾಗಿ ಮತ್ತು ಭಕ್ತಾದಿಗಳಿಗೆ ವಸತಿ ಇನ್ನಿತರೆ ಮೂಲಸೌಕರ್ಯ ಕಲ್ಪಿಸಲು 3 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಛತ್ರಪತಿ ಶಿವಾಜಿರವರ ತಂದೆಯಾದ ಶ್ರೀ ಶಹಾಜಿ ಮಹಾರಾಜರ ಸಮಾಧಿ ಸ್ಥಳ ಅಭಿವೃದ್ಧಿ ಮತ್ತು ಅದನ್ನು ಪ್ರವಾಸಿ ತಾಣವನ್ನಾಗಿ ಮಾಡಲು 2 ಕೋಟಿ ರೂ. ಅನುದಾನ ಒದಗಿಸಲಾಗುವುದು.

2017–18ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಒಟ್ಟಾರೆಯಾಗಿ 424 ಕೋಟಿ ರೂ. ಒದಗಿಸಲಾಗಿದೆ.

### ಯುವ ಸಬಲೀಕರಣ ಮತ್ತು ಕ್ರೀಡೆ

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಸಾಧನೆ ತೋರಲು ಬೆಂಬಲ ನೀಡುವ ಉದ್ದೇಶದಿಂದ 1000 ಪೂರ್ವಾರ್ಹತೆ ಪಡೆದ ಪ್ರತಿಭಾನ್ವಿತ ಕ್ರೀಡಾಪಟುಗಳನ್ನು ಗುರುತಿಸಿ ಅವರಿಗೆ ತಲಾ 1 ಲಕ್ಷ ರೂ. ನೆರವು ನೀಡಲು 10 ಕೋಟಿ ರೂ.ಗಳನ್ನು ಒದಗಿಸಲಾಗುವುದು. ತಲಾ 1 ಕೋಟಿ ರೂ.ಗಳ ವೆಚ್ಚದಲ್ಲಿ ಬೆಂಗಳೂರಿನ ವಿದ್ಯಾನಗರದಲ್ಲಿ ಬಾಸ್ಕೆಟ್ ಬಾಲ್, ಉಡುಪಿಯಲ್ಲಿ ಈಜು, ಮೈಸೂರಿನಲ್ಲಿ ಟೆನಿಸ್ ಮತ್ತು ಚಿತ್ರದುರ್ಗದಲ್ಲಿ ಆರೋಹಣ ಹೀಗೆ ಒಟ್ಟು ನಾಲ್ಕು ಕ್ರೀಡಾ ಅಕಾಡೆಮಿಗಳನ್ನು ಸ್ಥಾಪಿಸಲಾಗುವುದು.

ಪ್ರತಿಯೊಂದು ವಿಭಾಗದಲ್ಲಿ ಮಹಿಳಾ ಅಥ್ಲೀಟ್‌ಗಳಿಗಾಗಿ ತಲಾ 1 ಕೋಟಿ ರೂ. ಗಳ ವೆಚ್ಚದಲ್ಲಿ ಪ್ರತ್ಯೇಕ ಸಂಪೂರ್ಣ ಸುಸಜ್ಜಿತ ಕ್ರೀಡಾ ವಿದ್ಯಾರ್ಥಿ ನಿಲಯಗಳ ಸೌಲಭ್ಯವನ್ನು ಕಲ್ಪಿಸಲಾಗುವುದು. ಬೆಳಗಾವಿ ಮತ್ತು ಮೈಸೂರಿನಲ್ಲಿ ಆಧುನಿಕ ಜಿಮ್ನಾಸ್ಟಿಕ್ ಸೌಲಭ್ಯವನ್ನು ಕಲ್ಪಿಸಲು ತಲಾ 2 ಕೋಟಿ ರೂ.ಗಳಂತೆ ಒಟ್ಟು 4 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು. ವಿಕಲಚೇತನ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ



ನಿಟ್ಟಿನಲ್ಲಿ, ಕ್ರೀಡಾ ಕಿಟ್‌ಗಳನ್ನು ಒದಗಿಸಲು 2 ಕೋಟಿ ರೂ.ಗಳು ಮತ್ತು ವಿಕಲಚೇತನ ಸ್ನೇಹಿ ಕ್ರೀಡಾ ಸೌಕರ್ಯವನ್ನು ಕಲ್ಪಿಸಲು 2 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು. ಪ್ರತಿ ವರ್ಷ 10 ಜನ ಕ್ರೀಡಾ ಪ್ರವರ್ತಕರನ್ನು ಗುರುತಿಸಿ, ಗೌರವಿಸಲು ಪ್ರಸಕ್ತ ವರ್ಷದಿಂದ ತಲಾ 5 ಲಕ್ಷ ರೂ.ಗಳ 'ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ'ಯನ್ನು ಪ್ರತಿಷ್ಠಾಪಿಸಲಾಗುವುದು. ಪ್ರಗತಿಯಲ್ಲಿರುವ ಎಲ್ಲಾ ತಾಲ್ಲೂಕು ಕ್ರೀಡಾಂಗಣ ಕಾಮಗಾರಿಗಳನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಲಾಗುವುದು. ಈ ಸಂಬಂಧ 20 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು. ಗ್ರಾಮೀಣ ಯುವಜನತೆಯು ಆರೋಗ್ಯಕರ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸಹಾಯಕವಾಗುವ ವಾತಾವರಣವನ್ನು ಸೃಜಿಸಲು "ಯುವ ಚೈತನ್ಯ" ಎಂಬ ಒಂದು ಹೊಸ ಯೋಜನೆಯನ್ನು ಪ್ರಾರಂಭಿಸಲಾಗುವುದು.

ಮಾಜಿ ರಾಜ್ಯ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಕುಸ್ತಿ ಪೈಲ್ವಾನರುಗಳಿಗೆ ನೀಡುತ್ತಿರುವ ಮಾಸಾಶನವನ್ನು ಕ್ರಮವಾಗಿ 1500 ರೂ.ಗಳಿಂದ 2500 ರೂ.ಗಳಿಗೆ, 2000 ರೂ.ಗಳಿಂದ 3000 ರೂ.ಗಳಿಗೆ ಹಾಗೂ 3000 ರೂ.ಗಳಿಂದ 4000 ರೂ. ಗಳಿಗೆ ಹೆಚ್ಚಿಸಲಾಗುವುದು.

2017–18ನೇ ಸಾಲಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡೆ ಇಲಾಖೆಗೆ ಒಟ್ಟಾರೆಯಾಗಿ 285 ಕೋಟಿ ರೂ. ಒದಗಿಸಲಾಗಿದೆ.

### ಆಹಾರ ಮತ್ತು ನಾಗರಿಕ ಸರಬರಾಜು

ನಾರಿ ನಿಕೇತನ, ವೃದ್ಧಾಶ್ರಮ ಅಂಧ ಮಕ್ಕಳ ಶಾಲೆ, ಬಡ ವಿದ್ಯಾರ್ಥಿ ನಿಲಯ ಭಿಕ್ಷುಕರ ಪುನರ್ವಸತಿ ಕೇಂದ್ರಗಳಿಗೆ ಅನ್ನಭಾಗ್ಯ ಮಾದರಿಯಂತೆಯೇ ಉಚಿತವಾಗಿ ಆಹಾರ ಧಾನ್ಯ ನೀಡಲಾಗುವುದು. ರಾಜ್ಯದ ಅನಿಲರಹಿತ ಬಡಕುಟುಂಬಗಳಿಗೆ ಉಚಿತವಾಗಿ ಅನಿಲ ಸಂಪರ್ಕ ಒದಗಿಸಲು ಹಾಗೂ ರಾಜ್ಯವನ್ನು ಪಡಿತರ ಸೀಮೆಎಣ್ಣೆ ಮುಕ್ತ ರಾಜ್ಯವನ್ನಾಗಿ ಮಾಡಲು "ಅನಿಲ ಭಾಗ್ಯ" ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಇದರಲ್ಲಿ 5 ಲಕ್ಷ ಅರ್ಹ ಬಡಕುಟುಂಬಗಳಿಗೆ ಉಚಿತವಾಗಿ ಅನಿಲ ಸಂಪರ್ಕಕ್ಕಾಗಿ ಪ್ರತಿ ಫಲಾನುಭವಿಗೆ 1600 ರೂ. ಸಹಾಯಧನ ವಿತರಣೆ ಹಾಗೂ ಅನಿಲ ಸೌಲಭ್ಯ ಹೊಂದಿದ ಗ್ರಾಮೀಣ ಪ್ರದೇಶದ ಪಡಿತರ ಚೀಟಿದಾರರಿಗೆ, ತಮಗೆ ಹಂಚಿಕೆಯಾದ ಸೀಮೆಎಣ್ಣೆ ಅಥವಾ ಉಚಿತ ರೀಚಾರ್ಜೆಬಲ್ ಎಲ್.ಇ.ಡಿ. ಸೆಟ್‌ಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಲಾಗುವುದು.

2017–18ನೇ ಸಾಲಿನಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ಒಟ್ಟಾರೆಯಾಗಿ 3,636 ಕೋಟಿ ರೂ. ಒದಗಿಸಲಾಗಿದೆ.

### ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ನಮ್ಮ ಗ್ರಾಮ ನಮ್ಮ ಯೋಜನೆಗಾಗಿ 20 ಕೋಟಿ ರೂ. ಗಳನ್ನು ಒದಗಿಸಲಾಗುವುದು. ಗ್ರಾಮ ಪಂಚಾಯಿತಿಗಳಲ್ಲಿ ತಯಾರು ಮಾಡಿರುವ ಯೋಜನೆಗಳನ್ನು ಕ್ರೋಢೀಕರಿಸಿ ತಾಲ್ಲೂಕು ಮತ್ತು ಜಿಲ್ಲಾ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಲಾಗುವುದು. ಮುಂದಿನ ಐದು ವರ್ಷದ ಅವಧಿಗೆ ಗುರುತಿಸಲಾಗಿದ್ದ ಒಟ್ಟು 22.5 ಲಕ್ಷ ಚಟುವಟಿಕೆಗಳಲ್ಲಿ ಪ್ರಸಕ್ತ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ 3.9 ಲಕ್ಷ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು.

ಗ್ರಾಮೀಣ ನೀರು ಸರಬರಾಜು ಯೋಜನೆಗಾಗಿ 2200 ಕೋಟಿ ರೂ.ಗಳನ್ನು ನೀಡಲಾಗುವುದು. ಪ್ರಸಕ್ತ ಸಾಲಿನಲ್ಲಿ 2500 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗುವುದು.

ಗ್ರಾಮೀಣ ನೈರ್ಮಲ್ಯವನ್ನು ಕಾಪಾಡಲು ಹಾಗೂ ರಾಜ್ಯವನ್ನು ಬಯಲು ಬಹಿರ್ದೆಸೆ ಮುಕ್ತವಾಗಿಸಲು 1585 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಇದರಲ್ಲಿ ಶೌಚಾಲಯ ರಹಿತ ಎಲ್ಲಾ ಗ್ರಾಮೀಣ ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯಕ್ಕಾಗಿ ಪ್ರೋತ್ಸಾಹಧನ ನೀಡಲಾಗುವುದು ಮತ್ತು ಸ್ಥಳದ ಸಮಸ್ಯೆಯಿರುವ ಕಡೆ

ಸಾಮೂಹಿಕ ಶೌಚಾಲಯ ಸಂಕೀರ್ಣ ನಿರ್ಮಿಸಲಾಗುವುದು. ಗ್ರಾಮ ಸ್ವಚ್ಛತೆಯನ್ನು ಕಾಪಾಡಲು ಘನ ಮತ್ತು ದ್ರವ್ಯ ತ್ಯಾಜ್ಯಗಳ ನಿರ್ವಹಣೆ ಮಾಡಲಾಗುವುದು.

ರಾಷ್ಟ್ರೀಯ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ಮಾರ್ಗಸೂಚಿಯಂತೆ "ಗ್ರಾಮೀಣ ರಸ್ತೆ ನಿರ್ವಹಣಾ ನೀತಿ" ಯನ್ನು ಜಾರಿಗೊಳಿಸಲಾಗುವುದು. ನಮ್ಮ ಹೊಲ ನಮ್ಮ ದಾರಿ ಯೋಜನೆಯಡಿ ರಾಜ್ಯದ ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 25 ಕಿ.ಮೀ ಉದ್ದದ ಹೊಲಗಳಿಗೆ ಹೋಗುವ ಮಣ್ಣಿನ ರಸ್ತೆಯನ್ನು ನರೇಗಾ ವತಿಯಿಂದ ರೈತರ ಸಹಭಾಗಿತ್ವದೊಂದಿಗೆ ನಿರ್ಮಿಸಲಾಗುವುದು. ಇದಕ್ಕಾಗಿ 100 ಕೋಟಿ ರೂ.ಗಳನ್ನು ಒದಗಿಸಲಾಗುವುದು

ಮುಖ್ಯಮಂತ್ರಿಗಳ ಗ್ರಾಮ ವಿಕಾಸ ಯೋಜನೆಯಡಿ ಪ್ರತಿ ಗ್ರಾಮಕ್ಕೆ 1 ಕೋಟಿ ರೂ.ಗಳಂತೆ ನೀಡುವ ಅನುದಾನದ ಜೊತೆಗೆ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಒಗ್ಗೂಡಿಸಿ 1000 ಗ್ರಾಮಗಳನ್ನು ಸರ್ವತೋಮುಖವಾಗಿ 2 ವರ್ಷಗಳಲ್ಲಿ ಅಭಿವೃದ್ಧಿಪಡಿಸಲು ಪ್ರಸ್ತಾಪಿಸಿದೆ. ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ-IVನ್ನು ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಿ, 4,386 ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುವುದು. ಇದಕ್ಕಾಗಿ ಈ ಸಾಲಿನಲ್ಲಿ 1765 ಕೋಟಿ ರೂ. ಗಳನ್ನು ಒದಗಿಸಲಾಗುವುದು.

ದಿನಕ್ಕೆ 1000 ಲೀಟರ್ ಸಾಮರ್ಥ್ಯದ ಜೈವಿಕ ಇಂಧನ ಉತ್ಪಾದನಾ ಘಟಕ ಹಾಗೂ ಕೇಂದ್ರೀಯ ಜೈವಿಕ ಇಂಧನ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯ ಆರಂಭಿಸಲು 5 ಕೋಟಿ ರೂ.ಗಳನ್ನು ಒದಗಿಸಲು ಪ್ರಸ್ತಾಪಿಸಿದೆ.

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ 2017-18ನೇ ಸಾಲಿನಲ್ಲಿ –

* 12 ಕೋಟಿ ಮಾನವ ದಿನಗಳ ಸೃಜನೆಯ ಗುರಿ * ರಾಷ್ಟ್ರೀಯ ಜೀವನೋಪಾಯ ಯೋಜನೆಯ ಸಹಯೋಗದೊಂದಿಗೆ ಉತ್ಪಾದನಾ ಅಥವಾ ಸೇವಾ ಚಟುವಟಿಕೆಗಳನ್ನು ಮಹಿಳಾ ಸ್ವಸಹಾಯ ಗುಂಪುಗಳ ಮೂಲಕ ಕೈಗೊಳ್ಳಲು ಅನುಕೂಲವಾಗುವಂತೆ ಮಹಿಳಾವರ್ಕ್‌ಶೆಡ್‌ಗಳ ನಿರ್ಮಾಣ



* ಸ್ಥಳಾವಕಾಶ ಕೊರತೆಯಿರುವ ಕುಟುಂಬಗಳ ಪಶು / ಜಾನುವಾರುಗಳಿಗೆ ಅನುಕೂಲವಾಗುವಂತೆ ಗ್ರಾಮಗಳಲ್ಲಿ ಸಮುದಾಯ ದನದ ಕೊಟ್ಟಿಗೆ ನಿರ್ಮಾಣಕ್ಕೆ ಅವಕಾಶ. * ತೋಟಗಾರಿಕೆ ಇಲಾಖೆಯ ಕಾರ್ಯಕ್ರಮಗಳ ಒಗ್ಗೂಡಿಸುವಿಕೆಯೊಂದಿಗೆ ಪ್ರತಿ ತಾಲ್ಲೂಕಿಗೆ ಕನಿಷ್ಠ 200 ತೋಟಗಾರಿಕೆ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ 300. ಜಿಲ್ಲಾ ಪಂಚಾಯತಿ ಅಭಿವೃದ್ಧಿ ಅನುದಾನವನ್ನು 2 ಕೋಟಿ ರೂ.ಗಳಿಂದ 4 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು.

ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯತ್ ಚುನಾಯಿತ ಸದಸ್ಯರ ಗೌರವಧನವನ್ನು ಮುಂದಿನಂತೆ ಹೆಚ್ಚಿಸಲಾಗುವುದು.

* ಜಿಲ್ಲಾ ಪಂಚಾಯತ್ ಸದಸ್ಯರು – 3000 ರೂ.ಗಳಿಂದ 5000 ರೂ. * ತಾಲ್ಲೂಕು ಪಂಚಾಯತಿ ಅಧ್ಯಕ್ಷರು * 4500 ರೂ.ಗಳಿಂದ 6000 ರೂ. * ತಾಲ್ಲೂಕು ಪಂಚಾಯತಿ ಉಪಾಧ್ಯಕ್ಷರು * 3000 ರೂ.ಗಳಿಂದ 4000 ರೂ. * ತಾಲ್ಲೂಕು ಪಂಚಾಯತಿ ಸದಸ್ಯರು * 1500 ರೂ.ಗಳಿಂದ 3000 ರೂ. * ಗ್ರಾಮ ಪಂಚಾಯತಿ ಅಧ್ಯಕ್ಷರು * 1000 ರೂ. ಗಳಿಂದ 3000 ರೂ. * ಗ್ರಾಮ ಪಂಚಾಯತಿ ಉಪಾಧ್ಯಕ್ಷರು * 600 ರೂ.ಗಳಿಂದ 2000 ರೂ. * ಗ್ರಾಮ ಪಂಚಾಯತ್ ಸದಸ್ಯರು – 500 ರೂ.ಗಳಿಂದ 1000 ರೂ.

2017-18ನೇ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಒಟ್ಟಾರೆಯಾಗಿ 14,061 ಕೋಟಿ ರೂ. ಒದಗಿಸಲಾಗಿದೆ.

### ಯೋಜನೆ ಮತ್ತು ಪ್ರದೇಶಾಭಿವೃದ್ಧಿ

ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಹಾಗೂ ಪ್ರಾದೇಶಿಕ ಅಸಮತೋಲನಗಳ ಅಂತರವನ್ನು ಸರಿಪಡಿಸಲು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಈ ವರ್ಷ 1,500 ಕೋಟಿ ರೂ.ಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು.

ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ ಮತ್ತು ಕರಾವಳಿ ಪ್ರದೇಶಾಭಿವೃದ್ಧಿ ಮಂಡಳಿಗಳಿಗೆ ಅನುಕ್ರಮವಾಗಿ 60 ಕೋಟಿ, 50 ಕೋಟಿ ಮತ್ತು 20 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಕರ್ನಾಟಕ ಶಾಸಕರ ಕ್ಷೇತ್ರಾಭಿವೃದ್ಧಿ ಕಾರ್ಯಕ್ರಮಕ್ಕಾಗಿ 600 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನವನ್ನು ತಗ್ಗಿಸುವ ಸಲುವಾಗಿ, ವಿಶೇಷ ಅಭಿವೃದ್ಧಿ ಯೋಜನೆಯ ಅನುಷ್ಠಾನವನ್ನು ಮುಂದುವರೆಸಲು ನಿರ್ಧರಿಸಲಾಗಿದೆ. ಈ ಉದ್ದೇಶಕ್ಕಾಗಿ 3000 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಎಲ್ಲಾ 114 ಹಿಂದುಳಿದ ತಾಲ್ಲೂಕುಗಳಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಸುಧಾರಣೆಗೊಳಿಸಲು ಈ ಅನುದಾನವನ್ನು ಬಳಸಿಕೊಳ್ಳಲಾಗುವುದು.

ನಕ್ಸಲ್ ಬಾಧಿತ 9 ತಾಲ್ಲೂಕುಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಕ್ಕಾಗಿ 2.25 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಒದಗಿಸಲಾಗುವುದು.

2017-18ನೇ ಸಾಲಿನಲ್ಲಿ ಯೋಜನೆ ಮತ್ತು ಪ್ರದೇಶಾಭಿವೃದ್ಧಿ ಇಲಾಖೆಗೆ ಒಟ್ಟಾರೆಯಾಗಿ 1,828 ಕೋಟಿ ರೂ. ಒದಗಿಸಲಾಗಿದೆ.

### ನಗರಾಭಿವೃದ್ಧಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅನುಮೋದನೆಗೊಂಡ ಹಾಗೂ ಪ್ರಗತಿಯಲ್ಲಿರುವ ಯೋಜನೆಗಳು

* ಕರ್ನಾಟಕದ ವಾಣಿಜ್ಯ ಉತ್ಪಾದನಾ ವಲಯದಲ್ಲಿ ಬೆಂಗಳೂರು ಸಿಂಹಪಾಲನ್ನು ಹೊಂದಿದೆ. ಇದನ್ನು ಮನಗಂಡು ಬೆಂಗಳೂರಿಗೆ ಅಗತ್ಯವಿರುವ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಗುವುದು. * ಬೆಂಗಳೂರು ನಗರದ ಮೂಲಸೌಕರ್ಯ ಅಭಿವೃದ್ಧಿಗೆ ಹಾಗೂ ಬೆಂಗಳೂರು ನಾಗರಿಕರ ಕಲ್ಯಾಣಕ್ಕಾಗಿ ಕಳೆದ ವರ್ಷ 7300 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ದೂರದೃಷ್ಟಿಯಿಂದ ಈ ಅನುದಾನವನ್ನು 2016–17 ಮತ್ತು 2017–18ನೇ ಸಾಲಿಗೆ ಹಂಚಿಕೆ ಮಾಡಲಾಗಿದ್ದು, ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಅನುಮೋದಿಸಿದ್ದು, ಈ ಕಾಮಗಾರಿಗಳು ಅನುಷ್ಠಾನದ ವಿವಿಧ ಹಂತದಲ್ಲಿವೆ. ಹಂಚಿಕೆಯಾದ ಪೂರ್ಣ ಮೊತ್ತವನ್ನು 2018ರ ಮಾರ್ಚ್ ಹೊತ್ತಿಗೆ ವೆಚ್ಚ ಮಾಡಲಾಗುವುದು.

* ಬಿಬಿಎಂಪಿ ವ್ಯಾಪ್ತಿಯಲ್ಲಿನ ಬೃಹತ್ ಮಳೆ ನೀರು ಚರಂಡಿಗಳ ಅಭಿವೃದ್ಧಿಗಾಗಿ 300 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

50 ಕೋಟಿ ರೂ.ಗಳ ವೆಚ್ಚದಲ್ಲಿ 1000 ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲಾಗುವುದು. ಜನಸಾಮಾನ್ಯರಿಗೆ ಊಟ ಮತ್ತು ಉಪಹಾರವನ್ನು ಕೈಗೆಟುಕುವ ದರದಲ್ಲಿ ಒದಗಿಸುವ ಸಲುವಾಗಿ "ನಮ್ಮ ಕ್ಯಾಂಟೀನ್" ಎಂಬವಿನೂತನ ಯೋಜನೆಯನ್ನು ಪ್ರಾರಂಭಿಸಲಾಗುವುದು. ಈ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳಲ್ಲಿ ಒಂದರಂತೆ ಕ್ಯಾಂಟೀನ್‌ಗಳನ್ನುತೆರೆದು ಇದರಲ್ಲಿ ಬೆಳಗಿನ ಉಪಹಾರ 5 ರೂ.ಗಳಿಗೆ, ಮಧ್ಯಾಹ್ನ ಹಾಗೂ ರಾತ್ರಿ ಊಟ ತಲಾ 10 ರೂ.ಗಳಂತೆ ಒದಗಿಸಲಾಗುವುದು. ಈ ಉದ್ದೇಶಕ್ಕಾಗಿ 100 ಕೋಟಿ ರೂ.ಗಳನ್ನು ನೀಡಲಾಗುವುದು.

### ಬೆಂಗಳೂರು ಮೆಟ್ರೊ ರೈಲು ನಿಗಮ

ಹಂತ–1 : ಯೋಜನೆಯ ಹಂತ–1ರ 42.3 ಕಿ.ಮೀ. ಉದ್ದದ ಇಡೀ ಮಾರ್ಗವನ್ನು 2017ರ ಏಪ್ರಿಲ್‌ಗೆ ಪೂರ್ಣಗೊಳಿಸಲಾಗುವುದು.

ಹಂತ–2 : ಬೆಂಗಳೂರು ಮೆಟ್ರೊ ರೈಲು ಯೋಜನೆಯ 2ನೇ ಹಂತದ ಮಾರ್ಗವು ಒಟ್ಟು 72.095 ಕಿ.ಮೀ. ಗಳಾಗಿದ್ದು, ಇದರ ಅಂದಾಜು ವೆಚ್ಚ 26,405 ಕೋಟಿ ರೂ. ಗಳು ಆಗಿರುತ್ತದೆ. ಈ ಕಾಮಗಾರಿಯ ರೀಚ್–4ರ ವಿಸ್ತರಣೆ (ಪುಟ್ಟೇನಹಳ್ಳಿಯಿಂದ ಅಂಜನಾಪುರ) ಮತ್ತು ರೀಚ್–2ರ ವಿಸ್ತರಣೆಯು (ಮೈಸೂರು ರಸ್ತೆಯಿಂದ ಕೆಂಗೇರಿ) ಕಾಮಗಾರಿಗಳು ಪ್ರಗತಿಯಲ್ಲಿವೆ. ಬೆಂಗಳೂರು ಮೆಟ್ರೊ ರೈಲು ಯೋಜನೆ ಹಂತ–2A ಅಡಿ ಸಿಲ್ಕ್‌ಬೋರ್ಡ್‌ನಿಂದ ಕೆ.ಆರ್. ಪುರಂ ಜಂಕ್ಷನ್ (17 ಕಿ.ಮೀ.ಉದ್ದ)



ವರೆಗೆ ಹೆಚ್ಚುವರಿ ಮಾರ್ಗ ನಿರ್ಮಾಣಕ್ಕಾಗಿ ವಿನೂತನ ವಿಧಾನಗಳಿಂದ ಅನುದಾನ ಒದಗಿಸಲಾಗುತ್ತಿದ್ದು, 4200 ಕೋಟಿ ರೂ. ಗಳ ಘಟಕ ವೆಚ್ಚದಲ್ಲಿ ಈ ಯೋಜನೆಗೆ ಚಾಲನೆ ನೀಡಲಾಗುವುದು.

### ನಗರ ಭೂಸಾರಿಗೆ ನಿರ್ದೇಶನಾಲಯ

ಬೆಂಗಳೂರು ನಗರದ ಸಂಚಾರ ದಟ್ಟಣೆ ನಿವಾರಣೆ ಮಾಡಲು ಉಪನಗರ ರೈಲ್ವೆ ಯೋಜನೆಯನ್ನು ವಿಶೇಷ ಉದ್ದೇಶ ವಾಹಕದ ಮೂಲಕ ಕೈಗೊಳ್ಳಲು ಭಾರತೀಯ ರೈಲ್ವೆ ಮಂತ್ರಾಲಯದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ಯೋಜನೆಯ ಮೊದಲನೇ ಹಂತವನ್ನು 345 ಕೋಟಿ ರೂ. ಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಆರೋಗ್ಯಕರ, ಪರಿಸರ ಸ್ನೇಹಿ ಮೋಟಾರು–ರಹಿತ ಸಾರಿಗೆ ವ್ಯವಸ್ಥೆಯನ್ನು ನಾಗರಿಕರಿಗೆ ಒದಗಿಸುವ ಉದ್ದೇಶದಿಂದ ಬಾಡಿಗೆ ಸೈಕಲ್ ಒದಗಿಸುವ ಯೋಜನೆಯನ್ನು ಮೈಸೂರಿನಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಇದೇ ಯೋಜನೆಯನ್ನು ಬೆಂಗಳೂರು ನಗರದ ಆಯ್ದ ಕ್ಲಸ್ಟರ್‌ಗಳಲ್ಲಿ ಪ್ರಾರಂಭಿಸಲಾಗುವುದು.

### ಪೌರಾಡಳಿತ ನಿರ್ದೇಶನಾಲಯ

ನಗರೋತ್ಥಾನ (ಮಹಾನಗರ ಪಾಲಿಕೆ) ಹಂತ–3 ಯೋಜನೆಯಡಿಯಲ್ಲಿ 1000 ಕೋಟಿ ರೂ.ಗಳ ವೆಚ್ಚದ ಎಲ್ಲಾ ಅನುಮೋದಿತ 1565 ಕಾಮಗಾರಿಗಳನ್ನು ಈ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆ (CMSMTDP) ನಗರೋತ್ಥಾನ (ಪುರಸಭೆ / ನಗರಸಭೆ) ಹಂತ–2 ಯೋಜನೆಯಡಿ 2,060 ಕೋಟಿ ರೂ.ಗಳ ವೆಚ್ಚದ ಎಲ್ಲ ಅನುಮೋದಿತ 2050 ಕಾಮಗಾರಿಗಳನ್ನು ಈ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. ನಗರೋತ್ಥಾನ (ಪುರಸಭೆ/ನಗರಸಭೆ) ಹಂತ–3 ಯೋಜನೆಯಡಿ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ನಾಗರಿಕರಿಗೆ ಕುಡಿಯುವ ನೀರು ಮತ್ತು ಮೂಲಭೂತ ಸೌಕರ್ಯಗಳಿಗೆ ಆದ್ಯತೆಯೊಂದಿಗೆ 2,886 ಕೋಟಿ ರೂ.ಗಳ ವೆಚ್ಚದ ಕಾಮಗಾರಿಗಳನ್ನು ಈ ಸಾಲಿನಲ್ಲಿ ಪ್ರಾರಂಭಿಸಲಾಗುವುದು. ರಾಜೀವ್ ಆವಾಸ್ ಯೋಜನೆಯಡಿ 550 ಕೋಟಿ ರೂ.ಗಳ ವೆಚ್ಚದಲ್ಲಿ 22,133 ವಸತಿಗೃಹಗಳ ನಿರ್ಮಾಣವನ್ನು ಈ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

ಎಲ್ಲರಿಗೂ ಸೂರು ಅಭಿಯಾನದಡಿ 2,612 ಕೋಟಿ ರೂ.ಗಳ ವೆಚ್ಚದಲ್ಲಿ 60,000 ಮನೆಗಳ ನಿರ್ಮಾಣವನ್ನು ನಗರ ಸ್ಥಳೀಯ ಸಂಸ್ಥೆಗಳು ಮತ್ತು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುವುದು. ಘನತ್ಯಾಜ್ಯ ನಿರ್ವಹಣಾ ಯೋಜನೆಯಲ್ಲಿ 134 ನಗರ ಸ್ಥಳೀಯ ಸಂಸ್ಥೆಗಳಲ್ಲಿ 2017–18ನೇ ಸಾಲಿನಲ್ಲಿ ಕೆಲಸ ಆರಂಭವಾಗಲಿದೆ. ಮುಂದಿನ 2 ವರ್ಷಗಳಲ್ಲಿ 3.29 ಲಕ್ಷಗಳಷ್ಟು ವೈಯಕ್ತಿಕ ಶೌಚಾಲಯಗಳು, 9104 ಸಾಮರ್ಥ್ಯದ ಸಮುದಾಯ ಶೌಚಾಲಯಗಳು, 4,522 ಸಾಮರ್ಥ್ಯದ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸುವ ಗುರಿಯನ್ನು ಹೊಂದಲಾಗಿರುತ್ತದೆ.

'ಅಮೃತ್' ಅಭಿಯಾನದಡಿ 2015–16ನೇ ಸಾಲಿನಿಂದ 2019–20 ರವರೆಗೆ ಒಟ್ಟು 4,953 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ. ಇದರಲ್ಲಿ ರಾಜ್ಯ ಸರ್ಕಾರದ ಪಾಲು 1080 ಕೋಟಿ ಆಗಿದೆ. 2,314 ಕೋಟಿ ರೂ. ಮೊತ್ತದ 36 ಯೋಜನೆಗಳ ಅನುಷ್ಠಾನವನ್ನು ಆರಂಭಿಸಲಾಗುವುದು.

ಜಲನಿಧಿ (ನೀರು / ಒಳಚರಂಡಿ ಸಂಪರ್ಕ ಅನುಮತಿ), ನಿರ್ಮಾಣ್ (ಕಟ್ಟಡ ನಿರ್ಮಾಣ ಅನುಮತಿ), ವ್ಯಾಪಾರ್ (ಉದ್ದಿಮೆ ಪರವಾನಿಗೆ), ಇ–ಆಸ್ತಿ (ಆಸ್ತಿಗಳ ಮಾಲೀಕತ್ವದ ಹಕ್ಕು ವರ್ಗಾವಣೆ) ಮತ್ತು ಜನಹಿತ (ಸಾರ್ವಜನಿಕ ದೂರುಗಳ ನಿರ್ವಹಣೆ) ಗಳಿಗೆ ಸಂಬಂಧಿಸಿದಂತೆ ಆನ್‌ಲೈನ್ ಸ್ವೀಕೃತಿ, ಅನುಮೋದನೆ ಮತ್ತು ಸೇವಾ ವಿತರಣೆಯನ್ನು ಸುಗಮಗೊಳಿಸಲು ಸುಧಾರಿತ 'ವೆಬ್ ಅಪ್ಲಿಕೇಷನ್'ನ್ನು ಜಾರಿಗೆ ತರಲಾಗುವುದು. ಈ ವೆಬ್ ಅಪ್ಲಿಕೇಷನ್ನಿನ ಮೊಬೈಲ್

ವರ್ಶನ್ ಸಹ ಸಿದ್ಧಪಡಿಸಲಾಗುವುದು. ಈ ಸಾಲಿನಲ್ಲಿ ರಾಜ್ಯದ ಎಲ್ಲಾ 274 ನಗರ ಸ್ಥಳೀಯ ಸಂಸ್ಥೆಗಳ ಮಾಸ್ಟರ್ ಪ್ಲಾನ್‌ಗಳನ್ನು ತಯಾರಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು.

**ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**

865.41 ಕೋಟಿ ರೂ.ಗಳ ವೆಚ್ಚದ ಒಟ್ಟಾರೆ 27 ಯೋಜನೆಗಳು (14 ನೀರು ಸರಬರಾಜು ಮತ್ತು 13 ಒಳಚರಂಡಿ ಯೋಜನೆಗಳು)ನ್ನು 2017–18ನೇ ಸಾಲಿನಲ್ಲಿ ಕೈಗೆತ್ತಿಕೊಂಡು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**

3,000 ಫ್ಲ್ಯಾಟ್‌ಗಳ ನಿರ್ಮಾಣ ಮತ್ತು ಹಂಚಿಕೆಯನ್ನು 2017–18ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. ಅನುಷ್ಠಾನದ ಹಂತದಲ್ಲಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 5,000 ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ 166 ಎಕರೆ ವಿಸ್ತೀರ್ಣದ ಭೂಮಿಯಲ್ಲಿ ಕೋನದಾಸಪುರ ಗ್ರಾಮದಲ್ಲಿ ನವೀನ ಮಾದರಿಯ ಟೌನ್‌ಶಿಪ್‌ನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದೆ.

75 ಕೋಟಿ ರೂ.ಗಳ ವೆಚ್ಚದಲ್ಲಿ, 12 ಕೆರೆಗಳ ಸಮಗ್ರ ಅಭಿವೃದ್ಧಿಯನ್ನು ಪೂರ್ಣಗೊಳಿಸಲಾಗಿದೆ. 42 ಕೋಟಿ ರೂ. ಗಳ ಅಂದಾಜು ವೆಚ್ಚದಲ್ಲಿ ಇತರೆ 10 ಕೆರೆಗಳ ಸಮಗ್ರ ಅಭಿವೃದ್ಧಿಯನ್ನು 2017–18ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. 2017–18ನೇ ಸಾಲಿನಲ್ಲಿ ಬೆಳ್ಳಂದೂರು ಮತ್ತು ವರ್ತೂರು ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು. ಹೊರವರ್ತುಲ ರಸ್ತೆಯ ಹೆಬ್ಬಾಳ ಜಂಕ್ಷನ್‌ನಲ್ಲಿ ಕೆಳಸೇತುವೆ ನಿರ್ಮಾಣ ಹಾಗೂ ಮೇಲು ಸೇತುವೆಯ ಅಗಲೀಕರಣ ಕಾರ್ಯವನ್ನು 88 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುವುದು.

**ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ**

2012–13ರಲ್ಲಿ ನೀರಿನ ತಾಂತ್ರಿಕ ಹಾಗೂ ವಾಣಿಜ್ಯ ಸೋರಿಕೆ ಶೇ.49ರಷ್ಟಿದ್ದು, ಈಗ ಶೇ.44ಕ್ಕೆ ಇಳಿಸಲಾಗಿದೆ. ಹಾಗೂ



2017–18ರ ಅಂತ್ಯದ ವೇಳೆಗೆ ಈ ಪ್ರಮಾಣವನ್ನು ಶೇ.40ಕ್ಕೆ ಇಳಿಸಲಾಗುವುದು.

ನಗರದ 110 ಗ್ರಾಮಗಳಿಗೆ 1,886 ಕೋಟಿ ರೂ.ಗಳ ವೆಚ್ಚದಲ್ಲಿ ಕುಡಿಯುವ ನೀರು ಪೂರೈಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಕಾಮಗಾರಿಯನ್ನು ಏಪ್ರಿಲ್ 2017ರಲ್ಲಿ ಪ್ರಾರಂಭಿಸಿ 2 ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

ಜೈಕಾ ಸಹಾಯದೊಂದಿಗೆ 5052 ಕೋಟಿ ರೂ.ಗಳ ವೆಚ್ಚದಲ್ಲಿ ಕಾವೇರಿ 5ನೇ ಹಂತ ಹಾಗೂ 110 ಹಳ್ಳಿಗಳಿಗೆ ಒಳಚರಂಡಿ ವ್ಯವಸ್ಥೆ ಒದಗಿಸುವ ಯೋಜನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ಈ ಸಾಲಿನಲ್ಲಿ ಈ ಯೋಜನೆಗೆ ಚಾಲನೆ ನೀಡಲಾಗುವುದು. ಇದರಿಂದ ನಗರಕ್ಕೆ 775 ದಶಲಕ್ಷ ಲೀಟರ್ ಕುಡಿಯುವ ನೀರು ಕಾವೇರಿ ನದಿಯಿಂದ ಲಭ್ಯ ಮಾಡಲಾಗುವುದು. ರಾಜ್ಯ ಸರ್ಕಾರದ ಮೆಗಾ ಸಿಟಿ ಯೋಜನೆಯಡಿಯಲ್ಲಿ 1209 ಕೋಟಿ ರೂ.ಗಳ ವೆಚ್ಚದಲ್ಲಿ 440 ದಶಲಕ್ಷ ಲೀಟರ್ ಸಾಮರ್ಥ್ಯದ 4 ತ್ಯಾಜ್ಯ ನೀರು ಸಂಸ್ಕರಣ ಘಟಕವನ್ನು ಪ್ರಾರಂಭಿಸಲಾಗುವುದು ಹಾಗೂ ಅಮೃತ್ ಯೋಜನೆಯಡಿಯಲ್ಲಿ 129 ಕೋಟಿ ರೂ.ಗಳ ವೆಚ್ಚದಲ್ಲಿ 75 ದಶ ಲಕ್ಷ ಲೀಟರ್ ಸಾಮರ್ಥ್ಯದ 5 ತ್ಯಾಜ್ಯ ನೀರು ಸಂಸ್ಕರಣ ಘಟಕಗಳನ್ನು ಪ್ರಾರಂಭಿಸಲಾಗುವುದು. ಈ ಕಾಮಗಾರಿಯನ್ನು 2020ರ ವೇಳೆಗೆ ಪೂರ್ಣಗೊಳಿಸಲಾಗುವುದು. ಇದರಿಂದ ನಗರದಲ್ಲಿ ತ್ಯಾಜ್ಯ ನೀರು ಸಂಸ್ಕರಣ ಸಾಮರ್ಥ್ಯವು ಪ್ರಸ್ತುತ 721 ದಶಲಕ್ಷ ಲೀಟರ್ ಸಾಮರ್ಥ್ಯದಿಂದ 1576 ದಶ ಲಕ್ಷ ಲೀಟರ್ ಆಗಲಿದೆ. ಕೊಳಚೆ ಪ್ರದೇಶದ 30X20 ನಿವೇಶನಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ 10,000 ಲೀಟರ್ ನೀರನ್ನು ಪ್ರತಿ ತಿಂಗಳು ಉಚಿತವಾಗಿ ನೀಡಲು ಸರ್ಕಾರವು ತೀರ್ಮಾನಿಸಿದೆ ಹಾಗೂ ಸದರಿ ನಿವಾಸಿಗಳ ಬಾಕಿ ಬಿಲ್ಲನ್ನು ಮನ್ನಾ ಮಾಡಲಾಗುವುದು.

**ಕರ್ನಾಟಕ ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ**

ಕರ್ನಾಟಕ ಸಮಗ್ರ ಮತ್ತು ನಗರ ಜಲ ನಿರ್ವಹಣೆ ಬಂಡವಾಳ ಹೂಡಿಕೆ ಕಾರ್ಯಕ್ರಮದಡಿಯಲ್ಲಿ 2187 ಕೋಟಿ ರೂ.ಗಳ ವೆಚ್ಚದಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಅಭಿವೃದ್ಧಿಯನ್ನು 8 ಪಟ್ಟಣಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ. 4 ಪಟ್ಟಣಗಳಲ್ಲಿ ಒಳಚರಂಡಿ ಕಾಮಗಾರಿ ಈ ವರ್ಷದಲ್ಲಿ ಪೂರ್ಣಗೊಳಿಸಲಾಗುವುದು.

ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕೆ ಕಾರ್ಯಕ್ರಮದಡಿ 12 ಪಟ್ಟಣಗಳಲ್ಲಿ 24X7 ನೀರು ಸರಬರಾಜು ಕಾಮಗಾರಿಗಳು ಮತ್ತು 7 ಪಟ್ಟಣಗಳಲ್ಲಿ ಒಳಚರಂಡಿ ಕಾಮಗಾರಿಗಳನ್ನು 2017–18ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

ಕರ್ನಾಟಕ ನೀರು ಸರಬರಾಜು ಆಧುನೀಕರಣ ಯೋಜನೆ ಅಡಿಯಲ್ಲಿ ಹುಬ್ಬಳ್ಳಿ–ಧಾರವಾಡಕ್ಕೆ 12 ವರ್ಷಗಳಿಗೆ ನೀರು ಸರಬರಾಜು ಮಾಡಲು ಆಪರೇಟರ್ ಗುತ್ತಿಗೆಯನ್ನು 252 ಕೋಟಿ ರೂ.ಗಳಿಗೆ ನೀಡಲಾಗಿದೆ. ಬೆಳಗಾವಿ ಮತ್ತು ಕಲಬುರಗಿ ಗುತ್ತಿಗೆಯನ್ನು 2017–18ನೇ ಸಾಲಿನಲ್ಲಿ ಅಂತಿಮಗೊಳಿಸಲಾಗುವುದು.

ಸ್ಮಾರ್ಟ್ ಸಿಟಿ ಅಭಿಯಾನದಡಿ ಸೇರಿರುವ ಆರು ನಗರಗಳಾದ ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ–ಧಾರವಾಡ, ಶಿವಮೊಗ್ಗ, ಮಂಗಳೂರು ಮತ್ತು ತುಮಕೂರು ನಗರಗಳಿಗೆ 800 ಕೋಟಿ ರೂ. ಗಳನ್ನು ಒದಗಿಸಲಾಗುವುದು. ಕಾಮಗಾರಿಗಳು ಪ್ರಸಕ್ತ ಸಾಲಿನಲ್ಲಿ ಪ್ರಾರಂಭವಾಗಲಿವೆ.

2017–18ನೇ ಸಾಲಿನಲ್ಲಿ ನಗರಾಭಿವೃದ್ಧಿ ಇಲಾಖೆಗೆ ಒಟ್ಟಾರೆಯಾಗಿ 18,127 ಕೋಟಿ ರೂ. ಒದಗಿಸಲಾಗಿದೆ.

**ಕಂದಾಯ**

ಈಗಾಗಲೇ 15 ಜಿಲ್ಲಾಧಿಕಾರಿಗಳ ಕಚೇರಿ, 15 ಉಪವಿಭಾಗಾಧಿಕಾರಿಗಳ ಕಚೇರಿ ಹಾಗೂ 15 ತಾಲ್ಲೂಕು ಕಛೇರಿಗಳಲ್ಲಿ ಕಡಿಮೆ ಕಾಗದ ಬಳಕೆಯ ಕಛೇರಿ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯನ್ನು ಮುಂದಿನ 2 ವರ್ಷಗಳಲ್ಲಿ ಕಂದಾಯ ಇಲಾಖೆಯ ಎಲ್ಲಾ ಕಚೇರಿಗಳಿಗೆ

ವಿಸ್ತರಿಸಲಾಗುವುದು. ಇದಕ್ಕಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಡಿಜಿಟಲ್ ಭೂ ದಾಖಲೆಗಳ ನಿರ್ವಹಣಾ ಯೋಜನೆಯಡಿ (ಡಿ.ಎಲ್. ಆರ್.ಎಂ.ಪಿ) ಕೇಂದ್ರ ಸರ್ಕಾರದ ನೆರವಿನೊಂದಿಗೆ ಈ ಮುಂದಿನ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು:

* ಎಲ್ಲಾ ತಾಲ್ಲೂಕುಗಳ ಹಳೆ ಕಂದಾಯ ದಾಖಲೆಗಳ ಕೊಠಡಿಯನ್ನು ಆಧುನೀಕರಣಗೊಳಿಸಲಾಗುವುದು.

* ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿರುವ ಟಿಪ್ಪಣಿಗಳನ್ನು ಎನ್‌ಐಸಿ ಅಭಿವೃದ್ಧಿ ಪಡಿಸಿದ "ಭೂನಕ್ಷೆ ಅಥವಾ ಕೊಲ್ಯಾಬ್ ಲ್ಯಾಂಡ್" ಸಾಫ್ಟ್‌ವೇರ್ ಬಳಸಿ ಡಿಜಿಟಲೀಕರಣ ಮಾಡಲಾಗುವುದು.

* ಪ್ರಮುಖ ದಾಖಲೆಯಾದ "ಆಕಾರ್ ಬಂದ್"ನ್ನು ಡಿಜಿಟಲೀಕರಣ ಮಾಡಲಾಗುವುದು. ಇದೇ ಉದ್ದೇಶಕ್ಕಾಗಿ ವಿಶೇಷ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗುವುದು. ಈ ಯೋಜನೆಯನ್ನು 2017-18 ರಲ್ಲಿ ಪೂರ್ಣಗೊಳಿಸಲಾಗುವುದು.

ಬನವಾಸಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ಸರ್ವಜ್ಞ ಅಭಿವೃದ್ಧಿ ಪ್ರಾಧಿಕಾರಗಳಿಗೆ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ತಲಾ 5 ಕೋಟಿ ರೂ. ಗಳನ್ನು ಒದಗಿಸಲಾಗುವುದು. ಶಬರಿಮಲೈಗೆ ಭೇಟಿ ನೀಡುವ ಕರ್ನಾಟಕದ 50 ಲಕ್ಷಕ್ಕೂ ಹೆಚ್ಚು ಭಕ್ತಾದಿಗಳ ಅನುಕೂಲಕ್ಕಾಗಿ ವೈದ್ಯಕೀಯ ಸೌಲಭ್ಯಗಳು, ಸಹಾಯವಾಣಿ, ರಕ್ಷಣೆ ಮತ್ತು ನೆರವು ನೀಡಲು ಒಂದು ಉಪ ಕಚೇರಿಯನ್ನು ತೆರೆಯಲಾಗುವುದು. ಶ್ರವಣಬೆಳಗೊಳದಲ್ಲಿ 12 ವರ್ಷಕ್ಕೊಮ್ಮೆ ನಡೆಯುವ ಭಗವಾನ್ ಬಾಹುಬಲಿ ಮಹಾಮಸ್ತಕಾಭಿಷೇಕ ಉತ್ಸವ ಆಚರಣೆಯನ್ನು ವಿಜೃಂಭಣೆಯಿಂದ ನಡೆಸಲು 175 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

ಶ್ರೀ ಮೈಲಾರಲಿಂಗೇಶ್ವರ, ಹಾಗೂ ಶ್ರೀ ದೇವರಗುಡ್ಡ, ಅಭಿವೃದ್ಧಿ ಪ್ರಾಧಿಕಾರವನ್ನು 5 ಕೋಟಿ ರೂ.ಗಳ ಅನುದಾನದಲ್ಲಿ ಮೈಲಾರದಲ್ಲಿ ರಚಿಸಲಾಗುವುದು. 10 ಕೋಟಿ ರೂ.ಗಳ ವೆಚ್ಚದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾವಾರು ಕಾರ್ಯಪಡೆಯನ್ನು ರಚಿಸಿ ರಾಜ್ಯದ ಎಲ್ಲಾ ಕೆರೆಗಳನ್ನು ಅಳತೆ



ಮಾಡಲು ಕ್ರಮಕೈಗೊಳ್ಳಲಾಗುವುದು. ಹೊಸ ತಾಲ್ಲೂಕುಗಳನ್ನು ರಚಿಸಲು ಇರುವ ಬಹುದಿನಗಳ ಬೇಡಿಕೆಯನ್ನು ಈಡೇರಿಸಲು ಹಾಗೂ ಭೌಗೋಳಿಕ ಮತ್ತು ಆಡಳಿತಾತ್ಮಕ ಅಗತ್ಯತೆಗಳನ್ನು ಪರಿಗಣಿಸಿ, ಪ್ರಸಕ್ತ ಸಾಲಿನಲ್ಲಿ 49 ಹೊಸ ತಾಲ್ಲೂಕುಗಳನ್ನು ರಚಿಸಲಾಗುವುದು.

2018 ಮಾರ್ಚ್ ಅಂತ್ಯಕ್ಕೆ ಸುಮಾರು 1100 ದಾಖಲೆರಹಿತ ಜನವಸತಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗುವುದು. ಪ್ರಸ್ತುತ 60 ರಿಂದ 64ರ ವಯೋಮಾನದವರಿಗೆ ನೀಡಲಾಗುತ್ತಿರುವ ವೃದ್ಧಾಪ್ಯ ವೇತನವನ್ನು 200 ರೂ.ಗಳಿಂದ 500 ರೂ.ಗಳಿಗೆ ಹೆಚ್ಚಿಸಲಾಗುವುದು.

2017-18ನೇ ಸಾಲಿನಲ್ಲಿ ಕಂದಾಯ ಇಲಾಖೆಗೆ ಒಟ್ಟಾರೆಯಾಗಿ 5,900 ಕೋಟಿ ರೂ. ಒದಗಿಸಲಾಗಿದೆ.

### ಇಂಧನ

ಯರಮರಸ್ ಯೋಜನೆಯಿಂದ 1600 ಮೆ.ವ್ಯಾ., ಪಾವಗಡದ ಸೌರಶಕ್ತಿ ಇಂಧನ ಪಾರ್ಕನಿಂದ 1000 ಮೆ.ವ್ಯಾ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳಿಂದ 1375 ಮೆ.ವ್ಯಾ. ಸೇರಿದಂತೆ, 2017-18ನೇ ಸಾಲಿನಲ್ಲಿ ಒಟ್ಟಾರೆ 3975 ಮೆ. ವ್ಯಾ. ಸಾಮರ್ಥ್ಯವನ್ನು ಸೇರ್ಪಡೆ ಮಾಡಲು ಉದ್ದೇಶಿಸಲಾಗಿದೆ.

ಬಹುಕಾಲದಿಂದ ಬಾಕಿ ಇರುವ ಗ್ರಾಮ ಪಂಚಾಯತಿಗಳ ವಿದ್ಯುಚ್ಛಕ್ತಿ ಬಾಕಿ ಬಿಲ್‌ಗಳು ಎಸ್ಕಾಂಗಳು ಹಾಗೂ ಕರ್ನಾಟಕ ವಿದ್ಯುತ್ ನಿಗಮಕ್ಕೆ ಬಹಳಷ್ಟು ಆರ್ಥಿಕ ಒತ್ತಡವನ್ನು ಉಂಟು ಮಾಡಿವೆ. 31.3.2015ವರೆಗಿನ ಬಾಕಿ ಇರುವ ಮೊತ್ತ 3766 ಕೋಟಿ ರೂ.ಗಳ ಬಾಕಿಯನ್ನು ಪಾವತಿಸಲು ತೀರ್ಮಾನಿಸಿದ್ದೇವೆ. ಇದರಿಂದಾಗಿ ಉನ್ನತೀಕರಣ ಮತ್ತು ಮೂಲಭೂತ ಸೌಲಭ್ಯಗಳಿಗಾಗಿ ತೊಡಗಿಸಲು ಈ ಕಂಪೆನಿಗಳಿಗೆ ಆರ್ಥಿಕ ಅವಕಾಶ ಕಲ್ಪಿಸಿದಂತಾಗುತ್ತದೆ. ಭಾಗ್ಯ ಜ್ಯೋತಿ ಯೋಜನೆಯಡಿ ಉಚಿತವಾಗಿ ನೀಡುತ್ತಿರುವ ವಿದ್ಯುತ್ ಮಿತಿಯನ್ನು 18 ಯೂನಿಟ್‌ಗಳಿಂದ 40 ಯೂನಿಟ್‌ಗಳಿಗೆ ಹೆಚ್ಚಿಸಲಾಗುವುದು. ವಿದ್ಯುಚ್ಛಕ್ತಿಯ ಸಮರ್ಥ ಬಳಕೆಗೆ ಕ್ರಮಗಳನ್ನು ಕೈಗೊಳ್ಳುವ ಮೂಲಕ ಪ್ರತಿಯೊಂದು ವಿಧಾನಸಭಾ ಸದಸ್ಯರ ಮತ ಕ್ಷೇತ್ರವ್ಯಾಪ್ತಿಯ 5 ಗ್ರಾಮಗಳನ್ನು ಮಾದರಿ ವಿದ್ಯುತ್ ಗ್ರಾಮಗಳನ್ನಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ. ಪ್ರಸರಣ ಜಾಲವನ್ನು ಬಲಪಡಿಸುವ ನಿಟ್ಟಿನಲ್ಲಿ 40 ಹೊಸ ಉಪ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

2017-18ನೇ ಸಾಲಿನಲ್ಲಿ ಇಂಧನ ಇಲಾಖೆಗೆ ಒಟ್ಟಾರೆಯಾಗಿ 14,094 ಕೋಟಿ ರೂ. ಒದಗಿಸಲಾಗಿದೆ. ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ. ರಾಜ್ಯದ ಪ್ರಮುಖ ರಸ್ತೆ ಜಾಲವನ್ನು (ಕೋರ್ ರೋಡ್ ನೆಟ್‌ವರ್ಕ್) ಅಭಿವೃದ್ಧಿಪಡಿಸಲು ಕೆಶಿಪ್-III (ಎಡಿಬಿ 2ನೇ ಲೋನ್) ಅಡಿಯಲ್ಲಿ ಒಟ್ಟು 418.5 ಕಿ.ಮೀ ಉದ್ದದ ರಸ್ತೆಗಳನ್ನು 5,310 ಕೋಟಿ ರೂ. ಯೋಜನಾ ಮೊತ್ತದಲ್ಲಿ ಕೈಗೊಳ್ಳಲಾಗುತ್ತಿದೆ.

### ಮೂಲಸೌಲಭ್ಯ ಅಭಿವೃದ್ಧಿ

* ಯಾದಗಿರಿಯ ರೈಲ್ವೆ ಬೋಗಿ ಕಾರ್ಖಾನೆ ನಿರ್ಮಾಣ ಬಹುತೇಕ ಪೂರ್ಣಗೊಂಡಿದ್ದು, ಇದನ್ನು 2017ರ ಏಪ್ರಿಲ್‌ಗೆ ಮುಗಿಸುವ ನಿರೀಕ್ಷೆಯಿದೆ. ಭೂಸ್ವಾಧೀನಕ್ಕಾಗಿ ಸರ್ಕಾರ 15 ಕೋಟಿ ರೂ. ಬಿಡುಗಡೆ ಮಾಡಿದೆ. * ಹಾಸನ-ಬೆಂಗಳೂರು ರೈಲ್ವೆ ಮಾರ್ಗದ ನಿರ್ಮಾಣ ಕಾರ್ಯವು ಈಗಾಗಲೇ ಪೂರ್ಣಗೊಂಡಿದ್ದು, ಬೀದರ್- ಕಲಬುರ್ಗಿ ಮತ್ತು ರಾಮನಗರ-ಮೈಸೂರು ಜೋಡಿ ಮಾರ್ಗಗಳ ಕಾಮಗಾರಿಗಳನ್ನು 2017ರ ಏಪ್ರಿಲ್‌ಗೆ ಪೂರ್ಣಗೊಳಿಸಲಾಗುವುದು. * ಗಿಣಿಗೇರದಿಂದ ಚಿಕ್ಕಬೆನಕಲ್ ವರೆಗಿನ 27 ಕಿ.ಮಿ. ಮುನಿರಾಬಾದ್-ಮೆಹಬೂಬ್ ನಗರ ರೈಲ್ವೆ ಮಾರ್ಗವು ಪ್ರಸಕ್ತ ವರ್ಷದಲ್ಲಿ ಕಾರ್ಯಾರಂಭ ಮಾಡಲಿದೆ. * ಕುಡಚಿ-ಬಾಗಲಕೋಟೆ ಹೊಸ ರೈಲ್ವೆ ಮಾರ್ಗದಲ್ಲಿ ಬಾಗಲಕೋಟೆಯಿಂದ ಖಜ್ಜಿದೋಣಿವರೆಗಿನ 30 ಕಿ.ಮೀ. ರೈಲ್ವೆ ಮಾರ್ಗವು ಪ್ರಸಕ್ತ ವರ್ಷದಲ್ಲಿ ಕಾರ್ಯಾರಂಭ ಮಾಡಲಿದೆ.

* ಗದಗ–ವಾಡಿ ಹೊಸ ರೈಲ್ವೆ ಮಾರ್ಗದ 156 ಕಿ.ಮಿ. ಉದ್ದದ ಮಾರ್ಗಕ್ಕೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ. ಸರ್ಕಾರ ಈ ಯೋಜನೆಗೆ ಉಚಿತವಾಗಿ ಭೂಮಿಯನ್ನು ನೀಡುತ್ತಿದ್ದು, 1922 ಕೋಟಿ ರೂ.ಗಳ ಯೋಜನಾ ವೆಚ್ಚದ ಶೇ 50 ರಷ್ಟು ಪಾಲನ್ನು ಭರಿಸುತ್ತದೆ.

* ಹುಬ್ಬಳ್ಳಿ ವಿಮಾನ ನಿಲ್ದಾಣದ ಮೇಲ್ದರ್ಜೆ ಕಾಮಗಾರಿಗಳಿಗಾಗಿ 588 ಎಕರೆ ಭೂಮಿಯನ್ನು ಹಾಗೂ ಬೆಳಗಾವಿ ವಿಮಾನ ನಿಲ್ದಾಣ ಮೇಲ್ದರ್ಜೆ ಕಾಮಗಾರಿಗಳಿಗಾಗಿ 370 ಎಕರೆ ಭೂಮಿಯನ್ನು ರಾಜ್ಯ ಸರ್ಕಾರದಿಂದ ಒದಗಿಸಲಾಗಿದೆ. * ಬೆಂಗಳೂರು ನಗರದಲ್ಲಿ ಅಡುಗೆ ಅನಿಲ ವಿತರಣೆ ಯೋಜನೆಯು ಮುಕ್ತಾಯದ ಹಂತದಲ್ಲಿದೆ. ಕೈಗಾರಿಕೆ, ನಗರ ಸಾರಿಗೆ, ಗೃಹ ಬಳಕೆದಾರರು ಪೈಪ್‌ಲೈನ್ ಮೂಲಕ ಅನಿಲ ಪೂರೈಕೆಯ ಅನುಕೂಲ ಪಡೆಯಲಿದ್ದಾರೆ.

ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವಿಸ್ತರಣೆಗಾಗಿ, 286 ಎಕರೆ ಭೂಸ್ವಾಧೀನಕ್ಕಾಗಿ ಭಾರತ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ವಿಸ್ತರಣಾ ಕಾರ್ಯಕ್ಕೆ ರಾಜ್ಯ ಸರ್ಕಾರವು ಅಗತ್ಯ ಸೌಲಭ್ಯ ಕಲ್ಪಿಸಲಿದೆ.

ತದಡಿ ಸಮುದ್ರ ಬಂದರು ಯೋಜನೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಕೈಗೊಳ್ಳಲಾಗುವುದು.

2017–18ನೇ ಸಾಲಿನಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಗೆ ಒಟ್ಟಾರೆಯಾಗಿ 790 ಕೋಟಿ ರೂ. ಒದಗಿಸಲಾಗಿದೆ.

**ವಾಣಿಜ್ಯ ಮತ್ತು ಕೈಗಾರಿಕೆ**

ಚೆನ್ನೈ–ಬೆಂಗಳೂರು–ಚಿತ್ರದುರ್ಗ ಕೈಗಾರಿಕಾ ಕಾರಿಡಾರ್ ಯೋಜನೆಯಡಿಯಲ್ಲಿ ತುಮಕೂರು ಕೈಗಾರಿಕಾ ಘಟಕಕ್ಕಾಗಿ ಕೆಐಎಡಿಬಿಯಿಂದ ಭೂಸ್ವಾಧೀನಕ್ಕಾಗಿ ಒಂದು ಬಾರಿ ಅನುದಾನವಾಗಿ 400 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಇಂಡಿಯನ್ ಮಷಿನ್ ಟೂಲ್ ತಯಾರಕರ ಸಂಸ್ಥೆಯೊಂದಿಗೆ ಸಮಾಲೋಚಿಸಿ ಭಾರತ ಸರ್ಕಾರದ ಭಾರಿ ಕೈಗಾರಿಕೆ ಮಂತ್ರಾಲಯದ ನೆರವಿನೊಂದಿಗೆ ತುಮಕೂರು ಜಿಲ್ಲೆಯ



ವಸಂತ ನರಸಾಪುರದಲ್ಲಿ 542 ಎಕರೆ ಜಮೀನಿನಲ್ಲಿ “ಮಷಿನ್ ಟೂಲ್ ಕೈಗಾರಿಕಾ ಪಾರ್ಕ್”ನ್ನು ಅಭಿವೃದ್ಧಿಪಡಿಸಲು ಪ್ರಸ್ತಾಪಿಸಿದೆ. ರಾಜ್ಯದಲ್ಲಿನ ಇಂಜಿನಿಯರಿಂಗ್ ತಯಾರಿಕಾ ಕೈಗಾರಿಕೆಗಳಿಗೆ ಉತ್ತೇಜನ ನೀಡಲು, ಭಾರತ ಸರ್ಕಾರದೊಂದಿಗೆ ಶೇ.50ರಷ್ಟು ವೆಚ್ಚವನ್ನು ಹಂಚಿಕೊಳ್ಳುವುದರ ಮೂಲಕ ಕೇಂದ್ರ ತಯಾರಿಕಾ ತಂತ್ರಜ್ಞಾನ ಸಂಸ್ಥೆಯ ಸಹಯೋಗದೊಂದಿಗೆ ಅದರ ಆವರಣದಲ್ಲಿ ನಿಖರ ಮಾಪನ ಪ್ರಯೋಗಾಲಯವನ್ನು ಸ್ಥಾಪಿಸಲು ಪ್ರಸ್ತಾಪಿಸಿದೆ.

ರಾಜ್ಯದಲ್ಲಿನ ಔಷಧೀಯ ಮತ್ತು ವೈದ್ಯಕೀಯ ಉಪಕರಣಗಳ ತಯಾರಿಕಾ ಘಟಕಗಳಿಗೆ ಉತ್ತೇಜನ ನೀಡುವುದಕ್ಕಾಗಿ ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಲು ವಲಯ ತಜ್ಞರ ನೇತೃತ್ವದಲ್ಲಿ ಔಷಧೀಯ ಹಾಗೂ ವೈದ್ಯಕೀಯ ಉಪಕರಣ ವಲಯಕ್ಕೆ ಸಂಬಂಧಿಸಿದಂತೆ ಒಂದು ‘ವಿಷನ್ ಗ್ರೂಪ್’ ನ್ನು ರಚಿಸಲು ಪ್ರಸ್ತಾಪಿಸಲಾಗುವುದು.

ಕರ್ನಾಟಕ ರಾಜ್ಯವು ಮುಂದಿನ 20 ವರ್ಷಗಳಲ್ಲಿ ಪ್ರವರ್ಧಮಾನಕ್ಕೆ ಬರಲಿರುವ ಹೈ–ಟೆಕ್ ಮತ್ತು ಮುಂಚೂಣಿ ಕೈಗಾರಿಕೆಗಳಾದ 3 ಡಿ ಪ್ರಿಂಟಿಂಗ್, ರೋಬೋಟಿಕ್ಸ್, ನ್ಯಾನೋ ತಂತ್ರಜ್ಞಾನ, ಐಓಟಿ, ಬಿಗ್ ಡೇಟಾ ವಿಶ್ಲೇಷಣೆ, ಆರ್ಟಿಫೀಷಿಯಲ್ ಇಂಟಲಿಜೆನ್ಸ್ ಮತ್ತು ಮಷೀನ್ ಲರ್ನಿಂಗ್, ಸ್ಟೆಮ್‌ಸೆಲ್ ಸಂಶೋಧನೆ, ಬಿಸ್ಪೋಕ ಡಿಎನ್‌ಎ ಮೆಡಿಸಿನ್ ಮತ್ತು ಇತರ ಕ್ಷೇತ್ರಗಳಿಗಾಗಿ ಕಾರ್ಯ ನೀತಿಯೊಂದನ್ನು ರೂಪಿಸಲು ಉದ್ದೇಶಿಸಿದೆ.

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಉತ್ತೇಜನ ನೀಡಲು ಈ ಮುಂದಿನ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು.

* ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯಮಿಗಳು ಸ್ಥಾಪಿಸುವ ಹೊಸ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಮೊದಲ 5 ವರ್ಷಗಳ ಅವಧಿಗೆ ಯುನಿಟ್‌ಗೆ 2 ರೂ.ಗಳಷ್ಟು ವಿದ್ಯುಚ್ಛಕ್ತಿ ಸಹಾಯಧನ. * ಮೊದಲ ಬಾರಿಗೆ ಸಣ್ಣ ಮತ್ತು ಅತೀ ಸಣ್ಣ ಉದ್ಯಮಗಳನ್ನು ಸ್ಥಾಪಿಸುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಸಾಲ ಪಡೆಯುವ ಸಂದರ್ಭದಲ್ಲಿ ಹಣಕಾಸು ಸಂಸ್ಥೆಗಳು ವಿಧಿಸುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರ ಶುಲ್ಕಗಳನ್ನು ಭರಿಸಲಾಗುವುದು.

* 100 ಸಿ ಮತ್ತು 100 ಡಿ ಮಾದರಿಯ ಶೆಡ್‌ಗಳನ್ನು ರಿಯಾಯಿತಿ ದರದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಕೆ.ಎಸ್.ಎಸ್.ಐ.ಡಿ.ಸಿ ವತಿಯಿಂದ ಸ್ಥಾಪಿಸಲಾಗುವುದು. * 2010–11 ರಿಂದ ದಿನಾಂಕ:31–03–2017 ರವರೆಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯಮಿಗಳು ಬೀಜಧನ ಬಂಡವಾಳ ಯೋಜನೆಯಡಿಯಲ್ಲಿ ಪಡೆದಿರುವ 46 ಕೋಟಿ ರೂ. ಸಾಲ ಮನ್ನಾ ಮಾಡಲಾಗುವುದು.

ಪ್ರಸ್ತುತ ಜಾರಿಯಲ್ಲಿರುವ 99 ವರ್ಷಗಳ ಗುತ್ತಿಗೆ ಅವಧಿಗೆ ಬದಲಾಗಿ 10 ವರ್ಷಗಳ ಗುತ್ತಿಗೆ / ಮಾರಾಟ ಆಧಾರದಲ್ಲಿ ಸಣ್ಣ ಮತ್ತು ಅತೀ ಸಣ್ಣ ಉದ್ಯಮಿಗಳಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಗಳಿಂದ ಎರಡು ಎಕರೆ ವರೆಗಿನ ಕೈಗಾರಿಕಾ ಭೂಮಿ / ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು.

ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಪ್ರಸ್ತುತದಲ್ಲಿ ಶೇ.4ರ ದರದಲ್ಲಿ ನೀಡುತ್ತಿರುವ ಸಾಲದ ಮಿತಿಯನ್ನು 50 ಲಕ್ಷ ರೂ.ಗಳಿಂದ 2 ಕೋಟಿ ರೂ. ಗಳಿಗೆ ಹೆಚ್ಚಿಸಲಾಗುವುದು. ಮಹಿಳಾ ಉದ್ಯಮಿಗಳಿಗಾಗಿ ಪ್ರತ್ಯೇಕವಾಗಿ ಒಂದು ಬಿಸಿನೆಸ್ ಇನ್‌ಕ್ಯೂಬೇಟರ್ ಸ್ಥಾಪಿಸಲಾಗುವುದು.

ನೇಕಾರರ ಪ್ಯಾಕೇಜ್‌ನಲ್ಲಿ 150 ಕೋಟಿ ರೂ.ಗಳನ್ನು ನೀಡಲಾಗುವುದು. ಜಾರಿಯಲ್ಲಿರುವ ಯೋಜನೆಗಳ ಜೊತೆಗೆ ಈ ಮುಂದಿನ ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು.

* ಕೈಮಗ್ಗಗಳಿಗೆ ಎಲೆಕ್ಟ್ರಾನಿಕ್ ಜಕಾರ್ಡ್ ಹಾಗೂ ನ್ಯೂಮ್ಯಾಟಿಕ್ ಸೌಲಭ್ಯ. * ಉಣ್ಣೆ ವಲಯವನ್ನು ಪುನಶ್ಚೇತನ ಮತ್ತು ಬಲವರ್ಧನೆ. * ಕೈಮಗ್ಗ ನೇಕಾರ ಸಹಕಾರ ಸಂಘಗಳಿಗೆ ಆವರ್ತಕ ನಿಧಿಗಳು. * ಲಾ ಟೆನ್ಷನ್ ವಿದ್ಯುತ್ ಪಡೆಯುತ್ತಿರುವ ರೆಪೀಯರ್ ಮಗ್ಗಗಳಿಗೆ ಶೇ.50 ರಷ್ಟು ವಿದ್ಯುತ್ ಸಹಾಯಧನ. * ಮೈಸೂರಿನಲ್ಲಿ ಸಿಲ್ಕ್ ಮೆಗಾ ಕ್ಲಸ್ಟರನ್ನು ಭಾರತ ಸರ್ಕಾರದ ಸಹಯೋಗದೊಂದಿಗೆ ಸ್ಥಾಪನೆ. * ಕೆಎಸ್‌ಟಿಐಡಿಸಿ ಮೂಲಕ ಹಾವೇರಿ, ಹೊಸದುರ್ಗ, ಬನಹಟ್ಟಿ ಮತ್ತು ಗೌರಿಬಿದನೂರುನಲ್ಲಿ ವಿದ್ಯುತ್ ಮಗ್ಗಗಳ ಸಂಕೀರ್ಣವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಹಾಗೂ ಬೆಳಗಾವಿ ಜಿಲ್ಲೆಯ ಪಂತಬಾಳೆಕುಂದ್ರಿಯಲ್ಲಿ ಗೋದಾಮು ಮತ್ತು ನಾಗರೀಕ ಸೌಲಭ್ಯ ಕೇಂದ್ರವನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ.

* ಸಹಕಾರಿ ನೂಲಿನ ಗಿರಣಿಗಳನ್ನು ಪ್ರೋತ್ಸಾಹಿಸಲು ಪ್ರತಿ ಯುನಿಟ್‌ಗೆ 2 ರೂ.ಗಳಂತೆ ವಿದ್ಯುತ್ ಸಹಾಯಧನ ಒದಗಿಸಲಾಗುವುದು. * ಸಹಕಾರಿ ನೂಲಿನ ಗಿರಣಿಗಳು ಕಾಟನ್ ಕಾರ್ಪೋರೇಷನ್ ಆಫ್ ಇಂಡಿಯಾ ರವರಿಂದ ಖರೀದಿಸುವ ಹತ್ತಿಯ ಮೇಲೆಶೇ.5 ರಷ್ಟು ಸಹಾಯಧನ ನೀಡಲಾಗುವುದು. 410. ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಒಂದು ಹೊಸ ನಿರ್ದೇಶನಾಲಯವನ್ನು ಸ್ಥಾಪಿಸಲಾಗುವುದು. 411. 2017-18ನೇ ಸಾಲಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಒಟ್ಟಾರೆಯಾಗಿ 2,250 ಕೋಟಿ ರೂ. ಒದಗಿಸಲಾಗಿದೆ.

## ವಿಜ್ಞಾನ ಮತ್ತು ತಂತ್ರಜ್ಞಾನ

ಸೂಕ್ತ ತಾಂತ್ರಿಕ ಸಂಪನ್ಮೂಲಗಳನ್ನು, ಕೌಶಲ್ಯ ಅಭಿವೃದ್ಧಿಯನ್ನು ಸೃಜಿಸಲು ಮತ್ತು ಉದಯೋನ್ಮುಖ ತಂತ್ರಜ್ಞಾನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಮರ್ಥ್ಯ ನಿರ್ಮಾಣಕ್ಕೆ ಒತ್ತು ನೀಡಲು ಕೈಗಾರಿಕೋದ್ಯಮದ ಸಹಯೋಗದೊಂದಿಗೆ 'ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಡಾಟಾ ಸೈನ್ಸ್ ಆ್ಯಂಡ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಮತ್ತು ಸೈಬರ್ ಸೆಕ್ಯೂರಿಟಿ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಕೌಶಲ್ಯ ಅಭಿವೃದ್ಧಿಗೆ ಒತ್ತು ನೀಡಲು ಭಾರತ ಸರ್ಕಾರ, SCP/TSP, ಕೈಗಾರಿಕೆಗಳ



ವಂತಿಗೆಯಿಂದ ನಿಧಿಗಳನ್ನು ಸಂಗ್ರಹಿಸುವ ಮೂಲಕ ಐಟಿ, ಎಲೆಕ್ಟ್ರಾನಿಕ್ಸ್, ಅನಿಮೇಷನ್ ಮತ್ತು ಇತರ ವಲಯಗಳಲ್ಲಿ 1,10,000 ವ್ಯಕ್ತಿಗಳಿಗೆ ತರಬೇತಿ ನೀಡಲು "ಯುವ ಯುಗ" ಎಂಬ ಹೊಸ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುವುದು. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಉಚಿತ ವೈ-ಫೈ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯನ್ನು ಕಿಯೋನಿಕ್ಸ್ ಸಾರಥ್ಯದಲ್ಲಿ ಖಾಸಗಿ-ಸಹಭಾಗಿತ್ವದ ಮೂಲಕ ವಯಾಬಿಲಿಟಿ ಗ್ಯಾಪ್ ಫಂಡಿಂಗ್ ನೀಡಿ, ಮೊದಲ ಹಂತದಲ್ಲಿ ರಾಜ್ಯದ 2500 ಗ್ರಾಮ ಪಂಚಾಯತಿಗಳಲ್ಲಿ 50 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು.

ಕರ್ನಾಟಕ ಜ್ಞಾನ ಆಯೋಗವು ನಿರ್ಣಯ ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ದತ್ತಾಂಶ ವಿಶ್ಲೇಷಣೆಗಳನ್ನು ಅಳವಡಿಸಿಕೊಳ್ಳಲು ಹಾಗೂ ಭವಿಷ್ಯದ ದೃಷ್ಟಿಯಲ್ಲಿ ಯಾಂತ್ರಿಕ ಬುದ್ಧಿಶಕ್ತಿ ಮತ್ತು ರೊಬೋಟಿಕ್ ಅಭಿವೃದ್ಧಿಯನ್ನು ಗುರುತಿಸಿರುತ್ತದೆ. ಇದರ ಅನುಸಾರವಾಗಿ, ಬೆಂಗಳೂರಿನ ಐಐಐಟಿ ಸಂಸ್ಥೆಯಲ್ಲಿ ಯಾಂತ್ರಿಕ ಬುದ್ಧಿಶಕ್ತಿ ಮತ್ತು ರೋಬೋಟಿಕ್ಸ್ ಕೇಂದ್ರ ಸ್ಥಾಪಿಸಲು ಉದ್ದೇಶಿಸಿದ್ದು, ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ 5 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು.

2017-18ನೇ ಸಾಲಿನಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಒಟ್ಟಾರೆಯಾಗಿ 299 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

## ಇ-ಆಡಳಿತ

2017-18ನೇ ಹಣಕಾಸು ವರ್ಷದಲ್ಲಿ 18ಕ್ಕೂ ಅಧಿಕ ಜಿಲ್ಲಾ ಕೇಂದ್ರಗಳಲ್ಲಿ ಕರ್ನಾಟಕ-ಒನ್ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಪ್ರತಿಯೊಂದು ಜಿಲ್ಲೆಯನ್ನು ಸೇವಾ ಪ್ರಕ್ರಿಯೆಯ ಕಾರ್ಯ ವ್ಯಾಪ್ತಿಗೆ ತರಲಾಗುವುದು

ಕೇಸ್ವಾನ್-2 ಅನ್ನು ಮುಂದಿನ 5 ವರ್ಷಗಳಲ್ಲಿ 800 ಕೋಟಿ ರೂ.ಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು. ಇದರ ವ್ಯಾಪ್ತಿಗೆ ಸೇರ್ಪಡೆಗೊಳ್ಳುವ ಸರ್ಕಾರಿ ಕಚೇರಿಗಳ ಸಂಖ್ಯೆಯು 10,000ಕ್ಕೆ ಹೆಚ್ಚಲಿದೆ. ಈ ಯೋಜನೆಯಿಂದ ಎಲ್ಲಾ ಸರ್ಕಾರಿ ಕಚೇರಿಗಳಿಗೆ ಮತ್ತು ಅವುಗಳ ಅನ್ವಯಿಕಗಳಿಗೆ ಅತ್ಯಂತ ಪ್ರಬಲ ಮತ್ತು ತೀವ್ರಗತಿಯ ಸಂಪರ್ಕ ದೊರೆಯಲಿದೆ.

2017-18ನೇ ಸಾಲಿನಲ್ಲಿ ಇ-ಆಡಳಿತ ಇಲಾಖೆಗೆ ಒಟ್ಟಾರೆಯಾಗಿ 189 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

## ಪ್ರವಾಸೋದ್ಯಮ

ರಾಜ್ಯಾದ್ಯಂತ ಅರಣ್ಯ ಪ್ರವಾಸೋದ್ಯಮ ಮತ್ತು ಚಾರಣ ಪಥಗಳನ್ನು (ಎಕೋ-ಟ್ರೇಲ್ಸ್) ಜನಪ್ರಿಯಗೊಳಿಸಲು, ಕರ್ನಾಟಕದಲ್ಲಿ ನಿರ್ಜನ ಕಾಡು ಪ್ರದೇಶ ಮತ್ತು ವನ್ಯ ಜೀವಿಯನ್ನು ಅನ್ವೇಷಿಸಲು ಪ್ರವಾಸಿಗರಿಗೆ 2017ನೇ ವರ್ಷವನ್ನು "ವನ್ಯಜೀವಿ ವರ್ಷ" ವೆಂದು ಘೋಷಿಸಿದೆ. ಪ್ರವಾಸೋದ್ಯಮ ಮೂಲ ಸೌಕರ್ಯ ಅಭಿವೃದ್ಧಿಗಾಗಿ 385 ಕೋಟಿ ರೂ.ಗಳನ್ನು ಒದಗಿಸಲಾಗುವುದು ಮತ್ತು ಈ ಮುಂದಿನ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು:

ಈ ಮಧ್ಯೆ ಸರ್ಕಾರಿ ನೌಕರರ ಕೋರಿಕೆಯನ್ನು ಪರಿಶೀಲಿಸಲು ವೇತನ ಆಯೋಗ ರಚಿಸಲಾಗುವುದು. ಸ್ವಾತಂತ್ರ ಯೋಧರ ಮಾಸಾಶನವನ್ನು 8000 ರೂ. ಗಳಿಂದ 10,000 ರೂ.ಗಳಿಗೆ ಮತ್ತು ಗೋವಾ ವಿಮೋಚನಾ ಹೋರಾಟಗಾರ ಮಾಸಾಶನವನ್ನು 3,000 ರೂ.ಗಳಿಂದ 4,000 ರೂ.ಗಳಿಗೆ ಹೆಚ್ಚಿಸಲಾಗುವುದು.

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ

ವಿವಿಧ ಇಲಾಖೆಗಳು ಅನುಷ್ಠಾನಗೊಳಿಸಿದ ವಿವಿಧ ಯೋಜನೆಗಳ ಬಗ್ಗೆ ಮಾಹಿತಿಯನ್ನು ಒದಗಿಸಲು ಎಲ್ಲಾ ಜಿಲ್ಲೆಗಳಲ್ಲಿ ಮೂರು ದಿನಗಳ "ಜಿಲ್ಲಾ ಮಾಹಿತಿ ಉತ್ಸವ"ವನ್ನು ಆಯೋಜಿಸಲಾಗುವುದು. ಈ ಉದ್ದೇಶಕ್ಕಾಗಿ 16 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು.

ಮಹಾತ್ಮ ಗಾಂಧೀಜಿಯವರ 150ನೇ ಜನ್ಮ ವರ್ಷಾಚರಣೆಯು 2ನೇ ಅಕ್ಟೋಬರ್ 2018 ರಂದು ಪ್ರಾರಂಭವಾಗುವುದು. ಇದಕ್ಕೆ ಪೂರ್ವಭಾವಿಯಾಗಿ ರಾಜ್ಯದಾದ್ಯಂತ "ಮಹಾತ್ಮ ಗಾಂಧೀಜಿ" ಧ್ವನಿ–ಬೆಳಕು ಪ್ರದರ್ಶನವನ್ನು ಆಯೋಜಿಸಲಾಗುವುದು. ಇದಕ್ಕಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಮಹಾತ್ಮ ಗಾಂಧೀಜಿಯವರ ಚಿತಾಭಸ್ಮವಿರುವ ಅರಸಿಕೆರೆಯ ಕಸ್ತೂರಬಾ ಆಶ್ರಮವನ್ನು ಅಭಿವೃದ್ಧಿಪಡಿಸಲು 2 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಸಂಕಷ್ಟದಲ್ಲಿರುವ ನಿವೃತ್ತ ಪತ್ರಕರ್ತರ ಮಾಸಾಶನವನ್ನು 8000ರೂ.ಗಳಿಂದ 10,000 ರೂ.ಗಳಿಗೆ ಹೆಚ್ಚಿಸಲಾಗುವುದು.

2017–18ನೇ ಸಾಲಿನಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಒಟ್ಟಾರೆಯಾಗಿ 283 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

### ಒಳಾಡಳಿತ

11,000 ವಸತಿ ಗೃಹಗಳನ್ನು ನಿರ್ಮಾಣ ಮಾಡುವ 'ಪೊಲೀಸ್ ಗೃಹ–2020' ಯೋಜನೆಯಡಿ, ಇದುವರೆವಿಗೆ 4,016 ವಸತಿ ಗೃಹಗಳನ್ನು ನಿರ್ಮಾಣ ಮಾಡಲಾಗಿದ್ದು, 2ನೇ ಹಂತದ 4,198 ವಸತಿ ಗೃಹಗಳ ನಿರ್ಮಾಣ ಪ್ರಗತಿಯಲ್ಲಿದೆ. ಪೊಲೀಸ್ ತರಬೇತಿ ಶಾಲೆಗಳಲ್ಲಿ ಮಹಿಳೆಯರಿಗೆ ಮೂಲಸೌಕರ್ಯ ಹೆಚ್ಚಿಸಲು ಹಾಗೂ ಬಲವರ್ಧನೆಗೊಳಿಸಲು 10 ಕೋಟಿ ರೂ. ಗಳನ್ನು ಒದಗಿಸಲಾಗುವುದು. ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಮಹಿಳಾ ಸಿಬ್ಬಂದಿಗೆ ಪ್ರತ್ಯೇಕ ಶೌಚಾಲಯ ಕಲ್ಪಿಸಲಾಗುವುದು. ಪೊಲೀಸ್ ಸ್ಪಂದನಾ ಸಮಯದಲ್ಲಿ ವಿಶೇಷವಾಗಿ, ಮಹಿಳೆಯರು ಮತ್ತು ಮಕ್ಕಳ ವಿರುದ್ಧ ನಡೆಯುವ ಅಪರಾಧಗಳಿಗೆ ತ್ವರಿತವಾಗಿ ಸ್ಪಂದಿಸಲು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಆ್ಯಪ್‌ಗಳು ಸೇರಿದಂತೆ ತಂತ್ರಜ್ಞಾನ ಆಧಾರಿತ ಪೊಲೀಸ್ ಪರಿಕರಗಳನ್ನು ಅಳವಡಿಸಿಕೊಳ್ಳಲಾಗುವುದು.

"ಡಯಲ್ 100" ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲಾಗುವುದು ಹಾಗೂ ಜಿಲ್ಲೆಗಳಿಗೆ ವಿಸ್ತರಿಸಲಾಗುವುದು.

2017–18ನೇ ಸಾಲಿನಲ್ಲಿ ಒಳಾಡಳಿತ ಇಲಾಖೆಗೆ ಒಟ್ಟಾರೆಯಾಗಿ 4,938 ಕೋಟಿ ರೂ. ಗಳನ್ನು ಒದಗಿಸಲಾಗಿದೆ.



### ರಸ್ತೆ ಸಾರಿಗೆ ನಿಗಮಗಳು

* ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ವಿಶ್ವಾಸಾರ್ಹ ಸಾರಿಗೆ ವ್ಯವಸ್ಥೆ ಕಲ್ಪಿಸಲು ಬಿ.ಎಂ.ಟಿ.ಸಿ.ಗೆ ಬಸ್‌ಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಲು ಉದ್ದೇಶಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ 3000 ಹೊಸ ಬಸ್ಸುಗಳನ್ನು ಸೇರ್ಪಡೆ ಮಾಡಿಕೊಳ್ಳಲಿದೆ. ಇದರಲ್ಲಿ 1500 ಹೊಸ ಬಸ್‌ಗಳನ್ನು ಖರೀದಿ ಮೂಲಕ ಮತ್ತು ಉಳಿದ 1500 ಬಸ್ಸುಗಳನ್ನು ಗುತ್ತಿಗೆ ಮೂಲಕ ಪಡೆಯಲಾಗುವುದು. ಬಿಎಂಟಿಸಿಯು ಬಸ್‌ಗಳನ್ನು ಖರೀದಿಸಲು ಪಡೆಯುವ ಸಾಲ ಹಾಗೂ ಬಡ್ಡಿಯ ಮರುಪಾವತಿ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಮೂಲಕ ಸರ್ಕಾರವು ಬಸ್ ಖರೀದಿ ಪ್ರಕ್ರಿಯೆಯನ್ನು ಬೆಂಬಲಿಸಲಿದೆ.

* ಪ್ರಸಕ್ತ ಸಾಲಿನಲ್ಲಿ, ಸಾರಿಗೆ ನಿಗಮಗಳಿಂದ ಒಟ್ಟು 3250 ಹೊಸ ಬಸ್‌ಗಳನ್ನು ಖರೀದಿಸಲಾಗುವುದು. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮವು 1050 ಬಸ್‌ಗಳನ್ನು, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮವು 700 ಬಸ್‌ಗಳನ್ನು ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 1500 ಬಸ್‌ಗಳನ್ನು ಖರೀದಿಸಲಿವೆ.

* ಕೇಂದ್ರ ಅನುದಾನಗಳೊಂದಿಗೆ ಬೆಂಗಳೂರು ನಗರದಲ್ಲಿ 150 ಎಲೆಕ್ಟ್ರಿಕ್ ಬಸ್‌ಗಳು ಮತ್ತು ಮೈಸೂರು ನಗರದಲ್ಲಿ 50 ಎಲೆಕ್ಟ್ರಿಕ್ ಬಸ್‌ಗಳನ್ನು ಸಂಚಾರಕ್ಕೆ ಬಿಡಲು ಉದ್ದೇಶಿಸಲಾಗಿದೆ.

2017–18ನೇ ಸಾಲಿನಲ್ಲಿ ಸಾರಿಗೆ ಇಲಾಖೆಗೆ ಒಟ್ಟಾರೆಯಾಗಿ 2,354 ಕೋಟಿ ರೂ. ಒದಗಿಸಲಾಗಿದೆ.

### ಕಾನೂನು ಮತ್ತು ನ್ಯಾಯಾಲಯಗಳು

ಎಲ್ಲಾ ರೀತಿಯ ಸರ್ಕಾರಿ ವ್ಯಾಜ್ಯಗಳ ಪರಿಣಾಮಕಾರಿ ಮೇಲ್ವಿಚಾರಣೆ, ನಿರ್ವಹಣೆ ಹಾಗೂ ನಿಯಂತ್ರಣಕ್ಕಾಗಿ ಹಾಗೂ ಕಾನೂನು ಅಧಿಕಾರಿಗಳ ಕೆಲಸ ಹಾಗೂ ಕಾರ್ಯನಿರ್ವಹಣೆಯನ್ನು ಸಹ ಮೇಲ್ವಿಚಾರಣೆ ಮಾಡುವ ದೃಷ್ಟಿಯಿಂದ "ಕರ್ನಾಟಕ ಏಕೀಕೃತ ಸರ್ಕಾರಿ ವ್ಯಾಜ್ಯ ನಿರ್ವಹಣಾ ವ್ಯವಸ್ಥೆ" ಯನ್ನು ಸ್ಥಾಪಿಸಲಾಗುವುದು. ಇದನ್ನು ನ್ಯಾಯಾಲಯಗಳು, ನ್ಯಾಯಾಧೀಕರಣಗಳು ಮತ್ತು ಬಾರ್ ಕೌನ್ಸಿಲ್‌ಗಳ ಪೋರ್ಟಲ್‌ಗಳಿಗೆ ಜೋಡಿಸಲಾಗುವುದು. ಎಲ್ಲಾ ತಾಲೂಕು ನ್ಯಾಯಾಲಯ ಸಂಕೀರ್ಣಗಳಲ್ಲಿ 8.12 ಕೋಟಿ ರೂ.ಗಳ ವೆಚ್ಚದಲ್ಲಿ ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಲಾಗುವುದು. 2017–18ನೇ ಸಾಲಿನಲ್ಲಿ ಕಾನೂನು ಮತ್ತು ನ್ಯಾಯಾಲಯಗಳ ಇಲಾಖೆಗೆ ಒಟ್ಟಾರೆಯಾಗಿ 731 ಕೋಟಿ ರೂ. ಒದಗಿಸಲಾಗಿದೆ.

### ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

ಕಾಗದರಹಿತ ವಿಧಾನಮಂಡಲದ ವ್ಯವಹರಣೆಗಳನ್ನು ಕಾರ್ಯಗತಗೊಳಿಸಲು ಒಟ್ಟು 60.84 ಕೋಟಿ ರೂ.ಗಳ ವೆಚ್ಚದಲ್ಲಿ "ಇ–ವಿಧಾನಮಂಡಲ" ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಪ್ರಾಥಮಿಕ ಹಂತದ ಚಟುವಟಿಕೆಗಳಿಗಾಗಿ 2017–18ನೇ ಸಾಲಿನಲ್ಲಿ 20 ಕೋಟಿ ರೂ.ಗಳನ್ನು ಒದಗಿಸಲಾಗುವುದು. 2017–18ನೇ ಸಾಲಿನಲ್ಲಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಗೆ ಒಟ್ಟಾರೆಯಾಗಿ 256 ಕೋಟಿ ರೂ. ಒದಗಿಸಲಾಗಿದೆ.

### ಸಾರ್ವಜನಿಕ ಉದ್ದಿಮೆ

2017–18ನೇ ಸಾಲಿನಲ್ಲಿ ಸಾರ್ವಜನಿಕ ಉದ್ದಿಮೆ ಇಲಾಖೆಗೆ ಒಟ್ಟಾರೆಯಾಗಿ 250 ಕೋಟಿ ರೂ. ಒದಗಿಸಲಾಗಿದೆ.

### ತೆರಿಗೆ ಪ್ರಸ್ತಾವನೆಗಳು

### ಸರಕು ಮತ್ತು ಸೇವಾ ತೆರಿಗೆ

ಸರಕು ಮತ್ತು ಸೇವಾ ತೆರಿಗೆಯನ್ನು 01ನೇ ಜುಲೈ 2017 ರಿಂದ ದೇಶದಲ್ಲಿ ಜಾರಿಗೊಳಿಸಲು ಉದ್ದೇಶಿಸಲಾಗಿದೆ. ಅವಶ್ಯಕವಾದ ಸಂವಿಧಾನ ತಿದ್ದುಪಡಿಗಳನ್ನು ಈಗಾಗಲೇ ಮಾಡಲಾಗಿದ್ದು, ಮಹತ್ವಪೂರ್ಣ ತೆರಿಗೆ ವಿಧೇಯಕಗಳು ಈಗಾಗಲೇ ಸಿದ್ಧಗೊಂಡಿವೆ. ಸರಕು ಮತ್ತು ಸೇವಾ ತೆರಿಗೆ ಪರಿಷತ್ ಈ ತೆರಿಗೆ ವಿಧೇಯಕಗಳಿಗೆ ಅಂಗೀಕಾರವನ್ನು ನೀಡಿದೆ.

| ಆಯವ್ಯಯ ವಿಹಂಗಮ ನೋಟ | | | |
|---|---|---|---|
| | | | ಕೋಟಿ ರೂ. ಗಳಲ್ಲಿ |
| | ಬಜೆಟ್ ಅಂದಾಜು | ಪರಿಷ್ಕೃತ ಅಂದಾಜು | ಬಜೆಟ್ ಅಂದಾಜು |
| **ಪ್ರಾರಂಭ ಶಿಲ್ಕು** | **–139.36** | **–74.89** | **–176.04** |
| **ಎ ರಾಜಸ್ವ ಲೆಕ್ಕ** | | | |
| **I ಜಮೆ:** | | | |
| ರಾಜ್ಯ ತೆರಿಗೆ | 83864.45 | 82210.81 | 89956.56 |
| ಕೇಂದ್ರ ತೆರಿಗೆಯಲ್ಲಿ ಪಾಲು | 26978.84 | 28759.94 | 31908.05 |
| ಕೇಂದ್ರ ಸರ್ಕಾರದ ಅನುದಾನಗಳು | 13694.34 | 14797.69 | 16082.31 |
| ತೆರಿಗೆಯೇತರ ರಾಜಸ್ವ | 6220.45 | 7098.82 | 6944.62 |
| **ಒಟ್ಟು–ಎ (I)** | **130758.08** | **132867.26** | **144891.54** |
| **II ವೆಚ್ಚ** | | | |
| ಸಾಮಾಜಿಕ ಸೇವೆ | 50960.26 | 53662.74 | 55887.39 |
| ಆರ್ಥಿಕ ಸೇವೆ | 38277.08 | 39160.69 | 43671.14 |
| ಸಾಮಾನ್ಯ ಸೇವೆ | 35018.42 | 33091.78 | 38009.10 |
| ಸಹಾಯಾನುದಾನ ಮತ್ತು ಅಂಶದಾನ | 5980.31 | 5889.55 | 7187.37 |
| **ಒಟ್ಟು–ಎ (II)** | **130236.07** | **131804.76** | **144755.00** |
| **ಎ ರಾಜಸ್ವ ಲೆಕ್ಕ ಹೆಚ್ಚುವರಿ/ಕೊರತೆ** | **522.01** | **1062.51** | **136.54** |
| **ಬಿ ಬಂಡವಾಳ ಲೆಕ್ಕ** | | | |
| **I ಜಮೆ** | | | |
| ಕೇಂದ್ರ ಸರ್ಕಾರದಿಂದ ಸಾಲ | 1798.00 | 1798.00 | 1670.74 |
| ಬಹಿರಂಗ ಮಾರುಕಟ್ಟೆ ಸಾಲ | 25537.00 | 28007.00 | 34716.51 |
| ಎನ್‌ಎಸ್‌ಎಸ್‌ಎಫ್, ಎನ್‌ಸಿಡಿಸಿ ಮತ್ತು ಆರ್.ಐ.ಡಿ.ಎಫ್ ಗಳಿಂದ ಸಾಲ | 3701.00 | 1231.00 | 705.00 |
| ವಿವಿಧ ಬಂಡವಾಳ ಜಮೆಗಳು | 75.00 | 97.00 | 75.00 |
| ಸಾಲಗಳು ಮತ್ತು ಮುಂಗಡಗಳ ವಸೂಲಿ | 86.99 | 104.14 | 60.20 |
| ಸಾರ್ವಜನಿಕ ಲೆಕ್ಕ | 343321.25 | 341281.56 | 513869.86 |
| **ಒಟ್ಟು–ಬಿ (I)** | **374519.24** | **372518.70** | **551097.31** |
| **II ಬಟವಾಡೆ:** | | | |
| ಬಂಡವಾಳ ವೆಚ್ಚ | 25715.90 | 24773.54 | 32033.04 |
| ಕೇಂದ್ರ ಸರ್ಕಾರದ ಸಾಲಗಳ ಮರುಸಂದಾಯ | 964.92 | 962.42 | 1083.22 |
| ಮಾರುಕಟ್ಟೆ ಸಾಲಗಳ ಮರುಪಾವತಿ | 3981.21 | 3981.21 | 4750.17 |
| ಎಲ್ಐಸಿ, ಜಿಐಸಿ. ಎನ್‌ಎಸ್‌ಎಸ್‌ಎಫ್, ಎನ್‌ಸಿಡಿಸಿ ಮತ್ತು ಆರ್,ಐ,ಡಿ,ಎಫ್ ಸಾಲಗಳ ಮರುಸಂದಾಯ | 1895.28 | 2312.69 | 2342.26 |
| ಸಾಲಗಳ ಮತ್ತು ಮುಂಗಡಗಳ ಬಟವಾಡೆ | 625.19 | 643.97 | 1597.40 |
| ಸಾರ್ವಜನಿಕ ಲೆಕ್ಕ | 342035.92 | 341008.53 | 509623.76 |
| **ಒಟ್ಟು–ಬಿ (II)** | **375218.42** | **373682.36** | **551429.85** |
| **ಬಿ ಬಂಡವಾಳ ಲೆಕ್ಕ ಹೆಚ್ಚಳ/ಕೊರತೆ (–)** | **–699.18** | **–1163.66** | **–332.54** |
| **ಸಿ ವರ್ಷದ ಒಟ್ಟು ಹೆಚ್ಚಳ/ಕೊರತೆ** | **–177.17** | **–101.15** | **–196.00** |
| **ಡಿ ಮುಕ್ತಾಯ ಶಿಲ್ಕು** | **–316.52** | **–176.04** | **–372.04** |



### ವಾಣಿಜ್ಯ ತೆರಿಗೆಗಳು

ಸರಕು ಮತ್ತು ಸೇವಾ ತೆರಿಗೆಯನ್ನು ಗಮನದಲ್ಲಿರಿಸಿಕೊಂಡು, ವಾಣಿಜ್ಯ ತೆರಿಗೆಗಳ ಇಲಾಖೆಯ ಆಯವ್ಯಯ ಅಂದಾಜನ್ನು 55000 ಕೋಟಿ ರೂ.ಗಳು ಎಂದು ನಿಗದಿಪಡಿಸಲಾಗಿದೆ.

### ತೆರಿಗೆ ಸುಧಾರಣಾ ಕ್ರಮಗಳು

ಸರಕು ಮತ್ತು ಸೇವಾ ತೆರಿಗೆ ಜಾರಿಯಾಗುವ ಹಿನ್ನೆಲೆಯಲ್ಲಿ, ಪ್ರಸಕ್ತ ತೆರಿಗೆ ಸಂರಚನೆಯಲ್ಲಿ ಯಾವುದೇ ಪ್ರಮುಖ ಬದಲಾವಣೆಗಳನ್ನು ಮಾಡಲು ನಾನು ಪ್ರಸ್ತಾಪಿಸುವುದಿಲ್ಲ. ಆದರೆ ಭತ್ತ, ಅಕ್ಕಿ, ಗೋಧಿ, ಬೇಳೆ ಕಾಳುಗಳು ಹಾಗೂ ಅಕ್ಕಿ, ರಾಗಿರೈಸ್ (ಸಂಸ್ಕರಿಸಿದ ರಾಗಿ) ಮತ್ತು ಗೋಧಿ ಪದಾರ್ಥಗಳ ಮೇಲಿನ ತೆರಿಗೆಯ ವಿನಾಯಿತಿಯನ್ನು ಮುಂದುವರೆಸಲು ಪ್ರಸ್ತಾಪಿಸುತ್ತೇನೆ. ಇದಲ್ಲದೇ ಸಿರಿಧಾನ್ಯಗಳಾದ ನವಣೆ, ಸಾಮೆ, ಆರಕ ಮತ್ತು ಬರಗು ಇವುಗಳ ಹಿಟ್ಟುಗಳನ್ನು ತೆರಿಗೆಯಿಂದ ವಿನಾಯಿತಿಗೊಳಿಸಲಾಗುವುದು. ದ್ವಿದಳ ಧಾನ್ಯಗಳು ಮತ್ತು ತೆಂಗಿನಕಾಯಿಯ ಸಿಪ್ಪೆಯ ಮೇಲಿನ ತೆರಿಗೆಯನ್ನು ಸಹ ವಿನಾಯಿತಿಗೊಳಿಸಲಾಗುವುದು.

### ಆಡಳಿತಾತ್ಮಕ ಕ್ರಮಗಳು

ನಾವು ವಿಶೇಷವಾಗಿ ಪರೋಕ್ಷ ತೆರಿಗೆಯ ಬಹುದೊಡ್ಡ ಸುಧಾರಣೆಯ ಅನುಷ್ಠಾನದ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸಂದರ್ಭದಲ್ಲಿ, ಕರದಾತರಿಗೆ ಹಾಗೂ ತೆರಿಗೆ ಆಡಳಿತಕ್ಕೆ ಅನಪೇಕ್ಷಣೀಯ ಒತ್ತಡ ಉಂಟಾಗಲಿದೆ. ಈ ಒತ್ತಡವನ್ನು ಕಡಿಮೆಗೊಳಿಸಲು, ನಾನು 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯ ಪ್ರಕರಣ 40ಕ್ಕೆ ತಿದ್ದುಪಡಿ ಮಾಡುವ ಮೂಲಕ 2012–13 ಹಾಗೂ 2013–14ರ ತೆರಿಗೆ ಅವಧಿಗಳಿಗೆ ಸಂಬಂಧಿಸಿದ ಕರನಿರ್ಧರಣೆ




ಅಥವಾ ಮರುಕರನಿರ್ಧರಣೆಗಳನ್ನು ಅಂತಿಮಗೊಳಿಸಲು ಇದ್ದ ಕಾಲಮಿತಿಯನ್ನು ಒಂದು ವರ್ಷ ವಿಸ್ತರಿಸಲಾಗುವುದು. ಅದೇ ರೀತಿ ಪ್ರಕರಣ 40ಕ್ಕೆ ತಿದ್ದುಪಡಿ ಮಾಡುವ ಮೂಲಕ ಕರನಿರ್ಧರಣೆ ಅಥವಾ ಮರುಕರನಿರ್ಧರಣೆಗೆ ಕಾಲಮಿತಿಯನ್ನು ಪರಿಗಣಿಸುವಾಗ ಮರುಪರಿಶೀಲನಾ ನಡಾವಳಿಗಳನ್ನು ಏಲೇ ಮಾಡಲು ತೆಗೆದುಕೊಳ್ಳುವ ಅವಧಿಯನ್ನು ಹೊರತುಪಡಿಸಲಾಗುವುದು.

ನಾವು ಪ್ರಸ್ತುತ ಜಾರಿಯಲ್ಲಿರುವ ಮೌಲ್ಯವರ್ಧಿತ ತೆರಿಗೆಯ ಬದಲಾಗಿ ಸರಕು ಮತ್ತು ಸೇವಾ ತೆರಿಗೆಯತ್ತ ಮುನ್ನಡೆಯುತ್ತಿರುವುದರಿಂದ, ಬಾಕಿ ಇರುವ ಪೂರ್ಣ ತೆರಿಗೆ ಹಾಗೂ ಬಾಕಿ ಇರುವ ದಂಡ ಮತ್ತು ಬಡ್ಡಿಯ ಶೇಕಡ 10ರಷ್ಟನ್ನು 31ನೇ ಮೇ 2017ರ ಒಳಗೆ ಪಾವತಿಸಿದಲ್ಲಿ, ಇನ್ನುಳಿದ ಶೇಕಡ 90ರ ಬಡ್ಡಿ ಮತ್ತು ದಂಡವನ್ನು ಮನ್ನಾ ಮಾಡಲು ಅನುಕೂಲವಾಗುವಂತೆ ಕರಸಮಾಧಾನ ಯೋಜನೆಯನ್ನು ಜಾರಿಗೆ ತರಲು ಪ್ರಸ್ತಾಪಿಸುತ್ತೇನೆ.

**ಅಬಕಾರಿ**

ಅಬಕಾರಿ ಇಲಾಖೆಗೆ 2016–17ನೇ ಸಾಲಿಗೆ 16510 ಕೋಟಿ ರೂ.ಗಳ ರಾಜಸ್ವ ಗುರಿ ನಿಗದಿಪಡಿಸಿದ್ದೆವು. ನಾವು ಈ ಗುರಿಯನ್ನು ಸಾಧಿಸಲಾಗುವುದೆಂಬ ನಿರೀಕ್ಷೆಯನ್ನು ಹೊಂದಿದ್ದೇವೆ. ಸ್ಪಿರಿಟ್ (ಎಥನಾಲ್ ಹೊರತುಪಡಿಸಿ) ರಫ್ತಿನ ಮೇಲೆ ಪ್ರತಿ ಲೀಟರ್‌ಗೆ ರೂ.2 ರಂತೆ ಮತ್ತು ಆಮದಿನ ಮೇಲೆ ಪ್ರತಿ ಲೀಟರ್‌ಗೆ ರೂ.1 ರಂತೆ ವಿಧಿಸಲಾಗಿದ್ದ ಆಡಳಿತಾತ್ಮಕ ಶುಲ್ಕವನ್ನು ಹಿಂಪಡೆಯಲು ಉದ್ದೇಶಿಸಲಾಗಿದೆ. ಪ್ರಸ್ತುತ 17 ಘೋಷಿತ ಹೆಚ್ಚುವರಿ ಅಬಕಾರಿ ಸುಂಕದ ಸ್ಲಾಬ್‌ಗಳನ್ನು ಹೊಂದಿದ್ದೇವೆ. ಇವುಗಳನ್ನು ತರ್ಕಬದ್ಧಗೊಳಿಸುವ ಕ್ರಮವಾಗಿ 5ನೇ ಮತ್ತು 11ನೇ ಸ್ಲಾಬ್‌ಗಳ ಮೇಲೆ ಶೇಕಡ 6 ರಷ್ಟು ಮತ್ತು ಉಳಿದ 15 ಸ್ಲಾಬ್‌ಗಳ ಮೇಲೆ ಶೇಕಡ 10 ಮತ್ತು ಶೇಕಡ 16 ರಷ್ಟು ಹೆಚ್ಚುವರಿ ಅಬಕಾರಿ ಸುಂಕವನ್ನು ಹೆಚ್ಚಿಸಲಾಗುವುದು. ಈ ಬದಲಾವಣೆಗಳಿಂದಾಗಿ ಬಿಯರ್, ಫೆನ್ನಿ, ಲಿಕ್ಯುಯೆರ್ ಮತ್ತು ವೈನ್ ಸೇರಿದಂತೆ ಮದ್ಯದ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು 01.04.2017 ರಿಂದ ಜಾರಿಗೆ ಬರುವಂತೆ ತೆಗೆದುಹಾಕಲಾಗುವುದು. ಇದರೊಂದಿಗೆ ಮತ್ತು ಪರಿಣಾಮಕಾರಿಯಾದ ಜಾರಿ ಮತ್ತು ನಿಯಂತ್ರಣ ಕ್ರಮಗಳ ಮೂಲಕ ಇಲಾಖೆಯು 2017–18ನೇ ಆರ್ಥಿಕ ಸಾಲಿಗೆ ನಿಗದಿಪಡಿಸಲಾದ 18050 ಕೋಟಿ ರೂ. ಗಳ ರಾಜಸ್ವ ಸಂಗ್ರಹಣೆಯ ಗುರಿಯನ್ನು ಸಾಧಿಸಲಿದೆ.

**ನೊಂದಣಿ ಮತ್ತು ಮುದ್ರಾಂಕ**

2016–17ನೇ ಸಾಲಿಗೆ 9100 ಕೋಟಿ ರೂ.ಗಳ ರಾಜಸ್ವ ಗುರಿ ನಿಗದಿಪಡಿಸಲಾಗಿದ್ದು, ಮಾರ್ಚ್‌ಅಂತ್ಯಕ್ಕೆ 7750 ಕೋಟಿ ರೂ. ಗಳಷ್ಟು ರಾಜಸ್ವ ಸಂಗ್ರಹಣೆ ನಿರೀಕ್ಷಿಸಲಾಗಿದೆ.

2017–18ನೇ ಸಾಲಿಗೆ 9000 ಕೋಟಿ ರೂ.ಗಳ ರಾಜಸ್ವ ಸಂಗ್ರಹಣೆ ಗುರಿಯನ್ನು ನಿಗದಿಪಡಿಸಲಾಗಿದೆ.

**ಸಾರಿಗೆ**

2016–17 ಸಾಲಿಗೆ ನಿಗದಿಪಡಿಸಿದ ಗುರಿ ರೂ 5160 ಕೋಟಿಗಳಾಗಿತ್ತು, ಆದರೆ ವಾಹನಗಳ ನೊಂದಣಿಯಲ್ಲಿ ಏರಿಕೆ ಕಂಡುಬಂದಿದ್ದರಿಂದ ಸುಮಾರು 5450 ಕೋಟಿ ರೂ.ಗಳು ಅಂದರೆ 290 ಕೋಟಿ ರೂ.ಗಳ ಹೆಚ್ಚುವರಿಯಾಗಿ ಗುರಿ ಮೀರಿದ ಸಾಧನೆ ಹೊಂದುವ ಆಶಯ ಹೊಂದಿದ್ದೇವೆ. ದ್ವಿಚಕ್ರ ವಾಹನಗಳಿಗೆ ಸಂಬಂಧಿಸಿದಂತೆ 2010ನೇ ಸಾಲಿನಿಂದ ಇಲ್ಲಿಯವರೆಗೆ ಮೋಟಾರು ವಾಹನ ತೆರಿಗೆಯನ್ನು ಹೆಚ್ಚಳ ಮಾಡಿರುವುದಿಲ್ಲ. ಆದ್ದರಿಂದ 1 ಲಕ್ಷಕ್ಕೂ ಮೇಲ್ಪಟ್ಟ ಬೆಲೆಯುಳ್ಳ ದ್ವಿಚಕ್ರ ವಾಹನಗಳಿಗೆ ಮಾತ್ರ ಈಗಿನ ತೆರಿಗೆ ಶೇಕಡ 12% ರಿಂದ ಶೇಕಡ 18%ಕ್ಕೆ ದ್ವಿಚಕ್ರ ವಾಹನಗಳ ಬೆಲೆಗಳ ಮೇಲೆ ಹೆಚ್ಚಳ ಮಾಡುವ ಬಗ್ಗೆ ಪ್ರಸ್ತಾಪಿಸಿದೆ, ಸದರಿ ಪ್ರಸ್ತಾವನೆಯಿಂದ ರೂ. 60 ಕೋಟಿಗಳಷ್ಟು ಹೆಚ್ಚುವರಿ ತೆರಿಗೆಯನ್ನು ನಿರೀಕ್ಷಿಸಬಹುದಾಗಿದೆ. 2017–18ನೇ ಸಾಲಿಗೆ ರೂ. 6006 ಕೋಟಿ ರೂ.ಗಳ ರಾಜಸ್ವ ಸಂಗ್ರಹಣೆ ಗುರಿಯನ್ನು ನೀಡಲಾಗಿದೆ.



2016–17ರ ಪರಿಷ್ಕೃತ ಅಂದಾಜುಗಳನ್ವಯ ಆಯವ್ಯಯದಲ್ಲಿ ಅಂದಾಜಿಸಲಾದ 1,61,956 ಕೋಟಿ ರೂ. ಗಳಿಗೆ ಹೋಲಿಸಿದಲ್ಲಿ ಒಟ್ಟಾರೆ ಜಮೆ 1,64,104 ಕೋಟಿ ರೂ.ಗಳಾಗಿದೆ. ರಾಜ್ಯದ ರಾಜಸ್ವ ಕ್ರೋಢೀಕರಣದ ಪ್ರಯತ್ನಗಳು 1,32,867 ಕೋಟಿ ರೂ.ಗಳಾಗಿದ್ದು, ಇದರಲ್ಲಿ ಸ್ವಂತ ತೆರಿಗೆ ರಾಜಸ್ವ ಸಂಗ್ರಹಣೆಯು 82,211 ಕೋಟಿ ರೂ.ಗಳಾಗಿರುತ್ತದೆ.

ಸನ್ಮಾನ್ಯ ಸಭಾಧ್ಯಕ್ಷರೇ,

2017–18ನೇ ಸಾಲಿನಲ್ಲಿ ಒಟ್ಟು ಜಮೆಗಳು 1,82,119 ಕೋಟಿ ರೂ. ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 1,44,892 ಕೋಟಿ ರೂ. ರಾಜಸ್ವ ಜಮೆಗಳು ಹಾಗೂ 37,092 ಕೋಟಿ ರೂ.ಗಳ ಸಾಲ ಸೇರಿದಂತೆ 37,227 ಕೋಟಿ ರೂ.ಗಳ ಬಂಡವಾಳ ಜಮೆಗಳು ಒಳಗೊಂಡಿರುತ್ತದೆ. 1,44,755 ಕೋಟಿ ರೂ.ಗಳ ರಾಜಸ್ವ ವೆಚ್ಚ, 33,630 ಕೋಟಿ ರೂ.ಗಳ ಬಂಡವಾಳ ಹಾಗೂ ಸಾಲದ ಮರುಪಾವತಿ 8,176 ಕೋಟಿ ರೂ.ಗಳ ವೆಚ್ಚವನ್ನು ಒಳಗೊಂಡು, ಒಟ್ಟು ವೆಚ್ಚವು 1,86,561 ಕೋಟಿ ರೂ. ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ. ರಾಜಸ್ವ ಹೆಚ್ಚುವರಿಯನ್ನು 137 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ವಿತ್ತೀಯ ಕೊರತೆಯು 33,359 ಕೋಟಿ ರೂ.ಗಳಾಗುತ್ತದೆಂದು ನಿರೀಕ್ಷಿಸಲಾಗಿದ್ದು, ಅದು ರಾಜ್ಯದ ಆಂತರಿಕ ಉತ್ಪನ್ನದ ಶೇ. 2.61 ರಷ್ಟಾಗಿರುತ್ತದೆ.

2017–18ರ ಕೊನೆಯಲ್ಲಿ 2,42,420 ಕೋಟಿ ರೂ.ಗಳ ಒಟ್ಟು ಹೊಣೆಗಾರಿಕೆಗಳು ರಾಜ್ಯದ ಆಂತರಿಕ ಉತ್ಪನ್ನದ ಶೇ.18.93 ರಷ್ಟಾಗುತ್ತದೆಂದು ಅಂದಾಜು ಮಾಡಲಾಗಿದೆ. ಇದು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದಡಿ 2017–18ನೇ ವರ್ಷಕ್ಕೆ ನಿಗದಿಪಡಿಸಿರುವ ಶೇ.25 ರ ಮಿತಿಯೊಳಗಿರುತ್ತದೆ.




## ಸಂಪನ್ಮೂಲಗಳ ಕ್ರೋಢೀಕರಣ

2017–18ನೇ ಸಾಲಿನ ರಾಜ್ಯದ ಒಟ್ಟು ಸ್ವಂತ ತೆರಿಗೆ ರಾಜಸ್ವವನ್ನು 2016–17ನೇ ಸಾಲಿನ ಪರಿಷ್ಕೃತ ಅಂದಾಜು ಮೀರಿ ಶೇ.9.42ರ ಹೆಚ್ಚಳದೊಂದಿಗೆ 89,957 ಕೋಟಿ ರೂ.ಗಳಾಗುತ್ತದೆಂದುಅಂದಾಜು ಮಾಡಲಾಗಿದೆ.

ತೆರಿಗೆಯೇತರ ರಾಜಸ್ವಗಳಿಂದ 6,945 ಕೋಟಿ ರೂ.ಗಳನ್ನು ಸಂಗ್ರಹಿಸಬಹುದೆಂದು ನಿರೀಕ್ಷಿಸಲಾಗಿದೆ. ಕೇಂದ್ರ ತೆರಿಗೆಯ ಪಾಲಿನ ರೂಪದಲ್ಲಿ 31,908 ಕೋಟಿ ರೂ.ಗಳನ್ನು ಹಾಗೂ 16,082 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರದಿಂದ ಸಹಾಯಾನುದಾನ ರೂಪದಲ್ಲಿ ರಾಜ್ಯ ಸರ್ಕಾರವು ನಿರೀಕ್ಷಿಸಿದೆ.

ಈ ರಾಜಸ್ವ ಜಮೆಗಳಿಗೆ ಪೂರಕವಾಗಿ 37,092 ಕೋಟಿ ರೂ.ಗಳ ಒಟ್ಟು ಸಾಲಗಳು, 75 ಕೋಟಿ ರೂ.ಗಳ ಋಣೇತರ ಸ್ವೀಕೃತಿಗಳು ಮತ್ತು 60 ಕೋಟಿ ರೂ.ಗಳ ಸಾಲಗಳ ವಸೂಲು ಮೊತ್ತವನ್ನು ಅಂದಾಜಿಸಲಾಗಿದೆ.

ರಾಜ್ಯದ ಒಡೆತನದ ವಿವಿಧ ಮಂಡಳಿಗಳು, ನಿಗಮಗಳು ಮತ್ತು ಸ್ಥಳೀಯ ಸಂಸ್ಥೆಗಳ ಆಂತರಿಕ ಸಂಪನ್ಮೂಲ ಸೃಜನೆಯ ಮೂಲಕ ಹಾಗೂ ತಮ್ಮ ಹಣಕಾಸು ಸಾಮರ್ಥ್ಯ ಮತ್ತು ಸ್ವಂತ ರಾಜಸ್ವಗಳ ಆಧಾರದ ಮೇಲೆ ಮಾಡಿದ ಸಾಲಗಳ ಮೂಲಕ 11,279 ಕೋಟಿರೂ. ಗಳನ್ನು ಕ್ರೋಢೀಕರಿಸಲಾಗುತ್ತದೆಂದು ನಿರೀಕ್ಷಿಸಲಾಗಿದೆ. ❑

(26ನೇ ಪುಟದಿಂದ)

## ಹೆರಿಗೆ ಸೌಲಭ್ಯ ಹೆಚ್ಚಳ : ಐದು ದಶಕಗಳ ಹಳೆಯ ಕಾನೂನಿಗೆ ತಿದ್ದುಪಡಿ

ಭಾರತವೂ ಈಗ ಅತಿ ಹೆಚ್ಚಿನ ಹೆರಿಗೆ ರಜೆ ಸೌಲಭ್ಯಗಳನ್ನು ನೀಡುವ ರಾಷ್ಟ್ರಗಳ ಸಾಲಿಗೆ ಸೇರಿದಂತಾಗಿದೆ. ಜರ್ಮನಿ (56 ವಾರ), ಡೆನ್ಮಾರ್ಕ್ (52 ವಾರ) ಹಾಗೂ ನಾರ್ವೆ ( 36–46 ವಾರ) ರಾಷ್ಟ್ರಗಳು ಅತಿ ಹೆಚ್ಚಿನ ಹೆರಿಗೆ ರಜೆ ಸೌಲಭ್ಯ ನೀಡುವ ರಾಷ್ಟ್ರಗಳಾಗಿವೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಓ) ನಿರ್ಣಯ, 14 ವಾರಗಳ ಹೆರಿಗೆ ರಜೆಗೆ ಶಿಫಾರಸು ಮಾಡುತ್ತದೆ. ಭಾರತದಲ್ಲಿ ಈಗಿನ ಹೊಸ ಕಾನೂನು ಜಾರಿಯಾಗುವ ಮುಂಚೆ 12 ವಾರಗಳ ರಜೆಗೆ ಅವಕಾಶವಿದ್ದೇ ಇತ್ತು. ಆದರೆ ಈ ವಿಚಾರಕ್ಕೆ ಸಂಬಂಧಿಸಿದಂತೆ ಅಮೆರಿಕದಲ್ಲಿ ಸರಿಯಾದ ರಕ್ಷಣೆ ಇಲ್ಲ. ಆದರೆ ಷರತ್ತುಗಳಿಗೆ ಒಳಪಟ್ಟು 12 ವಾರಗಳ ವೇತನ ರಹಿತ ಅಥವಾ ಸಂಗ್ರಹ ರಜೆಯ ನಂತರ ಉದ್ಯೋಗ ಭದ್ರತೆ ಒದಗಿಸುವಂತಹ ಅನುಕೂಲಗಳಿವೆ. ಮಹಿಳಾ ಪರ ಎಂದು ಬಿಂಬಿಸಲಾಗುತ್ತಿರುವ ಈ ತಿದ್ದುಪಡಿ ಕಾನೂನು ಮಹಿಳಾ ನೇಮಕಾತಿಗಳಿಗೆ ದೀರ್ಘಾವಧಿಯಲ್ಲಿ ಅಡ್ಡಿಯಾಗಬಹುದು. 20 ಅಥವಾ 25 ನೌಕರರನ್ನುಳ್ಳ ಸಣ್ಣ ಅಥವಾ ಮಧ್ಯಮ ಕೈಗಾರಿಕಾ ಸಂಸ್ಥೆಗಳು (ಎಸ್‌ಎಂಇ) ಅಥವಾ ನವೋದ್ಯಮಗಳಲ್ಲಿ 26 ವಾರಗಳ ಗೈರು ಹಾಜರಿ ಗಣನೀಯ ನಷ್ಟ ಉಂಟು ಮಾಡುವಂತಹದ್ದು ಎಂಬಂತಹ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

ಹೀಗಾಗಿಯೇ ಮಹಿಳೆಯರಿಗೆ ಹೆರಿಗೆ ರಜೆ ಸೌಲಭ್ಯಗಳನ್ನು ಒದಗಿಸುವ ವೆಚ್ಚಕ್ಕೆ ಉದ್ಯೋಗದಾತರೇ ಪೂರ್ಣ ಬಾಧ್ಯಸ್ಥರಾಗಬೇಕಿಲ್ಲ ಎಂದು ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಓ) ಹೆರಿಗೆ ಸೌಲಭ್ಯ ರಕ್ಷಣೆಯ ನಿರ್ಣಯಗಳು ಹೇಳಿರುವುದನ್ನೂ ಗಮನಿಸಬೇಕು.

ಇಂತಹ ಸೌಲಭ್ಯಗಳನ್ನು ಕಡ್ಡಾಯ ಸಾಮಾಜಿಕ ವಿಮೆ ಅಥವಾ ಸರ್ಕಾರಿ ವೆಚ್ಚದ ಮೂಲಕವೂ ಒದಗಿಸಲು ಅವಕಾಶ ಇರಬೇಕು ಎಂದು ಐಎಲ್‌ಓ ಹೇಳಿದೆ. ಜಗತ್ತಿನಲ್ಲಿ ಶೇ 16ರಷ್ಟು ರಾಷ್ಟ್ರಗಳಲ್ಲಿ ಉದ್ಯೋಗದಾತರು ಹಾಗೂ ಸರ್ಕಾರ ನೀಡುವ ಹಣದ ನಿಧಿಯಿಂದ ಹೆರಿಗೆ ಸೌಲಭ್ಯ ವೆಚ್ಚವನ್ನು ಭರಿಸಲಾಗುತ್ತಿದೆ. ಆದರೆ ಶೇ 25ರಷ್ಟು ರಾಷ್ಟ್ರಗಳಲ್ಲಿ ಉದ್ಯೋಗದಾತರೇ ಹೆರಿಗೆ ಸೌಲಭ್ಯ ವೆಚ್ಚವನ್ನು ಪೂರ್ಣವಾಗಿ ಭರಿಸುತ್ತಿದ್ದಾರೆ. ಮನೆಯಿಂದಲೇ ಕೆಲಸ ಮಾಡುವ ಅವಕಾಶವನ್ನು ಸಾಂಪ್ರದಾಯಿಕ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುವ ಸಂಸ್ಥೆಗಳು ಒದಗಿಸಿಕೊಡಲಾರವು ಎಂಬ ಅಭಿಪ್ರಾಯವೂ ಇದೆ.

ವಾಸ್ತವವಾಗಿ ಮನೆಯಿಂದಲೇ ಕೆಲಸ ಮಾಡುವ ಅವಕಾಶ ಲಭ್ಯವಾಗುವುದು ನ್ಯೂ ಏಜ್ ಸೇವಾ ವಲಯ ಅಥವಾಕೌಶಲಪೂರ್ಣ ಬೌದ್ಧಿಕ ಕೆಲಸಗಳಲ್ಲಿ ಮಾತ್ರ. ಹೀಗಾಗಿ ವಿವಾಹಿತ ಮಹಿಳೆಯರ ನೇಮಕಾತಿಗೆ ಹಿಂಜರಿಕೆ ಕಂಡುಬರಬಹುದೆ ಎಂಬಂತಹ ಆತಂಕಗಳನ್ನು ಬದಿಗೊತ್ತಲಾಗದು. ಗರ್ಭಿಣಿ ಸ್ತ್ರೀಯರ ವಿರುದ್ಧ ವ್ಯಾಪಕ ತಾರತಮ್ಯ ಭಾವನೆ ಭಾರತದ ಕಾರ್ಪೊರೇಟ್ ವಲಯದಲ್ಲಿ ಇರುವುದನ್ನು ರಾಷ್ಟ್ರೀಯ ಮಹಿಳಾ ಆಯೋಗದ (ಎನ್ಸಿಡಬ್ಲ್ಯು) ಇತ್ತೀಚಿನ ಅಧ್ಯಯನವೂ ಹೇಳಿತ್ತು. ಹೀಗಾಗಿ ಮಹಿಳೆಯರನ್ನು ಔದ್ಯೋಗಿಕ ಕ್ಷೇತ್ರಕ್ಕೆ ವಾಪಸ್ ಕರೆ ತರಬೇಕೆನ್ನುವ ಸದುದ್ದೇಶದ ಕಾನೂನು ಕೇವಲ ಕೆಲವೇ ಮಹಿಳೆಯರಿಗಷ್ಟೇ ಅನುಕೂಲವಾದರೆ ಸಾಲದು. ಮಹಿಳೆಯರನ್ನು ನೇಮಕ ಮಾಡಿಕೊಳ್ಳುವುದರ ವಿರುದ್ಧ ಉಂಟಾಗಬಹುದಾದ ಪೂರ್ವಗ್ರಹಗಳನ್ನು ಇಲ್ಲವಾಗಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದೂ ಅವಶ್ಯ. ಪಿತೃತ್ವ ರಜೆ ಬಗ್ಗೆ ಈ ಕಾನೂನು ಮೌನವಾಗಿದೆ. ಕುಟುಂಬ ವ್ಯವಸ್ಥೆಯಲ್ಲಿ ತೀವ್ರ ಬದಲಾವಣೆಗಳಾಗುತ್ತಿರುವ ಈ ಕಾಲದಲ್ಲಿ ಶಿಶು ಪಾಲನೆಯನ್ನು ಅಮ್ಮ , ಅಪ್ಪಂದಿರ ಜಂಟಿ ಹೊಣೆಗಾರಿಕೆಯಾಗಿಸುವ ದೃಷ್ಟಿಕೋನವನ್ನು ಸಮಾಜದಲ್ಲಿ ಮೂಡಿಸಲು ಪಿತೃತ್ವ ರಜೆಯ ಅವಶ್ಯಕತೆ ಇದೆ ಎಂದು ಸಂಸತ್ತಿನಲ್ಲಿ ಈ ಕುರಿತಾದ ಮಸೂದೆಯನ್ನು ಚರ್ಚಿಸುವ ಸಂದರ್ಭದಲ್ಲಿ ಕೆಲವು ಸಂಸತ್ ಸದಸ್ಯರು ಪ್ರಸ್ತಾಪಿಸಿದ್ದು ಸರಿಯಾಗಿಯೇ ಇತ್ತು. ಪಿತೃತ್ವ ರಜೆ ಇಲ್ಲದೆ ಬರೀ ಹೆರಿಗೆ ರಜೆ ಲಿಂಗತ್ವ ಪೂರ್ವಗ್ರಹಗಳ ವರ್ತುಲವನ್ನು ದೊಡ್ಡದಾಗಿಸುತ್ತಲೇ ಸಾಗುತ್ತದೆ. ❑

# ರಾಜ್ಯ ಮುಂಗಡ ಪತ್ರದ ನೂತನ ಕಾರ್ಯಕ್ರಮಗಳು



* ಡಾ. ನೇ. ತಿ. ಸೋಮಶೇಖರ್

**ರಾಜ್ಯ ಮುಂಗಡ ಪತ್ರದಲ್ಲಿ ವಿವಿಧ ವಿನೂತನ ಸಾಮಾಜಿಕ – ಆರ್ಥಿಕ ಕಾರ್ಯಕ್ರಮಗಳನ್ನು ಘೋಷಿಸಲಾಗಿದೆ. ಮುಖ್ಯವಾಗಿ ಬಡ ವರ್ಗದ ಜನರನ್ನು ಗಮನದಲ್ಲಿಟ್ಟು ಪ್ರಕಟಿಸಲಾಗಿರುವ ಈ ಯೋಜನೆಗಳನ್ನು ಅರ್ಥಪೂರ್ಣವಾಗಿ ಜಾರಿಗೊಳಿಸಬೇಕಾಗಿರುವುದೇ ಮುಂದಿನ ಸವಾಲಾಗಿದೆ.**

ಕರ್ನಾಟಕದ 2017–18ನೇ ಸಾಲಿನ ಮುಂಗಡ ಪತ್ರದಲ್ಲಿ ವಿವಿಧ ಹೊಸ ಯೋಜನೆ / ಉಪಕ್ರಮಗಳನ್ನು ಪ್ರಕಟಿಸಲಾಗಿದೆ. ರಾಜ್ಯ ಭೀಕರ ಬರಕ್ಕೆ ತುತ್ತಾಗಿರುವ ಹಿನ್ನೆಲೆಯಲ್ಲಿ ಕೆರೆ ಸಂಜೀವಿನಿ ಮತ್ತು ಮೋಡ ಬಿತ್ತನೆಯಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು ಸ್ವಾಗತಕರವಾದರೂ ಬರದ ಬವಣೆಯನ್ನು ತಪ್ಪಿಸುವ ತತ್‌ಕ್ಷಣದ ಮತ್ತು ದೀರ್ಘಾವಧಿ ಯೋಜನೆಗಳಿಗೆ ಹೆಚ್ಚು ಒತ್ತು ನೀಡಬಹುದಾಗಿತ್ತು. ರಾಜ್ಯ ಸರ್ಕಾರ ಹಿಂದಿನ ಯೋಜನೆಗಳ ಜೊತೆಯಲ್ಲಿ ಕೆಲವು ನೂತನ ಯೋಜನೆಗಳನ್ನು ಪ್ರಕಟಿಸಿದೆ. ಇದರಲ್ಲಿ ಬಹುತೇಕ ಯೋಜನೆಗಳು ಕೇಂದ್ರ ಕಾರ್ಯಕ್ರಮಗಳ ಬೆಂಬಲ ಪಡೆದಿವೆ ಎಂಬುದು ಗಮನಿಸಬೇಕಾದ ಅಂಶ. ಅವುಗಳಲ್ಲಿ ಮುಖ್ಯವಾದವುಗಳ ಬಗ್ಗೆ ಸಂಕ್ಷಿಪ್ತ ಅವಲೋಕನವನ್ನು ಮಾತ್ರ ಈ ಲೇಖನದಲ್ಲಿ ಮಾಡಲಾಗಿದೆ.

*** ನಮ್ಮ ಕ್ಯಾಂಟಿನ್:** ತಮಿಳುನಾಡಿನ ಅಮ್ಮ ಕ್ಯಾಂಟಿನ್ ಮಾದರಿಯಲ್ಲಿ ಕರ್ನಾಟಕದಲ್ಲೂ ನಮ್ಮ ಕ್ಯಾಂಟಿನ್ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಈ ಯೋಜನೆಯ ಪ್ರಕಾರ ಸದ್ಯಕ್ಕೆ ಬೆಂಗಳೂರಿನಲ್ಲಿ ಐದು ರುಪಾಯಿಗೆ ತಿಂಡಿ, ಹತ್ತು ರೂಪಾಯಿಗೆ ಊಟ ಹಾಗೂ ಬೇರೆ ಜಿಲ್ಲೆಗಳಲ್ಲಿ ಸ್ತ್ರೀಶಕ್ತಿ ಸಂಘಟನೆಗಳ ಮೂಲಕ ಸವಿರುಚಿ ಕ್ಯಾಂಟಿನ್ ರೂಪದಲ್ಲಿ ಊಟ ಪೂರೈಸಲು ಉದ್ದೇಶಿಸಲಾಗಿದೆ. ತಮಿಳುನಾಡಿನಲ್ಲಿ ಒಂದಾದ ಮೇಲೆ ಮತ್ತೊಂದು ಪಕ್ಷದ ಸರ್ಕಾರಗಳು ಪೈಪೋಟಿ ಮೇಲೆ ಟಿವಿ, ಫ್ರಿಡ್ಜ್, ಊಟ, ತಿಂಡಿ ಕೊಟ್ಟು ಜನರ ಮನಸ್ಸು ಗೆದ್ದಿರುವುದು ನಿಜವಾದರೂ ಆ ರಾಜ್ಯದ ಬೊಕ್ಕಸದ ಮೇಲೆ ಇವತ್ತು ಸುಮಾರು ಐದು ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ಸಾಲದ ಹೊರೆ ಇದೆ. ಇವತ್ತಿಲ್ಲ ನಾಳೆ ಈ ಹೊರೆಯನ್ನು ಅಲ್ಲಿನ ಜನರೇ ಹೊರಬೇಕು. ಇಲ್ಲ ಮುಂದಿನ ಪೀಳಿಗೆಗೆ ವರ್ಗಾಯಿಸಬೇಕು. ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಕ್ಯಾಂಟೀನ್ ಯೋಜನೆಯನ್ನು ಅನುಷ್ಠಾನ–ಗೊಳಿಸಲು ರಾಜ್ಯದಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಬೇಕು. ಈ ಯೋಜನೆಯನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗೂ ವಿಸ್ತರಿಸಬೇಕು. ಏಕೆಂದರೆ, ಈ ಕಾಲೇಜುಗಳಿಗೆ ಬರುವ ಬಹುತೇಕ ವಿದ್ಯಾರ್ಥಿಗಳು ಬಡತನದ ಹಿನ್ನೆಲೆಯನ್ನು ಹೊಂದಿದವರಾಗಿದ್ದಾರೆ. ಕಡಿಮೆ ಬೆಲೆಗೆ ತಿಂಡಿ ಮತ್ತು ಊಟ ದೊರೆತರೆ ಅವರು ಪಾಠ ಪ್ರವಚನಗಳಲ್ಲಿ, ಕ್ರೀಡೆಗಳಲ್ಲಿ, ಕಾಲೇಜಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಬಹುದು. ಇದರಿಂದ ಉನ್ನತ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದಂತಾಗುತ್ತದೆ.

*** ಯೂನಿವರ್ಸಲ್ ಹೆಲ್ತ್ ಕವರೇಜ್:** ಆರೋಗ್ಯ ವಿಮಾ ಯೋಜನೆಗಳಿಗೆ ಕೇಂದ್ರೀಕೃತ ವ್ಯವಸ್ಥೆ ಜಾರಿಗೊಳಿಸಲು ಉದ್ದೇಶಿಸಿರುವ ರಾಜ್ಯ ಸರ್ಕಾರ ಎಲ್ಲಾ ಕುಟುಂಬಗಳನ್ನು ಸಾರ್ವತ್ರಿಕ ಆರೋಗ್ಯ ವ್ಯಾಪ್ತಿಗೆ ತರಲು ಮುಂದಾಗಿದೆ. ಈ ವ್ಯವಸ್ಥೆಯ ಪ್ರಕಾರ ರಾಜ್ಯದ ಬಿಪಿಎಲ್,

* ಅರ್ಥಶಾಸ್ತ್ರ ಪ್ರಾಧ್ಯಾಪಕರು (ಹಿರಿಯ ಶ್ರೇಣಿ), ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.

ಎಪಿಎಲ್ ಸೇರಿದಂತೆ ಎಲ್ಲ ಕುಟುಂಬಗಳ ವಿವರಗಳನ್ನು ಆರೋಗ್ಯ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಆರೋಗ್ಯ ವಿಮಾ ಯೋಜನೆಗಳೊಂದಿಗೆ ಸಮೀಕರಣ ಮಾಡಿ ಪ್ರತಿಯೊಬ್ಬರಿಗೂ ಒಂದು ಸ್ಮಾರ್ಟ್ ಕಾರ್ಡ್ ಕೊಡಲಾಗುತ್ತದೆ. ಈ ಕಾರ್ಡಿನಲ್ಲಿ ವ್ಯಕ್ತಿಯ ವಿವರಗಳ ಜೊತೆಗೆ ಅವರಿಗೆ ಯಾವ ಕಾಯಿಲೆ ಅಥವಾ ಸಮಸ್ಯೆ ಇದೆ, ಅದಕ್ಕಾಗಿ ಯಾವ ಚಿಕಿತ್ಸೆ ಕೊಡಲಾಗುತ್ತದೆ, ಅದಕ್ಕೆ ಯಾವ ವಿಮಾ ಯೋಜನೆಗಳು ಅನ್ವಯ ಆಗುತ್ತದೆ ಎಂಬ ಮಾಹಿತಿ ಇರುತ್ತದೆ. ಈ ಕಾರ್ಡ್‌ನ್ನು ರಾಜ್ಯದ ಯಾವುದೇ ಸರ್ಕಾರಿ ಆಸ್ಪತ್ರೆಯಲ್ಲಿ ತೋರಿಸಿ ಚಿಕಿತ್ಸೆ ಪಡೆದು ಕೊಳ್ಳಬಹುದು. ಮೊದಲ ಹಂತದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಸೌಲಭ್ಯವನ್ನು ಜಾರಿಗೆ ತರಲಾಗುತ್ತಿದ್ದು ಹಂತ ಹಂತವಾಗಿ ಸರ್ಕಾರದ ವಿವಿಧ ಆರೋಗ್ಯ ಯೋಜನೆಗಳೊಂದಿಗೆ ಸಂಯೋಜನೆಗೊಂಡಿರುವ ಖಾಸಗಿ ಆಸ್ಪತ್ರೆಗಳಿಗೂ ಈ ಸೌಲಭ್ಯವನ್ನು ವಿಸ್ತರಿಸುವುದಾಗಿ ಸರ್ಕಾರ ಹೇಳಿದೆ. ನಿಜಕ್ಕೂ ಈ ಯೋಜನೆಯ ಉದ್ದೇಶ ಒಳ್ಳೆಯದೇ. ಆದರೆ ಸರ್ಕಾರಿ ಆಸ್ಪತ್ರೆಗಳ ಸ್ವರೂಪ ಉತ್ತಮಗೊಳ್ಳಬೇಕು.

*** ಉಚಿತ ಲ್ಯಾಪ್ ಟಾಪ್ ಯೋಜನೆ:** ಈ ವರ್ಷದಿಂದ ಎಂಜಿನಿಯರಿಂಗ್, ವೈದ್ಯಕೀಯ, ಪಾಲಿಟೆಕ್ನಿಕ್, ಪ್ರಥಮ ದರ್ಜೆ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ 1.5 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್ ಟಾಪ್ ನೀಡುವುದಾಗಿ ಮುಂಗಡ ಪತ್ರದಲ್ಲಿ ಹೇಳಲಾಗಿದೆ. ಉತ್ತರ ಪ್ರದೇಶದಲ್ಲಿ ಹಿಂದಿನ ಸರ್ಕಾರದ ಜನಪ್ರಿಯ ಯೋಜನೆಗಳಲ್ಲಿ ಈ ಯೋಜನೆಯು ಕೂಡ ಒಂದಾಗಿತ್ತೆಂಬುದನ್ನು ಇಲ್ಲಿ ಸ್ಮರಿಸಬಹುದು. ರಾಜ್ಯ ಸರ್ಕಾರದ ಈ ಯೋಜನೆ ನಿಜಕ್ಕೂ ಸ್ವಾಗತಾರ್ಹ. ಆದರೆ ಉತ್ತಮ ಕಂಪನಿಗಳಿಂದ ಗುಣಮಟ್ಟದ ಲ್ಯಾಪ್ ಟಾಪ್‌ಗಳನ್ನು ಅರ್ಹ ವಿದ್ಯಾರ್ಥಿ ಫಲಾನುಭವಿಗಳಿಗೆ ಮಾತ್ರ ಪೂರೈಸಬೇಕು. ಹಾಗೂ ಅವುಗಳನ್ನು ಬಳಸುವ ಕೌಶಲ್ಯವನ್ನು ಅವರಿಗೆ ಹೇಳಿಕೊಡಬೇಕು.

*** ಕರ್ನಾಟಕ ಶಾಲಾ ಶಿಕ್ಷಣ ನೀತಿ:** ಆಧುನಿಕ ಯುಗದಲ್ಲಿ ಸರ್ಕಾರಿ ಶಾಲೆಯ ಮಕ್ಕಳು ಖಾಸಗಿ ಇಂಗ್ಲೀಷ್ ಶಾಲೆಗಳ ಮಕ್ಕಳೊಂದಿಗೆ ಪೈಪೋಟಿ ನೀಡುವ ಮಟ್ಟಕ್ಕೆ ಬೆಳೆಯಬೇಕು, ಮುಚ್ಚಿ ಹೋಗುತ್ತಿರುವ ಕನ್ನಡ ಶಾಲೆಗಳನ್ನು ಉಳಿಸಬೇಕು, ಖಾಸಗಿ ಇಂಗ್ಲೀಷ್ ಶಾಲೆಗಳತ್ತ ಮಕ್ಕಳು ಮತ್ತು ಪೋಷಕರು ಆಕರ್ಷಿತರಾಗುವುದನ್ನು ತಡೆಗಟ್ಟುವುದರ ಜೊತೆಗೆ ಭಾಷಾ ಮಾಧ್ಯಮ ಮತ್ತು ಕಲಿಕಾ ಮಾಧ್ಯಮಗಳ ನಡುವಿನ ಗೊಂದಲಗಳಿಗೆ ತೆರೆ ಎಳೆಯಲು ಸರ್ಕಾರ 1ನೇ ತರಗತಿಯಿಂದ ಇಂಗ್ಲೀಷ್ ಬೋಧನೆ ಕಾರ್ಯಕ್ರಮ ರೂಪಿಸಿದೆ. ಶಾಲಾ ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಭದ್ರತೆಯ ಜೊತೆಗೆ ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರದ ಗುರಿ ಸಾಧಿಲು ಸುಧಾರಣಾ ಕ್ರಮವಾಗಿ ವಸ್ತುನಿಷ್ಠ ಪಾರದರ್ಶಕ ಮೂಲಸೌಕರ್ಯ, ಶುಲ್ಕ, ಬೋಧನಾ ಸಂಪನ್ಮೂಲಗಳ ನಿರ್ವಹಣೆ ಮತ್ತು ನಿಯಂತ್ರಣಗಳ ಕ್ರಮಗಳನ್ನೊಳಗೊಂಡ "ಕರ್ನಾಟಕ ಶಾಲಾ ಶಿಕ್ಷಣ ನೀತಿ" ಜಾರಿ ಮಾಡುವುದಾಗಿ ತಿಳಿಸಲಾಗಿದೆ. ಒಂದನೆ ತರಗತಿಯಿಂದ ಇಂಗ್ಲಿಷ್ ಕಲಿಕೆ ಉತ್ತಮ ನಡೆ ಎನ್ನಬಹುದು. ಪ್ರಾಥಮಿಕ ಶಾಲೆ ಆರಂಭದಿಂದಲೇ ಇಂಗ್ಲಿಷ್ ಕಲಿತರೆ ಉನ್ನತ ಶಿಕ್ಷಣದ ಹಂತಕ್ಕೆ ಬರುವ ವೇಳೆಗೆ ಗ್ರಾಮೀಣ ಭಾಗದ ವಿದ್ಯಾರ್ಥಿಯೂ ಪ್ರೌಢಿಮೆ ಸಾಧಿಸಬಹುದು. ಇದಕ್ಕಾಗಿ ಶಿಕ್ಷಕರ ಶೈಕ್ಷಣಿಕ ಗುಣಮಟ್ಟ ಉನ್ನತೀಕರಿಸಬೇಕು. ಮಕ್ಕಳಿಗೆ ಇಂಗ್ಲಿಷ್ ಕಲಿಸುವ ವ್ಯಾಮೋಹದಲ್ಲಿ ಕನ್ನಡ ಭಾಷೆಗೆ ಕುಂದುಂಟಾಗಬಾರದು.

*** 49 ಹೊಸ ತಾಲೂಕುಗಳ ರಚನೆ:** ಕಳೆದ ಹಲವಾರು ದಶಕಗಳಿಂದ ವಿವಿಧ ಜಿಲ್ಲೆಗಳ ದೊಡ್ಡ ದೊಡ್ಡ ಪಟ್ಟಣಗಳ ನಾಗರಿಕರ ಹೋರಾಟಕ್ಕೆ ಮನ್ನಣೆ ನೀಡಿರುವ ರಾಜ್ಯ ಸರ್ಕಾರ ಒಟ್ಟು 49 ಹೊಸ ತಾಲೂಕು ರಚನೆ ಮಾಡುವ ಘೋಷಣೆ ಮಾಡಿದೆ. ಎಲ್ಲವೂ ಅಂದುಕೊಂಡಂತೆ ಆದಲ್ಲಿ ರಾಜ್ಯದ ತಾಲೂಕುಗಳ ಸಂಖ್ಯೆ 225ಕ್ಕೆ ಏರಲಿದೆ. ಹಲವಾರು ಸಮಿತಿಗಳು ನೀಡಿದ ವರದಿ ಆಧರಿಸಿ ರಾಜ್ಯ ಸರ್ಕಾರ ಈ ನಿರ್ಧಾರಕ್ಕೆ ಬಂದಿದೆಯಾದರೂ ತಾಲೂಕು ಅಸ್ತಿತ್ವಕ್ಕೆ ಯಾವಾಗ ಬರಲಿದೆ ಎಂಬುದನ್ನು ಸ್ಪಷ್ಟಪಡಿಸಿಲ್ಲ. ಒಂದು ಅಂದಾಜಿನ ಪ್ರಕಾರ ಒಂದು ತಾಲೂಕು ರಚನೆ ಮಾಡಲು ಸರ್ಕಾರಕ್ಕೆ ಕನಿಷ್ಠ ನೂರು ಕೋಟಿ ರೂಪಾಯಿ ಬೇಕಾಗುತ್ತದೆ. ಹೀಗಾಗಿ ಹೊಸ ತಾಲೂಕುಗಳಿಗೆ 4900 ಕೋಟಿ ರೂಪಾಯಿಗಳ ಅಗತ್ಯವಿದೆ. ಆದರೆ ಇಷ್ಟೊಂದು ಹಣವನ್ನು ಪೂರೈಸಲು ಈಗಿನ ಸ್ಥಿತಿಯಲ್ಲಿ ಸರ್ಕಾರಕ್ಕೆ ಕಷ್ಟವಾಗಬಹುದು. ಏಕೆಂದರೆ, ಈ ಹಿಂದಿನ ಸರ್ಕಾರಗಳು ಘೋಷಣೆ ಮಾಡಿದ್ದ ಹೊಸ ತಾಲೂಕುಗಳಲ್ಲಿ ಮೂಲ ಸೌಕರ್ಯಗಳೇ ಇನ್ನೂ ಅಸ್ತಿತ್ವಕ್ಕೆ ಬಂದಿಲ್ಲ.



*** ಸಾಲುಮರದ ತಿಮ್ಮಕ್ಕ ವೃಕ್ಷ ಉದ್ಯಾನವನ :** ಮರಗಳೇ ತನ್ನ ಮಕ್ಕಳೆಂದು ತಿಳಿದು ಸಾಲು ಸಾಲು ಸಸಿಗಳನ್ನು ನೆಟ್ಟು ಅವುಗಳಿಗೆ ನೀರೆರದು ಬೆಳೆಸಿದ ಮಹಾತಾಯಿ ತಿಮ್ಮಕ್ಕನ ಹೆಸರಿನಲ್ಲಿ ವೃಕ್ಷ ಉದ್ಯಾನವನಗಳನ್ನು ನಿರ್ಮಿಸುವ ಯೋಜನೆಯನ್ನು ಸರ್ಕಾರ ಪ್ರಕಟಿಸಿದೆ. ಇದರನ್ವಯ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಸಾಲುಮರದ ತಿಮ್ಮಕ್ಕ ವೃಕ್ಷ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದೆ. ಮೊದಲ ಹಂತದಲ್ಲಿ ಅರಣ್ಯಭೂಮಿಯಲ್ಲಿ 50 ವೃಕ್ಷ ಉದ್ಯಾನವನಗಳನ್ನು ಅಭಿವೃದ್ಧಿ-ಪಡಿಸಲಾಗುವುದು. ವನಮಹೋತ್ಸವಕ್ಕಾಗಿ ಎತ್ತರದ ಹಾಗೂ ಉತ್ತಮ ಗುಣಮಟ್ಟದ 6 ಕೋಟಿ ಸಸಿಗಳನ್ನು ಬೆಳೆಸಲಾಗುವುದು. ನೀಲಗಿರಿ ಮರಗಳಿಗೆ ಪರ್ಯಾಯ ಬೆಳೆಯಾಗಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ 6 ಲಕ್ಷ ಶ್ರೀಗಂಧ ಸಸಿಗಳನ್ನು ಬೆಳೆಸಲು ಮತ್ತು 700 ಹೆಕ್ಟೇರ್‌ಗಳ ಶ್ರೀಗಂಧ ನೆಡುತೋಪುಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯ ಉದ್ದೇಶ ನಿಜಕ್ಕೂ ಒಳ್ಳೆಯದೆ. ನಗರ ಪ್ರದೇಶಗಳ ಸುತ್ತಮುತ್ತ ಇರುವ ಜಮಿನುಗಳಲ್ಲಿ ಖಾಸಗಿ ಬಡಾವಣೆಗಳು ತಲೆ ಎತ್ತುತ್ತಿವೆ. ಈ ಬಡಾವಣೆಗಳಲ್ಲಿ ಉದ್ಯಾನವನಕ್ಕೆ ಬಿಟ್ಟಿರುವ ಜಾಗದಲ್ಲಿ ವಿವಿಧ ಜಾತಿಯ ಆರೋಗ್ಯದಾಯಕ ಸಸಿಗಳನ್ನು ಮತ್ತು ಮರಗಳನ್ನು ಬೆಳೆಸಲು ಕ್ರಮ ಕೈಗೊಳ್ಳಬೇಕು. ಹಾಗೂ ಅದನ್ನು ವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸಬೇಕು. ಇದರಿಂದ ಅಲ್ಲಿಯ ನಿವಾಸಿಗಳಿಗೆ ಉತ್ತಮ ಪರಿಸರ ಸಿಗುತ್ತದೆ ಮಾತ್ರವಲ್ಲದೆ ನಗರಗಳು ಹಸಿರಿನಿಂದ ಕಂಗೊಳಿಸುತ್ತವೆ.

*** ತೇಜಸ್ವಿ ಪ್ರತಿಷ್ಠಾನ:** ಪರಿಸರ ಅಂಶಗಳ ಮೇಲೆ ಸಂಶೋಧನೆಯನ್ನು



ನಡೆಸಲು ಕಾದಂಬರಿಕಾರ ಪರಿಸರ ಪ್ರೇಮಿ ದಿವಂಗತ ಪೂರ್ಣಚಂದ್ರ ತೇಜಸ್ವಿಯವರ ಸ್ಮರಣಾರ್ಥ ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಸ್ಥಾಪಿಸಲು 5 ಕೋಟಿ ರೂ. ವೆಚ್ಚ ಮಾಡಲಾಗುವುದು ಎಂದು ಹೇಳಲಾಗಿದೆ. ಇಂದು ಪರಿಸರ ಕಲುಷಿತಗೊಳ್ಳುತ್ತಿದೆ. ನಗರಪ್ರದೇಶಗಳಂತೂ ಕೊಳಚೆ ಪ್ರದೇಶಗಳಿಂದ, ತ್ಯಾಜ್ಯವಸ್ತುಗಳಿಂದ, ಬಿಸಿಲಿನ ತಾಪದಿಂದ ನರಳುತ್ತಿವೆ. ಶುಚಿತ್ವದ ಪರಿಸರ ಮತ್ತು ಪರಿಶುದ್ಧ ಗಾಳಿ ಇಲ್ಲಿ ಸಿಗುವುದು ತುಂಬಾ ಕಷ್ಟಕರ. ಈ ಹಿನ್ನೆಲೆಯಲ್ಲಿ ಪರಿಸರದ ಮೇಲೆ ಸಂಶೋಧನೆಯನ್ನು ನಡೆಸಲು ಉತ್ತೇಜಿಸುವ ತೀರ್ಮಾನ ಪ್ರಶಂಸಾರ್ಹವೇ. ಸಂಶೋಧನಾ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಕಟ್ಟು ನಿಟ್ಟಾಗಿ ಜಾರಿಯಲ್ಲಿ ತರಬೇಕು. ಆಗ ಮಾತ್ರ ಈ ಪ್ರತಿಷ್ಠಾನದ ಉದ್ದೇಶ ಸಾರ್ಥಕವಾಗಬಲ್ಲದು.

* **ಗ್ರಾಮೀಣ ರಸ್ತೆ ನಿರ್ವಹಣಾ ನೀತಿ:** ಗ್ರಾಮೀಣ ಪ್ರದೇಶದಲ್ಲಿ ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಅನುದಾನವನ್ನು ನೀಡಿದ್ದು, ಗ್ರಾಮೀಣ ರಸ್ತೆ ಅಭಿವೃದ್ಧಿ ಸೂಚಿಯ ಮಾರ್ಗಸೂಚಿಯಂತೆ ಗ್ರಾಮೀಣ ರಸ್ತೆ ನಿರ್ವಹಣಾ ನೀತಿಯನ್ನು ಜಾರಿಗೊಳಿಸುವುದಾಗಿ ಹೇಳಲಾಗಿದೆ. ನಮ್ಮ ಹೊಲ ನಮ್ಮ ದಾರಿ ಯೋಜನೆಯಡಿ ರಾಜ್ಯದ ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 25 ಕಿಲೋ ಮೀಟರ್ ಉದ್ದದ ಹೊಲಗಳಿಗೆ ಹೋಗುವ ಮಣ್ಣಿನ ರಸ್ತೆಯನ್ನು ಮನರೇಗಾ ವತಿಯಿಂದ ರೈತರ ಸಹಭಾಗಿತ್ವದೊಂದಿಗೆ ನಿರ್ಮಿಸಲು 100 ಕೋಟಿ ರೂಪಾಯಿ ನೀಡಲು ನಿರ್ಧರಿಸಲಾಗಿದೆ.

* **ಮಾತೃಪೂರ್ಣ ಯೋಜನೆ:** ರಾಜ್ಯದ ಮೂವತ್ತು ಜಿಲ್ಲೆಗಳಲ್ಲಿ ಮಾತೃಪೂರ್ಣ ಯೋಜನೆಯನ್ನು ಜುಲೈ ತಿಂಗಳಿನಿಂದ ಜಾರಿಗೆ ತರುವುದಾಗಿ ಹೇಳಲಾಗಿದೆ. ಪೌಷ್ಟಿಕಾಂಶ ಕೊರತೆಯನ್ನು ನೀಗಿಸಲು ಈ ಯೋಜನೆಯಡಿ ಗರ್ಭಿಣಿಯರು, ಬಾಣಂತಿಯರಿಗೆ ಸಿದ್ಧಪಡಿಸಿದ ಬಿಸಿ ಊಟ ನೀಡಲಾಗುವುದು ಮತ್ತು ಇದಕ್ಕಾಗಿ 302 ಕೋಟಿ ರೂ ಒದಗಿಸಲಾಗುವುದೆಂದು ಮುಖ್ಯಮಂತ್ರಿಯವರು ಹೇಳಿದ್ದಾರೆ. ಎಷ್ಟು ದಿನ ಆಹಾರವನ್ನು ಪೂರೈಸಲಾಗುತ್ತದೆಂಬುದರ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ.

* **ಪೊಲೀಸ್ ಆ್ಯಪ್** : ಪೊಲೀಸ್ ಇಲಾಖೆಯನ್ನು ಮತ್ತಷ್ಟು ಜನಸ್ನೇಹಿಯಾಗಿಸಲು ಗೃಹ ಇಲಾಖೆ ಹೊಸ ಆ್ಯಪ್ ಜಾರಿಗೊಳಿಸಲಿದೆ ಎಂದು ಮುಂಗಡಪತ್ರದಲ್ಲಿ ತಿಳಿಸಲಾಗಿದೆ. ವಿಶೇಷವಾಗಿ ಮಕ್ಕಳು ಮತ್ತು ಮಹಿಳೆಯರ ಮೇಲೆ ನಡೆಯುವ ಅಪರಾಧ ಕೃತ್ಯಗಳನ್ನು ತಡೆಯುವ ನಿಟ್ಟಿನಲ್ಲಿ ಪೊಲೀಸ್ ಆ್ಯಪ್ ಸಿದ್ಧಪಡಿಸಲಾಗುತ್ತಿದೆ. ಮಹಿಳೆಯರು ಮತ್ತು ಮಕ್ಕಳು ತಮ್ಮ ಸ್ಮಾರ್ಟ್ ಫೋನ್‌ಗೆ ಈ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಸಂಕಷ್ಟದ ಸಂದರ್ಭಗಳಲ್ಲಿ ಈ ಆ್ಯಪ್‌ಗಳ ಮೂಲಕ ತಕ್ಷಣ ಪೊಲೀಸ್‌ರಿಗೆ ಮಾಹಿತಿ ನೀಡಬಹುದು. ಆ್ಯಪ್ ಮೂಲಕ ಮಾಹಿತಿ ಪಡೆಯುವ ಪೊಲೀಸ್‌ರು ಅಪರಾಧ ತಡೆಗೆ ತ್ವರಿತವಾಗಿ ಸ್ಪಂದಿಸಲು ಸಾಧ್ಯವಾಗುತ್ತದೆ ಎಂಬ ಉದ್ದೇಶದಿಂದ ಈ ಯೋಜನೆಯನ್ನು ರೂಪಿಸಲಾಗಿದೆ. ಆದರೆ ಎಲ್ಲಾ ಮಕ್ಕಳು ಮತ್ತು ಮಹಿಳೆಯರು ಸ್ಮಾರ್ಟ್ ಫೋನ್ ಇಟ್ಟುಕೊಳ್ಳಲು ಸಾಧ್ಯವೇ ಎಂಬುದನ್ನು ಯೋಚಿಸಬೇಕು.

* **ವೆಬ್ ಅಪ್ಲಿಕೇಷನ್:** ಸಣ್ಣ ಪುಟ್ಟ ಕೆಲಸಗಳಿಗೂ ಅಲೆಯುತ್ತಿರುವ ಸಾರ್ವಜನಿಕರ ಪರದಾಟ ತಪ್ಪಿಸುವುದಕ್ಕಾಗಿ ನೀರು, ಒಳಚರಂಡಿ ಸಂಪರ್ಕ ಅನುಮತಿ, ಕಟ್ಟಡ ನಿರ್ಮಾಣ, ಉದ್ದಿಮೆ ಪರವಾನಗಿ, ಆಸ್ತಿಗಳ ಮಾಲೀಕತ್ವದ ಹಕ್ಕು ವರ್ಗಾವಣೆ ಮತ್ತು ಸಾರ್ವಜನಿಕ ದೂರುಗಳಿಗೆ ಸಂಬಂಧಿಸಿದಂತೆ ಆನ್ ಲೈನ್ ಸ್ವೀಕೃತಿ, ಅನುಮೋದನೆ ಸೇವೆ ಸುಗಮಗೊಳಿಸಲು ವೆಬ್ ಅಪ್ಲಿಕೇಷನ್ ಜಾರಿಗೊಳಿಸುವುದಾಗಿ ಹೇಳಲಾಗಿದೆ. ಆಯ್ದ 10 ಪಟ್ಟಣಗಳಲ್ಲಿ ಮೈಕ್ರೋ ಪ್ಲಾನಿಂಗ್ ಯೋಜನೆಯಲ್ಲಿ ಪಾರದರ್ಶಕತೆ ಮತ್ತು ಕಾಲಮಿತಿಯಲ್ಲಿ ಸೇವೆಗಳನ್ನು ಒದಗಿಸಲು ಕಟ್ಟಡ ಪರವಾನಗಿ ಮತ್ತು ಲೇಔಟ್ ಅನುಮೋದನೆಯನ್ನು ಆನ್‌ಲೈನ್ ವ್ಯವಸ್ಥೆ ಜಾರಿಗೊಳಿಸುತ್ತಿದೆ ಎನ್ನಲಾಗಿದೆ. ನಿಜಕ್ಕೂ ಇದು ಉತ್ತಮ ಯೋಜನೆ. ಈ ಯೋಜನೆಯನ್ನು ಆದಷ್ಟು ಬೇಗ ಅನುಷ್ಠಾನದಲ್ಲಿ ತರುವುದು



ಒಳ್ಳೆಯದು. ಆದರೆ ಅನುಮೋದನೆ ನೀಡುವಾಗ ಖಾಸಗಿ ಬಡಾವಣೆಗಳು ಅಲ್ಲಿನ ನಿವಾಸಿಗಳಿಗೆ ಮೂಲಭೂತ ಸೌಕರ್ಯಗಳನ್ನು ಸಂಪೂರ್ಣವಾಗಿ ನೀಡಿರುವುದನ್ನು ಖಚಿತಪಡಿಸಿಕೊಳ್ಳಬೇಕು.

* **ರಾಷ್ಟ್ರೀಯ ಸರ್ಫಿಂಗ್:** ಸಮುದ್ರ ತೀರದತ್ತ ಪ್ರವಾಸಿಗರನ್ನು ಆಕರ್ಷಿಸಲು ರಾಷ್ಟ್ರೀಯ ವಾರ್ಷಿಕ ಸರ್ಫಿಂಗ್ ಉತ್ಸವವನ್ನು ಘೋಷಿಸಿದೆ. ಸಾಂಪ್ರದಾಯಿಕ ಪ್ರವಾಸಿತಾಣಗಳಿಗೆ ಜನರನ್ನು ಆಕರ್ಷಿಸುವುದಕ್ಕಿಂತ ಸಾಹಸಿ ಪ್ರವೃತ್ತಿಯ ಯುವ ಜನಾಂಗವನ್ನು ರಾಜ್ಯದತ್ತ ಸೆಳೆಯುವಂತಹ ಯೋಜನೆಗಳಿಗೆ ಆದ್ಯತೆ ನೀಡುವುದು ಇದರ ಉದ್ದೇಶವಾಗಿದೆ. ಇದರ ಅಂಗವಾಗಿ ಕರಾವಳಿ ತೀರವನ್ನು ಅಂತಾರಾಷ್ಟ್ರೀಯ ಸರ್ಫಿಂಗ್ ತಾಣವಾಗಿ ಅಭಿವೃದ್ಧಿ ಪಡಿಸಲು ಮಂಗಳೂರಿನ ಸಸಿಹಿತ್ಲು ಬೀಚ್‌ನಲ್ಲಿ ರಾಷ್ಟ್ರೀಯ ವಾರ್ಷಿಕ ಸರ್ಫಿಂಗ್ ಉತ್ಸವವನ್ನು ಈ ವರ್ಷದಿಂದ ಏರ್ಪಡಿಸಲು ಉದ್ದೇಶಿಸಲಾಗಿದೆ. ಅಲ್ಲದೆ, ಪ್ರವಾಸೋದ್ಯಮ ಅಭಿವೃದ್ಧಿಗೆ ಸ್ವಯಂ ಪ್ರೇರಿತವಾಗಿ ತೊಡಗಿಕೊಳ್ಳುವವರಿಗೆ ಉತ್ತೇಜನ ನೀಡಲು ಮತ್ತು ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರಿಗೆ ಅಗತ್ಯ ಮಾರ್ಗದರ್ಶನ ನೀಡುವವರ ಸಂಖ್ಯೆ ಹೆಚ್ಚಿಸಲು 'ಆತಿಥ್ಯ' ಯೋಜನೆಯನ್ನು ರೂಪಿಸಿದ್ದು, ಅದಕ್ಕಾಗಿ 5 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಜತೆಗೆ, ಮೈಸೂರಿನಲ್ಲಿ ಏರೋ ಸ್ಪೋರ್ಟ್ಸ್ ಹಬ್ ರೂಪಿಸಲಾಗುತ್ತದೆ. ಆದರೆ ಇದು ಎಷ್ಟರಮಟ್ಟಿಗೆ ಯುವ ಜನತೆಯನ್ನು ಆಕರ್ಷಿಸಬಲ್ಲದು ಎಂಬುದನ್ನು ಕಾಯ್ದುನೋಡಬೇಕು. ಆದಾಯ ಗಳಿಕೆ, ಉದ್ಯೋಗ ಸೃಷ್ಟಿ ಮತ್ತು ವಿದೇಶಿ ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ಮತ್ತಷ್ಟು ಪರಿಣಾಮಕಾರಿ ಯೋಜನೆಗಳನ್ನು ಪ್ರವಾಸೋದ್ಯಮದ ಅಭಿವೃದ್ಧಿಗೆ ಕೈಗೊಂಡಿದ್ದರೆ ಚೆನ್ನಾಗಿರುತ್ತಿತ್ತು.

(51ನೇ ಪುಟಕ್ಕೆ)

ಉದ್ಯೋಗದಾತರು ಮತ್ತು ಕಾರ್ಮಿಕ ಕಾನೂನುಗಳ ಜಾರಿ ಪ್ರಾಧಿಕಾರಗಳ ನಡುವಿನ ಏಕಬಿಂದು ಸಂಪರ್ಕ ಸಾಧನವಾಗಿ ಶ್ರಮ ಸುವಿಧಾ ಪೋರ್ಟಲ್ ರಚಿಸಲಾಗಿದ್ದು ಆ ಮೂಲಕ ಉದ್ಯೋಗದಾತರಿಗೆ ಗುರುತಿನ ಸಂಖ್ಯೆ – ಲಿನ್ ನೀಡಲಾಗುತ್ತಿದೆ.

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಅಕ್ಟೋಬರ್ 16, 2014 ರಂದು ಈ ಯೋಜನೆಗೆ ಚಾಲನೆ ನೀಡಿದ್ದಾರೆ.

ಉದ್ದಿಮೆಗಳಿಗೆ ಇಎಸ್ಐಸಿ, ಇಪಿಎಫ್ಓ, ಸಿಎಲ್‌ಸಿ(ಸಿ), ಡಿಜಿಎಂಎಸ್ ಮೊದಲಾದ ಕಾರ್ಮಿಕ ಕಾನೂನು ಜಾರಿ ಪ್ರಾಧಿಕಾರಗಳು ನೀಡುತ್ತಿದ್ದ ಬೇರೆ ಬೇರೆ ನಂಬರ್‌ಗಳ ಬದಲಾಗಿ ಒಂದು ನಂಬರ್ ನೀಡಲಾಗುತ್ತಿದೆ. ಶ್ರಮಸುವಿಧಾ ಪೋರ್ಟಲನ್ನು

## ನಿಮಗಿದು ತಿಳಿದಿದೆಯೇ?

URL https://ShramSuvidha.Gov.in ಮೂಲಕ ತಲುಪಬಹುದಾಗಿದೆ.

ಉದ್ದಿಮೆದಾರರು ಈ ಮುಂದಿನ ತಮ್ಮ ಎಲ್ಲ ರೀತಿಯ ನೊಂದಣಿ ಮತ್ತು ಕಾರ್ಮಿಕ ಕಾಯ್ದೆಗಳಿಗೆ ಸಂಬಂಧಪಟ್ಟ ಎಲ್ಲ ವಿವರ ಸಲ್ಲಿಕೆಗಳನ್ನು ಏಕ ಆನ್‌ಲೈನ್ ಗವಾಕ್ಷ ಮಾರ್ಗವಾಗಿ ಶ್ರಮ ಸುವಿಧಾ ಪೋರ್ಟಲ್ ಮೂಲಕ ಮಾಡಬಹುದಾಗಿದೆ.

1. ವೇತನ ಪಾವತಿ ಕಾಯ್ದೆ 1936
2. ಕನಿಷ್ಠ ವೇತನ ಕಾಯ್ದೆ 1948
3. ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ನಿವಾರಣೆ) 1970
4. ಮಾತೃತ್ವ ಪ್ರಯೋಜನ ಕಾಯ್ದೆ 1961
5. ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ (ಉದ್ಯೋಗ ನಿಯಂತ್ರಣ ಮತ್ತು ಸೇವಾ ಸ್ಥಿತಿ) ಕಾಯ್ದೆ 1996
6. ಬೋನಸ್ ಪಾವತಿ ಕಾಯ್ದೆ 1965
7. ಅಂತಾರಾಜ್ಯ ವಲಸೆ ಕಾರ್ಮಿಕರು (ಉದ್ಯೋಗ ನಿಯಂತ್ರಣ ಮತ್ತು ಸೇವಾ ಸ್ಥಿತಿ) ಕಾಯ್ದೆ 1979
8. ಔದ್ಯೋಗಿಕ ವಿವಾದ ಕಾಯ್ದೆ 1947

ಈ ಮೊದಲು ಉದ್ಯೋಗದಾತರು ಪ್ರತಿ ತಿಂಗಳೂ ವಿವರಗಳನ್ನು ಇಎಸ್ಐಸಿ ಮತ್ತು ಇಪಿಎಫ್ಓಗಳಿಗೆ ಸಲ್ಲಿಸಬೇಕಾಗಿತ್ತು. ಈಗ, ಇವುಗಳನ್ನು ಒಂದೇ ಬಾರಿ ಶ್ರಮ ಸುವಿಧಾ ಪೋರ್ಟಲ್‌ನಲ್ಲಿ ಸಲ್ಲಿಸಬಹುದಾಗಿದೆ. ❑

## ರಾಜ್ಯ ಮುಂಗಡ ಪತ್ರದ ನೂತನ ಕಾರ್ಯಕ್ರಮಗಳು

(50ನೇ ಪುಟದಿಂದ)

*** ಬೆಳ್ಳಿ ಶೃಂಗ:** ಉತ್ತರ ಕರ್ನಾಟಕದ ಐತಿಹಾಸಿಕ ತಾಣಗಳಾದ ಲಕ್ಕುಂಡಿ, ಹಂಪಿ, ಬಾದಾಮಿ, ಪಟ್ಟದ ಕಲ್ಲು, ಐಹೊಳೆ, ಬನವಾಸಿ ಸ್ಥಳಗಳನ್ನು ಅಭಿವೃದ್ಧಿಗೊಳಿಸಲು ಕಾರವಾರ * ವಿಜಯಪುರ, ಬೆಳಗಾವಿ – ಬಳ್ಳಾರಿ ಹಾಗೂ ಬೀದರ್ * ಕೊಪ್ಪಳದವರೆಗೆ ಒಂದು ಪ್ರವಾಸಿ 'ಬೆಳ್ಳಿ ಶೃಂಗ' ಸ್ಥಾಪಿಸಲು ಉದ್ದೇಶಿಸಲಾಗಿದೆ. ಇವುಗಳನ್ನು ಪುನಶ್ಚೇತನ–ಗೊಳಿಸುವುದರೊಂದಿಗೆ ಅಲ್ಲಿ ಪ್ರವಾಸಿಗರು ತಂಗಲು ಸುಸಜ್ಜಿತವಾದ ಅತಿಥಿಗೃಹಗಳು, ಕ್ಯಾಂಟಿನ್ ವ್ಯವಸ್ಥೆ, ಆಕರ್ಷಕ ಉದ್ಯಾನವನಗಳು ಮತ್ತಿತರ ಮೂಲ ಸೌಕರ್ಯಗಳನ್ನು ಕಲ್ಪಿಸಿದರೆ ಆ ಸ್ಥಳಗಳಿಗೆ ಮತ್ತಷ್ಟು ಮೆರಗು ಬರುತ್ತದೆ.

*** ಏಕೀಕೃತ ಸರ್ಕಾರಿ ವ್ಯಾಜ್ಯ ನಿರ್ವಹಣೆ:** ಸರ್ಕಾರದ ವ್ಯಾಜ್ಯಗಳ ಮೇಲ್ವಿಚಾರಣೆ, ನಿರ್ವಹಣೆ, ನಿಯಂತ್ರಣ ಹಾಗೂ ಕಾನೂನು ಅಧಿಕಾರಿಗಳ ಕೆಲಸ ಮತ್ತು ಕಾರ್ಯ ನಿರ್ವಹಣೆ ಮೇಲ್ವಿಚಾರಣೆಗಾಗಿ ಕರ್ನಾಟಕ ಏಕೀಕೃತ ಸರ್ಕಾರಿ ವ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಜಾರಿಗೊಳಿಸಲು ತೀರ್ಮಾನಿಸಲಾಗಿದೆ.



*** ದೃಷ್ಟಿ ಪರೀಕ್ಷೆ ಯೋಜನೆ:** ಇದೇ ಮೊದಲ ಬಾರಿಗೆ ಶಾಲಾ ಮಕ್ಕಳ ದೃಷ್ಟಿ ದೋಷ ಪತ್ತೆ ಹಚ್ಚಿ, ಆರಂಭಿಕ ಹಂತದಲ್ಲೇ ಅವರಿಗೆ ಚಿಕಿತ್ಸೆ ಒದಗಿಸಲು ಅನುವಾಗುವಂತೆ ರಾಜ್ಯ ಸರ್ಕಾರ 'ದೃಷ್ಟಿ ಪರೀಕ್ಷೆ' ಯೋಜನೆಯನ್ನು ಜಾರಿಗೊಳಿಸುತ್ತಿರುವುದಾಗಿ ಹೇಳಿದೆ. ದೃಷ್ಟಿದೋಷ ಹೊಂದಿದ ಮಕ್ಕಳಿಗೆ ಕನ್ನಡಕ ವಿತರಣೆಯನ್ನು ಸರ್ಕಾರವೇ ಮಾಡುವುದಾಗಿ ತಿಳಿಸಿದೆ.

*** ಕೌಶಲಾಭಿವೃದ್ಧಿ ಮಿಷನ್:** ಯುವ ಜನತೆಯನ್ನು ಮತ್ತಷ್ಟು ಕೌಶಲಯುಕ್ತರನ್ನಾಗಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದ್ದು, ಇದಕ್ಕಾಗಿ 200 ಕೋಟಿ ಅನುದಾನದೊಂದಿಗೆ ಕೌಶಲಾಭಿವೃದ್ಧಿ ಮಿಷನ್ ಸ್ಥಾಪಿಸುವುದಾಗಿ ಘೋಷಿಸಿದೆ. ಈ ಯೋಜನೆಯಡಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ 'ಕೌಶಲ ವಿಶ್ವವಿದ್ಯಾಲಯವು' ಸ್ಥಾಪನೆಗೊಳ್ಳಲಿದೆ. ಇದರಲ್ಲಿ ವೃತ್ತಿಪರ ತರಬೇತಿ, ತರಬೇತುದಾರರ ತರಬೇತಿ, ಪಠ್ಯಕ್ರಮದ ಅಭಿವೃದ್ಧಿ ಇತ್ಯಾದಿಗಳ ಸಂಶೋಧನೆಗೂ ಉತ್ತೇಜನ ನೀಡಲಾಗುತ್ತದೆ.

*** ಕಂದಾಯ ಇಲಾಖೆ ಡಿಜಿಟಲ್:** ರೈತರೊಂದಿಗೆ ಒಡನಾಟ ಹೊಂದಿರುವ ಕಂದಾಯ ಇಲಾಖೆಯನ್ನು ಡಿಜಿಟಲೀಕರಣ ಮಾಡಲು ಆಯವ್ಯಯದಲ್ಲಿ ಘೋಷಿಸಲಾಗಿದೆ. ಡಿಜಿಟಲ್ ಭೂ ದಾಖಲೆಗಳ ನಿರ್ವಹಣಾ ಯೋಜನೆಯಡಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ಎಲ್ಲ ತಾಲೂಕುಗಳ ಹಳೇ ದಾಖಲೆ ಕೊಠಡಿ ಆಧುನೀಕರಣ, ಎಲ್ಲ ತಾಲೂಕುಗಳಲ್ಲಿರುವ ಟಿಪ್ಪಣಿಗಳನ್ನು ಎನ್‌ಐಸಿ ಅಭಿವೃದ್ಧಿಪಡಿಸಿದ ಭೂ ನಕ್ಷೆ ಅಥವಾ ಕೊಲ್ಯಾಬ್ ಲ್ಯಾಂಡ್ ಸಾಫ್ಟ್‌ವೇರ್ ಬಳಸಿ ಡಿಜಿಟಲೀಕರಣ ಮಾಡಲು ತೀರ್ಮಾನಿಸಲಾಗಿದೆ.

ಹೀಗೆ ಅನೇಕ ಯೋಜನೆಗಳನ್ನು ರಾಜ್ಯಸರ್ಕಾರ ತನ್ನ 2017–18ರ ಮುಂಗಡ ಪತ್ರದಲ್ಲಿ ಘೋಷಣೆ ಮಾಡಿದೆ. ಈ ಎಲ್ಲಾ ಯೋಜನೆಗಳು ಅರ್ಥ ಪೂರ್ಣವಾಗಿ ಕಾರ್ಯರೂಪಕ್ಕೆ ಬಂದಾಗ ಮಾತ್ರ ಉದ್ದೇಶ ಸಾರ್ಥಕವಾಗಬಲ್ಲದು. ❑

# ವಾರ್ತಾ ವಿಶೇಷ

ಮುಖ್ಯವಾಗಿ ಕೆಳಹಂತದ ಹಾಗೂ ಸೌಲಭ್ಯರಹಿತ ಜನರನ್ನೊಳಗೊಂಡಂತೆ ಸರ್ವರಿಗೂ ಆರೋಗ್ಯ ಸೇವೆ ನೀಡುವ ಗುರಿಯನ್ನು ರಾಷ್ಟ್ರೀಯ ಆರೋಗ್ಯ ನೀತಿ–2017 ಹೊಂದಿದೆ ಎಂದು ಆರೋಗ್ಯ ಸಚಿವ ಶ್ರೀ ಜೆ.ಪಿ. ನಡ್ಡಾ ತಿಳಿಸಿದ್ದಾರೆ. ಸಂಸತ್ತಿನ ಉಭಯ ಸದನಗಳಲ್ಲಿ ಹೇಳಿಕೆ ನೀಡಿದ ಸಚಿವರು, ನಿರ್ದಿಷ್ಟ ಕಾಲಮಿತಿಯೊಳಗೆ, ಸಾರ್ವಜನಿಕ ಆರೋಗ್ಯದ ಮೇಲಿನ ವೆಚ್ಚವನ್ನು ಜಿಡಿಪಿಯ ಶೇಕಡ 2.5 ಕ್ಕೆ ಹೆಚ್ಚಿಸುವ ಪ್ರಸ್ತಾವವನ್ನು ರಾಷ್ಟ್ರೀಯ ಆರೋಗ್ಯ ನೀತಿ ಹೊಂದಿದೆ ಎಂದರು. ಆರ್ಥಿಕ ರಕ್ಷಣೆ ದೃಷ್ಟಿಯಿಂದ ಎಲ್ಲ ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಔಷಧ, ರೋಗನಿರ್ಣಯ ಪರೀಕ್ಷೆ, ಹಾಗೂ ತುರ್ತು ಸೇವೆ ಮತ್ತು ಉತ್ತಮ ಆರೋಗ್ಯ ಸೇವೆ ಒದಗಿಸಲಾಗುವುದು ಎಂದರು. 2025 ರೊಳಗೆ ಜನನ ಸಂದರ್ಭದ ಜೀವಿತಾವಧಿ ನಿರೀಕ್ಷೆ 67.5 ರಿಂದ 70 ಕ್ಕೆ ಏರುವ ನಿರೀಕ್ಷೆಯಿದೆ. ಶಿಶುಮರಣ ಪ್ರಮಾಣವನ್ನು 2019ರ ವೇಳೆಗೆ 28 ಕ್ಕೆ ಇಳಿಸುವ ಗುರಿಯನ್ನು ನೂತನ ಆರೋಗ್ಯ ನೀತಿ ಹೊಂದಿದೆ. 2018 ರೊಳಗೆ ಕುಷ್ಠರೋಗವನ್ನು ನಿವಾರಿಸುವ ಉದ್ದೇಶವಿದೆ. ಮೇಕ್ ಇನ್ ಇಂಡಿಯಾ ಯೋಜನೆಯಡಿ ಔಷಧಗಳ ಉತ್ಪಾದನೆ, ವೈದ್ಯಕೀಯ ಶಿಕ್ಷಣದ ಸುಧಾರಣೆಯ ಉದ್ದೇಶವನ್ನೂ ನೂತನ ಆರೋಗ್ಯ ನೀತಿ ಒಳಗೊಂಡಿದೆ ಎಂದು ಆರೋಗ್ಯ ಸಚಿವರು ವಿವರಿಸಿದರು.

* * *

ದೇಶದ ಆರು ರಾಜ್ಯಗಳ ನಗರಗಳಲ್ಲಿ ವಾಸವಾಗಿರುವ ಕಡು ಬಡವರಿಗೆ ಕೈಗೆಟಕುವ ದರದಲ್ಲಿ ಒಂದು ಲಕ್ಷ 18 ಸಾವಿರ ಮನೆ ನಿರ್ಮಾಣ ಮಾಡುವ ಯೋಜನೆಗೆ ಕೇಂದ್ರ ವಸತಿ ಮತ್ತು ಬಡತನ ನಿರ್ಮೂಲನಾ ಸಚಿವಾಲಯ ಅನುಮೋದನೆ ನೀಡಿದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಕೇಂದ್ರ ಸರ್ಕಾರದ ಐದು ಸಾವಿರದ 773 ಕೋಟಿ ಜೊತೆಗೆ ಒಂದು ಸಾವಿರದ 816 ಕೋಟಿ ರೂಪಾಯಿ ವೆಚ್ಚದಲ್ಲಿ ಕರ್ನಾಟಕ, ಮಧ್ಯಪ್ರದೇಶ, ಬಿಹಾರ್, ಜಾರ್ಖಂಡ್‌ಮತ್ತು ಒಡಿಶಾ ರಾಜ್ಯಗಳ ಕಡುಬಡವರಿಗೆ ವಸತಿ ಸೌಕರ್ಯ ಕಲ್ಪಿಸಲು ಕೇಂದ್ರ ಅನುಮತಿ ನೀಡಿದೆ ಎಂದು ನಗರಾಭಿವೃದ್ಧಿ ಸಚಿವ ಶ್ರೀ ಎಂ. ವೆಂಕಯ್ಯ ನಾಯ್ಡು ತಿಳಿಸಿದ್ದಾರೆ.

* * *

ಕರ್ನಾಟಕದಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡುವ ಕೂಲಿ ಕಾರ್ಮಿಕರ ವೇತನವನ್ನು 224 ರೂಪಾಯಿಗಳಿಂದ 236 ರೂಪಾಯಿಗಳಿಗೆ ಹೆಚ್ಚಿಸಲಾಗುವುದು. ಮಳೆ ಬಿದ್ದು ಕೃಷಿ ಚಟುವಟಿಕೆ ಆರಂಭವಾಗುವವವರೆಗೆ ಉದ್ಯೋಗ ನೀಡಲಾಗುವುದು. ಕಾಮಗಾರಿ ಸ್ಥಳದಲ್ಲಿ ಕೆಲಸಗಾರರ ಮಕ್ಕಳಿಗೆ ಸೂಕ್ತ ಆರೈಕೆ, ವೈದ್ಯಕೀಯ ವ್ಯವಸ್ಥೆ ಒದಗಿಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಸಚಿವ ಶ್ರೀ ಎಚ್. ಕೆ. ಪಾಟೀಲ್ ಇತ್ತೀಚೆಗೆ ಸುದ್ದಿಗಾರರಿಗೆ ತಿಳಿಸಿದ್ದಾರೆ. ❑


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.230/-; 2 yrs, Rs.430/- ; 3 yrs, Rs.610/-

Bal Bharati : 1 yr. Rs.160/-; 2 yrs, Rs.300/- ; 3 yrs, Rs.420/-

**(Circle the magazine of your choice and the period of subscription)**

DD/PO/MO No.________________________________________ date ________________

Name (in block letters) : ____________________________________________

Subscriber's profile : Student / Academician / Institution / Others

Address : ____________________________________________

____________________________________________

PIN : ______________________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, Ministry of Information & Broadcasting, Room No. 48-53, Soochna Bhawan, CGO Complex, Lodhi Road, New Delhi * 110 003.

Please allow us 4 to 6 weeks for the dispatch of the first issue.
P.S. : For Renewal / change in address, please quote your subscription number

**To Subscribe Online**
Log on to
**http://publicationsdivision.nic.in/**,
*in collaboration with* **bharatkosh.gov.in**